ಕರ್ನಾಟಕ ಸರ್ಕಾರ

# ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ

ವಿಷಯ : ಪ್ರಥಮ ಭಾಷೆ ಕನ್ನಡ

# ಆರನೇ ತರಗತಿ

# ಕಲಿಕಾಫಲ ಆಧಾರಿತ ಮೌಲ್ಯಾಂಕನ ಪ್ರಶ್ನೆಕೋಠಿ








ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
ಬನಶಂಕರಿ 3ನೇ ಹಂತ, ಬೆಂಗಳೂರು - 560085
ಮತ್ತು
ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಮಂಡ್ಯ

| ಪರಿಕಲ್ಪನೆ ಮತ್ತು ಮಾರ್ಗದರ್ಶನ | |
|---|---|
| **ಶ್ರೀಮತಿ ರಶ್ಮಿ ಮಹೇಶ್.V. ಭಾ.ಆ.ಸೇ.**<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು<br>ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ | |
| **ಶ್ರೀಮತಿ ಡಾ. ವಿದ್ಯಾಕುಮಾರಿ ಭಾ. ಆ. ಸೇ.**<br>**ರಾಜ್ಯ ಯೋಜನಾ ನಿರ್ದೇಶಕರು**<br>ಸಮಗ್ರ ಶಿಕ್ಷಣ ಇಲಾಖೆ, ಬೆಂಗಳೂರು | **ಶ್ರೀಮತಿ ಅನಿತಾ ನಾಜರೆ**<br>**ನಿರ್ದೇಶಕರು**<br>DSERT ಬೆಂಗಳೂರು |
| **ಡಯಟ್ ಸಹಕಾರ** | |
| **ಶ್ರೀ ಯೋಗೇಶ್.ಕೆ**<br>ಪ್ರಾಂಶುಪಾಲರು<br>ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಮಂಡ್ಯ | **ಶ್ರೀ ಚಲುವರಾಜು**<br>ನೋಡಲ್ ಅಧಿಕಾರಿ<br>ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಮಂಡ್ಯ |
| **ಸಂಯೋಜನೆ** | |
| **ಶ್ರೀಮತಿ ರಾಧಾ .P**<br>ಹಿರಿಯ ಸಹಾಯಕ ನಿರ್ದೇಶಕರು<br>DSERT ಬೆಂಗಳೂರು | |

| | ರಚನಾ ಸಂಪನ್ಮೂಲ ತಂಡ | ಪರಿಷ್ಕರಣಾ ಸಂಪನ್ಮೂಲ ತಂಡ |
|---|---|---|
| 1 | **ಶ್ರೀ ಕೆ .ಆರ್ .ಸತೀಶ**<br>**ಸ. ಹಿ. ಪ್ರಾ. ಶಾಲೆ, ಬೇಬಿ,**<br>**ಪಾಂಡವಪುರ ತಾ.** | **ಶ್ರೀ. ನಾಗಮಣಿ. D**<br>**ಸ.ಹಿ.ಪ್ರಾ. ಶಾಲೆ, ಚಾಪುರದೊಡ್ಡಿ,**<br>**ಮದ್ದೂರು ತಾ.** |
| 2 | **ಶ್ರೀ. ನಾಗಮಣಿ. D**<br>**ಸ.ಹಿ.ಪ್ರಾ. ಶಾಲೆ, ಚಾಪುರದೊಡ್ಡಿ,**<br>**ಮದ್ದೂರು ತಾ.** | **ಶ್ರೀ ಕೆ .ಆರ್ .ಸತೀಶ**<br>**ಸ. ಹಿ. ಪ್ರಾ. ಶಾಲೆ, ಬೇಬಿ,**<br>**ಪಾಂಡವಪುರ ತಾ.** |
| 3 | **ಶ್ರೀ. ಮಲ್ಲಿಕೇಶ್ ಹೆಚ್. ಹೆಚ್**<br>**ಸ. ಹಿ. ಪ್ರಾ. ಶಾಲೆ,ಕೋಣಸಾಲೆ,**<br>**ಮದ್ದೂರು ತಾ.** | **ಶ್ರೀ. ಮಲ್ಲಿಕೇಶ್ ಹೆಚ್. ಹೆಚ್**<br>**ಸ. ಹಿ. ಪ್ರಾ. ಶಾಲೆ, ಕೋಣಸಾಲೆ,**<br>**ಮದ್ದೂರು ತಾ.** |
| 4 | **ಶ್ರೀಮತಿ ಆಶಾ**<br>**ಸ. ಹಿ. ಪ್ರಾ. ಶಾಲೆ, ಚಾಮನಹಳ್ಳಿ,**<br>**ಮದ್ದೂರು ತಾ.** | |
| 5 | **ಶ್ರೀಮತಿ ರಂಜಿತ**<br>**ಸ.ಹಿ.ಪ್ರಾ. ಶಾಲೆ,ಮುರುಕನ ಹಳ್ಳಿ,**<br>**ಕೆ. ಆರ್.ಪೇಟೆ ತಾ.** | |
| 6 | **ಶ್ರೀ ಮೋಹನ್**<br>**ಸ. ಹಿ.ಪ್ರಾ. ಶಾಲೆ, ಚೌಡೇನಹಳ್ಳಿ,**<br>**ಕೆ.ಆರ್. ಪೇಟೆ ತಾ.** | |
| 7 | **ಶ್ರೀಮತಿ ಮಾನಸ**<br>**ಕೆ.ಪಿ.ಎಸ್ ಕೆ.ಆರ್. ಪೇಟೆ ತಾ.** | |

| ಮಾರ್ಗದರ್ಶಕರು | ಪರಿಶೀಲಕರು |
|---|---|
| ಡಾ. ಚಂದ್ರಶೇಖರ್ ಜಿ,ಆರ್<br>ಉಪನ್ಯಾಸಕರು, ಡಯಟ್ ಮಂಡ್ಯ. | ಯಶೋಧ ಎಂ ಎಸ್.<br>ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ,<br>ಇಟ್ಟಮಡು, ಬೆಂಗಳೂರು ದಕ್ಷಿಣ ಜಿಲ್ಲೆ |

# ಮುನ್ನುಡಿ

ಕಲಿಕೆಯ ಪಯಣಕ್ಕೆ ದಾರಿದೀಪ – ಕಲಿಕಾಫಲ ಆಧಾರಿತ ಮೌಲ್ಯಾಂಕನ ಪ್ರಶ್ನೆಕೋಠಿ

ಜಗತ್ತು ನಿತ್ಯ ಪರಿವರ್ತನಾಶೀಲವಾದದ್ದು, ಇಂದು ನಾವು ಮಕ್ಕಳಿಗೆ 21ನೇ ಶತಮಾನದ ಕೌಶಲಗಳನ್ನು ಗಳಿಸಿಕೊಳ್ಳುವಂತೆ ಮಾಡುವ ಮೂಲಕ ಚೈತನ್ಯಶೀಲ ಸಮಾಜ ನಿರ್ಮಾಣ ಮಾಡುವ ಜವಾಬ್ದಾರಿ ನಮ್ಮದಾಗಿದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಯ ಬದುಕಿನಲ್ಲಿ ಭಾಷಾ ಕಲಿಕೆ ಮಹತ್ವದ ಪಾತ್ರ ವಹಿಸುತ್ತದೆ. ಭಾಷಾ ಕಲಿಕೆಯು ಕೇವಲ ಹೊಸ ಶಬ್ದಗಳನ್ನು ಮತ್ತು ವ್ಯಾಕರಣ ನಿಯಮಗಳನ್ನು ಕಲಿಯುವುದಷ್ಟೇ ಅಲ್ಲ, ಅದು ಜನಜೀವನ ಮತ್ತು ಸಂಸ್ಕೃತಿ ಹಾಗೂ ಮೌಲ್ಯಗಳನ್ನು ಬೆಸೆಯುವ ಕೊಂಡಿಯಾಗಿದೆ. ಅಷ್ಟೇ ಅಲ್ಲದೇ ಅದು ಒಂದು ಹೊಸ ಸಂಸ್ಕೃತಿ, ಆಲೋಚನಾ ಶೈಲಿ ಮತ್ತು ಜೀವನದ ಹೊಸ ದೃಷ್ಟಿಕೋನವನ್ನು ಪಡೆದುಕೊಳ್ಳುವ ಪ್ರಕ್ರಿಯೆಯಾಗಿದೆ. ಈ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳು ವಿಮರ್ಶಾತ್ಮಕ ಚಿಂತನೆ, ಸೃಜನಾತ್ಮಕ ಅಭಿವ್ಯಕ್ತಿ, ಉತ್ತಮ ಸಂವಹನ ಕೌಶಲ ಹಾಗೂ ಜೀವನ ಕೌಶಲಗಳನ್ನು ಗಳಿಸಿಕೊಳ್ಳುವುದಕ್ಕೆ ಪೂರಕವಾದ ವಾತಾವರಣ ನಿರ್ಮಾಣ ಮಾಡಬೇಕಿದೆ. ಅಲ್ಲದೇ, ಈ ಕಲಿಕೆಯ ಪಯಣದಲ್ಲಿ ಭಾಷಾ ಕೌಶಲಗಳು ಹಾಗೂ ಸಾಮರ್ಥ್ಯಗಳನ್ನು ವಿದ್ಯಾರ್ಥಿಗಳು ಗಳಿಸಿಕೊಂಡಿರುವುದನ್ನು ಖಾತ್ರಿ ಪಡಿಸಿಕೊಳ್ಳುವುದು ಕೂಡ ಬಹಳ ಮುಖ್ಯ.

ಈ ನಿಟ್ಟಿನಲ್ಲಿ 2026–27ನೇ ಶೈಕ್ಷಣಿಕ ವರ್ಷದಲ್ಲಿ "ಕಲಿಕಾಫಲ ಆಧಾರಿತ ಮೌಲ್ಯಾಂಕನ ಪ್ರಶ್ನೆಕೋಠಿ" ಯನ್ನು ರಚಿಸಲಾಗಿದೆ. ವಿದ್ಯಾರ್ಥಿಯು ಭಾಷೆಯನ್ನು ಹೇಗೆ ಗ್ರಹಿಸುತ್ತಾನೆ, ಕಲಿಯುತ್ತಾನೆ ಮತ್ತು ಅದನ್ನು ಚಿಂತನೆಗೆ ಹೇಗೆ ಬಳಸುತ್ತಾನೆ ಎಂಬುದರ ಹಿಂದಿರುವ ಮೂಲಭೂತ ಆಲೋಚನೆಗಳು ಮತ್ತು ಸಿದ್ಧಾಂತಗಳನ್ನು ಅವಲೋಕಿಸಿ, ಭಾಷಾ ಪಠ್ಯಕ್ರಮದ ಗುರಿಗಳು ಹಾಗೂ ಸಾಮರ್ಥ್ಯಗಳನ್ನು ಆಧರಿಸಿದಂತೆ ತರಗತಿವಾರು ರೂಪಿಸಲಾದ ಕಲಿಕಾ ಫಲಗಳಿಗೆ ಪೂರಕವಾಗಿ ಪ್ರಸ್ತುತ ಉಪಕ್ರಮವನ್ನು ಯೋಜಿಸಲಾಗಿದೆ. ಭಾಷಾ ಕಲಿಕೆಯು ಸಂವಹನದ ಗಡಿಗಳನ್ನು ಮೀರಿ, ವ್ಯಕ್ತಿಯ ವ್ಯಕ್ತಿತ್ವವನ್ನು ವಿಕಸನಗೊಳಿಸುವ ಮತ್ತು ಜಗತ್ತನ್ನು ವಿಶಾಲ ಮನೋಭಾವದಿಂದ ನೋಡಲು ನೆರವಾಗುವ ಅತ್ಯುತ್ತಮ ದೃಷ್ಟಿಕೋನವನ್ನು ಒದಗಿಸುತ್ತದೆ.

ವಿದ್ಯಾರ್ಥಿಗಳಲ್ಲಿ ಭಾಷಾ ಕೌಶಲಗಳನ್ನು ಸಮರ್ಥವಾಗಿ ಅಭಿವೃದ್ಧಿಪಡಿಸುವುದಕ್ಕಾಗಿ ಇಲ್ಲಿ ಸೂಚಿಸಿರುವ ಚಟುವಟಿಕೆಗಳು ಹಾಗೂ ಪ್ರಶ್ನೆಗಳನ್ನು ಕಲಿಕಾ ಫಲಗಳಿಗೆ ಆಧರಿಸಿ ಪ್ರತೀ ಅಧ್ಯಾಯಕ್ಕೂ ರೂಪಿಸಿದ್ದು, ಶಿಕ್ಷಕರು ಇವುಗಳ ತಾತ್ತ್ವಿಕತೆಯನ್ನು ಅರ್ಥೈಸಿಕೊಂಡು ಪರಿಣಾಮಕಾರಿಯಾಗಿ ತರಗತಿ ಪ್ರಕ್ರಿಯೆ ಮತ್ತು ಮೌಲ್ಯಾಂಕನ ಪ್ರಕ್ರಿಯೆ ನಿರ್ವಹಿಸಲು ಸಹಕಾರಿಯಾಗುತ್ತವೆ. ಈ ಪ್ರಶ್ನೆಕೋಠಿಯನ್ನು ಶಿಕ್ಷಕರು ತರಗತಿ ಪ್ರಕ್ರಿಯೆಯಲ್ಲಿ ಹಾಗೂ ಮೌಲ್ಯಮಾಪನದಲ್ಲಿ ಹಂತ-ಹಂತವಾಗಿ ನಿರಂತರವಾಗಿ (CCE) ಬಳಸಬೇಕಾಗುತ್ತದೆ. ಈ ಮೂಲಕ ಭಾಷೆಯನ್ನು ಕುರಿತು ವಿದ್ಯಾರ್ಥಿಗಳಲ್ಲಿ ಆಸಕ್ತಿ, ಆತ್ಮವಿಶ್ವಾಸ ಮತ್ತು ಭಾಷಾ ಬಳಕೆಯ ಗುಣಮಟ್ಟವನ್ನು ಇನ್ನಷ್ಟು ವೃದ್ಧಿಸಲಿ ಎಂಬುದು ನಮ್ಮ ಹಾರೈಕೆ.

**ನಿರ್ದೇಶಕರು**,
**ಡಿ.ಎಸ್.ಇ.ಆರ್.ಟಿ, ಬೆಂಗಳೂರು**

# ಶಿಕ್ಷಕರಿಗೆ ಮಾರ್ಗಸೂಚಿ

- ಎಲ್ಲ ಶಿಕ್ಷಕರು, ಸಂಪನ್ಮೂಲ ವ್ಯಕ್ತಿಗಳು, ಇಲಾಖೆಯ ಎಲ್ಲಾ ಹಂತದ ಅನುಷ್ಠಾನಾಧಿಕಾರಿಗಳು ಮೊದಲಿಗೆ ಪಠ್ಯಕ್ರಮದ ಗುರಿಗಳು ಮತ್ತು ಸಾಮರ್ಥ್ಯಗಳ ಬಗ್ಗೆ ಸ್ಪಷ್ಟವಾಗಿ ಅರಿತುಕೊಳ್ಳಬೇಕು.

- ಮಕ್ಕಳು ಆಯಾ ತರಗತಿ ಹಾಗೂ ವಿಷಯವಾರು ಸಾಧಿಸಬೇಕಾದ ಕಲಿಕಾಫಲಗಳಿಗೆ ಪೂರಕವಾಗಿ ಇಲ್ಲಿ ಚಟುವಟಿಕೆಗಳು ಹಾಗೂ ಪ್ರಶ್ನೆಗಳನ್ನು ನೀಡಲಾಗಿದೆ. ಶಿಕ್ಷಕರು ತಮ್ಮ ತರಗತಿ ಪ್ರಕ್ರಿಯೆಯಲ್ಲಿ ಮಕ್ಕಳು ಕಲಿಕಾಫಲಗಳನ್ನು ಸಾದಿಸಲು ಪೂರಕವಾಗಿ ಇವುಗಳನ್ನು ಸಂದರ್ಭೋಚಿತವಾಗಿ ಬಳಸುವುದು.

- ತರಗತಿ ಪ್ರಕ್ರಿಯೆಯಲ್ಲಿ ಹಂತ ಹಂತವಾಗಿ ಕಲಿಕಾಫಲ ಆಧಾರಿತ ಚಟುವಟಿಕೆಗಳನ್ನು ಬಳಸುವ ಮೂಲಕ ಮಕ್ಕಳನ್ನು ತೊಡಗಿಸಿಕೊಳ್ಳುವುದು ಹಾಗೂ ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಕಲಿಕಾಫಲ ಆಧಾರಿತ ಪ್ರಶ್ನಾಕೋಠಿಯಲ್ಲಿ ನೀಡಿರುವ ಎಲ್ಲ ಪ್ರಶ್ನೆಗಳನ್ನೂ ಅಭ್ಯಾಸ ಮಾಡಿಸುವುದು.

- ಕಲಿಕೆಯಲ್ಲಿ ನಿಧಾನಗತಿಯಲ್ಲಿರುವ ಮಕ್ಕಳಿಗೆ ಅವರವರ ಕಲಿಕಾ ಅಂತರವನ್ನು ಗುರುತಿಸಿ ಸೂಕ್ತ ಚಟುವಟಿಕೆಗಳನ್ನು ಕೈಗೊಳ್ಳುವುದು.

- ಈ ಸಲದ ಪ್ರಶ್ನಾಕೋಠಿಯು ಜ್ಞಾನ, ಗ್ರಹಿಕೆ, ಅನ್ವಯ, ಅಭಿವ್ಯಕ್ತಿ, ಪ್ರಶಂಸೆ, ವಿಮರ್ಶಾತ್ಮಕತೆ ಹಾಗೂ ಹೈಯರ್ ಆರ್ಡರ್ ಪ್ರಶ್ನೆಗಳನ್ನು ಒಳಗೊಂಡಿದೆ. ಹೈಯರ್ ಆರ್ಡರ್ ಪ್ರಶ್ನೆಗಳು ಹೋಲಿಕೆ, ಸಾಮ್ಯತೆ ಮತ್ತು ವ್ಯತ್ಯಾಸ, ವಿಶ್ಲೇಷಣಾ ಸಾಮರ್ಥ್ಯ, ಮೌಲ್ಯಮಾಪನ ಮತ್ತು ಸೃಜನಶೀಲತೆಯಂತಹ ಆಯಾಮಗಳನ್ನು ಒಳಗೊಂಡಿರುತ್ತದೆ.

- ಕೇವಲ ಅಂಕಗಳನ್ನು ನಮೂದಿಸುವುದಕ್ಕಾಗಿ, ಅಥವಾ ಪಠ್ಯವಸ್ತುವನ್ನು ಪೂರ್ಣಗೊಳಿಸುವುದಕ್ಕಾಗಿ ಕಲಿಕಾ ಫಲಾಧಾರಿತ ಮೌಲ್ಯಾಂಕನವನ್ನು ಜಾರಿಗೊಳಿಸದೇ, ನಮ್ಮ ಶಾಲೆಯ ಮಕ್ಕಳ ಸಾಮರ್ಥ್ಯ ವೃದ್ಧಿಗಾಗಿ ಹಾಗೂ ಕೌಶಲಗಳ ಪ್ರಾಪ್ತಿಗಾಗಿ ಕಲಿಕಾಫಲ ಆಧಾರಿತ ಮೌಲ್ಯಾಂಕನ ಪ್ರಶ್ನಾಕೋಠಿಯನ್ನು ಪರಿಣಾಮಕಾರಿಯಾಗಿ ಬಳಕೆ ಮಾಡುವುದು.

- ನಮ್ಮ ಶಾಲೆಗೆ ಬರುವ ಮಕ್ಕಳು ಎಲ್ಲಾ ವಿಷಯಗಳಲ್ಲೂ ನಿಗದಿತ ಸಾಮರ್ಥ್ಯಗಳಿಸುವುದಕ್ಕಾಗಿ ಕಲಿಕಾನುಭವಗಳನ್ನು ನೀಡುವ ಹಾಗೂ ಮಕ್ಕಳ ಬೌದ್ಧಿಕ ಬೆಳವಣಿಗೆಗೆ ಸಹಕರಿಸುವ ನಿಟ್ಟಿನಲ್ಲಿ ಚಿಂತಿಸಿ ಪ್ರತಿಯೊಬ್ಬರೂ ಈ ಶೈಕ್ಷಣಿಕ ಉಪಕ್ರಮವನ್ನು ಕಾರ್ಯಗತಗೊಳಿಸಬೇಕಿದೆ.

- ಆಯಾಯ ತರಗತಿಯಲ್ಲಿ ಕಲಿಕೆಯನ್ನು ಅನುಕೂಲಿಸುತ್ತಿರುವ ವಿಷಯವಾರು ಶಿಕ್ಷಕರು ತಮ್ಮ ತಮ್ಮ ವಿಷಯಗಳ ಪ್ರಶ್ನಾಕೋಠಿಯನ್ನು ಅರ್ಥಪೂರ್ಣವಾಗಿ ಬಳಸಿಕೊಂಡು ಮಕ್ಕಳಲ್ಲಿ ಅಪೇಕ್ಷಿತ ಕಲಿಕಾಫಲಗಳ ಸಾಧನೆಗಾಗಿ ಶ್ರಮಿಸುವುದು.

- ಇಲಾಖೆಯ ವೆಬ್ ಸೈಟ್ ಅಲ್ಲಿ ಲಭ್ಯವಿರುವ ಕಲಿಕಾಫಲ ಆಧಾರಿತ ಸಾಮಗ್ರಿಗಳನ್ನು ಕೂಲಂಕಷವಾಗಿ ಅವಲೋಕಿಸುವುದು ಹಾಗೂ ಅವುಗಳನ್ನು ಕಲಿಕೆಯಲ್ಲಿ ಪರಿಣಾಮಕಾರಿಯಾಗಿ ಬಳಸುವುದು.

# ಭಾಷೆ-ಕನ್ನಡ- ಕಲಿಕಾ ಫಲಗಳು

## ಮಾಧ್ಯಮಿಕ ಹಂತ (6ನೇ ತರಗತಿ)

| Curricular Goals | ಸಾಮರ್ಥ್ಯಗಳು | ಕಲಿಕಾ ಫಲಗಳು |
|---|---|---|
| CG-1: ಭಾಷಾ ಕೌಶಲಗಳನ್ನು ಬಳಸಿಕೊಂಡು ಪರಿಣಾಮಕಾರಿಯಾಗಿ ಸಂವಹನ (ವಿವರಣೆ, ವಿಶ್ಲೇಷಣೆ ಮತ್ತು ಪ್ರತಿಕ್ರಿಯೆ) ನಡೆಸುವ ಸಾಮರ್ಥ್ಯವನ್ನು ಬೆಳೆಸುವುದು. | C-1.1: ಪಠ್ಯವನ್ನು (ಸುದ್ದಿ ಪತ್ರಿಕೆ, ವರದಿ, ಸಂಪಾದಕೀಯ) ಗಮನವಿಟ್ಟು ಆಲಿಸಿದ ನಂತರ ಅಥವಾ ಓದಿದ ನಂತರ ಅಲ್ಲಿನ ಮುಖ್ಯ ಅಂಶಗಳನ್ನು ಗುರುತಿಸುವುದು ಮತ್ತು ಸಾರಾಂಶೀಕರಿಸುವುದು. | 1.ಮೌಖಿಕಪ್ರಸ್ತುತಿಗಳನ್ನುವಿಮರ್ಶಾತ್ಮಕವಾಗಿ ಆಲಿಸುತ್ತಾರೆ ಮತ್ತು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ |
| | | 2. ಪಠ್ಯವನ್ನು ಓದಿದ ಅಥವಾ ಆಲಿಸಿದ ನಂತರ ಅದರಲ್ಲಿರುವ ಮುಖ್ಯ ಅಂಶಗಳನ್ನು ಗುರುತಿಸುತ್ತಾರೆ. |
| | C-1.2: ವಿವಿಧ ರೀತಿಯ ಸಂದರ್ಶನಗಳನ್ನು (ರಚನಾತ್ಮಕ ಮತ್ತು ರಚನಾತ್ಮಕವಲ್ಲದ) ಆಲಿಸುವುದು ಮತ್ತು ಸಂದರ್ಶನಗಳನ್ನು ಯೋಜಿಸಿ ಅನುಷ್ಠಾನಗೊಳಿಸುವುದು. | 3. ಸಂದರ್ಶನ ಕೈಗೊಳ್ಳುವುದಕ್ಕೆ ಪೂರ್ವಭಾವಿಯಾಗಿ, ಕೆಲವು ಸಂದರ್ಶನ ಮಾದರಿಗಳನ್ನು ಆಲಿಸುತ್ತಾರೆ; ಆ ಮೂಲಕ ಸಂದರ್ಶನದಲ್ಲಿ ಬಳಸುವ ಭಾಷೆ ಮತ್ತು ಇತರೆ ಭಾಷಾಂಶಗಳನ್ನು ಗುರುತಿಸಿಕೊಳ್ಳುತ್ತಾರೆ. |
| | C-1.3: ಸಾಮಾಜಿಕ ಅನುಭವಗಳು ಮತ್ತು ಸಾಮಾಜಿಕ ಕಾಳಜಿಗಳ ಬಗೆಗೆ ಆಳವಾದ ಪ್ರಶ್ನೆಗಳನ್ನು (ಮುಕ್ತ/ನಿರ್ಬಂಧಿತ, ಔಪಚಾರಿಕ/ಅನೌಪಚಾರಿಕ, ಸಂದರ್ಭಕ್ಕೆ ಸೂಕ್ತವಾದ ಮತ್ತು ಸೂಕ್ಷ್ಮತೆಯಿಂದ ಕೂಡಿದ) ಕೇಳುವುದು. | 4. ಸಾಮಾಜಿಕ ರೂಢಿ/ಆಚರಣೆ ಮತ್ತು ಸಾಮಾಜಿಕ ಸಮಸ್ಯೆಗಳ ಬಗ್ಗೆ (ಉದಾ: ಹಬ್ಬಗಳು, ಸ್ಥಳೀಯ ಮುಷ್ಕರ) ವಿವಿಧ ರೀತಿಯ ಪ್ರಶ್ನೆಗಳನ್ನು ಕೇಳುತ್ತಾರೆ. |
| | C-1.4: ವಿಭಿನ್ನ ಓದುಗರು ಮತ್ತು ವಿಭಿನ್ನ ಉದ್ದೇಶಗಳಿಗೆ ಅನುಗುಣವಾಗಿ ಸೂಕ್ತ ಭಾಷಾ ಶೈಲಿ ಮತ್ತು ಭಾಷಾ ಪ್ರಯೋಗದೊಂದಿಗೆ ವಿವಿಧ ರೀತಿಯ ಪತ್ರಗಳು, ಪ್ರಬಂಧಗಳು ಮತ್ತು ವರದಿಗಳನ್ನು ಬರೆಯುವುದು. | 5. ನೀಡಿದವಿಷಯ/ಉದ್ದೇಶಗಳಿಗೆ ಅನುಗುಣವಾಗಿ ಸಣ್ಣ ಪ್ರಕಟಣೆಗಳು, ಪತ್ರಗಳು ಮತ್ತು ಅರ್ಜಿಗಳನ್ನು ಬರೆಯುತ್ತಾರೆ. |

| | | |
|---|---|---|
| | C-1.5: ವಿಭಿನ್ನ ಕೇಳುಗರು, ವೀಕ್ಷಕರು ಮತ್ತು ವಿಭಿನ್ನ ಉದ್ದೇಶಗಳಿಗಾಗಿ ಆಡಿಯೋ, ವಿಡಿಯೋ ಅಥವಾ ಎರಡನ್ನೂ ಒಳಗೊಂಡ ಕಂಟೆಂಟ್ (ವಿಷಯ ವಸ್ತು) ರಚಿಸುವುದು. | 6. ಪಾಡ್‌ಕಾಸ್ಟ್‌ಗಳು (Podcasts) ಮತ್ತು ಸಾಕ್ಷ್ಯಚಿತ್ರಗಳ (Documentaries) ಪರಿಕಲ್ಪನೆಯೊಂದಿಗೆ ಅವುಗಳ ಮೂಲಾಂಶಗಳನ್ನು ಅರ್ಥಮಾಡಿಕೊಳ್ಳುತ್ತಾರೆ. |
| CG-2: ವಿವಿಧ ರೀತಿಯ ಸಾಹಿತ್ಯಿಕ ಪ್ರಕಾರಗಳನ್ನು ವಿವಿಧ ಮೂಲಗಳಿಂದ ಅನ್ವೇಷಿಸುವ ಮೂಲಕ ಭಾಷೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಆಸ್ವಾದಿಸುವುದು ಮತ್ತು ಗೌರವಿಸುವುದು. | C-2.1: ವಿವಿಧ ಕಾಲಘಟ್ಟ ಹಾಗೂ ವಿಭಿನ್ನ ಸಂಸ್ಕೃತಿಯ ಸಾಹಿತ್ಯ ಪ್ರಕಾರಗಳನ್ನು (ಗದ್ಯ, ಪದ್ಯ, ನಾಟಕ) ಹಾಗೂ ಬರವಣಿಗೆ ಶೈಲಿಗಳನ್ನು (ಕಥನಾತ್ಮಕ, ವಿವರಣಾತ್ಮಕ, ವಿಶ್ಲೇಷಣಾತ್ಮಕ, ಪ್ರತಿಪಾದನಾತ್ಮಕ) ಗುರುತಿಸುವುದು ಮತ್ತು ಆಸ್ವಾದಿಸುವುದು. | 7. ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿನ ವ್ಯತ್ಯಾಸಗಳನ್ನು ಗುರುತಿಸುತ್ತಾರೆ. |
| | | 8. ಸಾಹಿತ್ಯ ಪಠ್ಯದಲ್ಲಿನ ವಿಭಿನ್ನ ಬರವಣಿಗೆಯ ಶೈಲಿಗಳನ್ನು (ಕಥನಾತ್ಮಕ, ವಿವರಣಾತ್ಮಕ, ವಿಶ್ಲೇಷಣಾತ್ಮಕ, ಪ್ರತಿಪಾದನಾತ್ಮಕ) ಗುರುತಿಸುತ್ತಾರೆ |
| | C-2.2: ವೈವಿಧ್ಯಮಯ ಸಾಹಿತ್ಯವನ್ನು ಓದುವ ಮೂಲಕ ಸಾಹಿತ್ಯಿಕ ಅಲಂಕಾರಗಳನ್ನು (ಉಪಮೆ, ರೂಪಕ, ದೃಷ್ಟಾಂತ, ಉತ್ಪ್ರೇಕ್ಷೆ) ಪ್ರತಿಮೆ, ಅನುಪ್ರಾಸ, ನುಡಿಗಟ್ಟು, ಗಾದೆ ಮತ್ತು ಒಗಟುಗಳನ್ನು ಗುರುತಿಸುವುದು ಮತ್ತು ಅವುಗಳನ್ನು ಬರವಣಿಗೆಯಲ್ಲಿ ಬಳಸುವುದು. | 9. ತರಗತಿ ಪಠ್ಯದಲ್ಲಿ ಸಾಹಿತ್ಯಿಕ ಅಲಂಕಾರಗಳನ್ನು (ಉಪಮೆ, ರೂಪಕ, ಉತ್ಪ್ರೇಕ್ಷೆ) ಗುರುತಿಸುತ್ತಾರೆ. |
| | | 10. ತರಗತಿ ಪಠ್ಯದಲ್ಲಿ ಬಳಕೆಯಾದ ಒಗಟು , ಗಾದೆ ಮತ್ತು ನುಡಿಗಟ್ಟುಗಳಲ್ಲಿರುವ, ಪ್ರಾಸ ಮತ್ತು ಲಯವನ್ನು ಗುರುತಿಸುತ್ತಾರೆ. |
| | C-2.3: ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸರದ ವಿವಿಧ ಆಯಾಮಗಳ ಕುರಿತು ತಮ್ಮ ಆಲೋಚನೆ ಮತ್ತು ವಿಮರ್ಶೆಗಳನ್ನು ಭಾಷಣ ಹಾಗೂ ಬರವಣಿಗೆಯ ಮೂಲಕ ಅಭಿವ್ಯಕ್ತಪಡಿಸುವುದು. | 11. ವಿವಿಧ ರೀತಿಯ ಜಾನಪದ ಕಥೆಗಳು, ಹಾಡುಗಳು ಹಾಗೂ ನೃತ್ಯ, ಕರಕುಶಲ ವಸ್ತುಗಳು, ಕಲೆ-ವಾಸ್ತುಶಿಲ್ಪಕ್ಕೆ ಸಂಬಂಧಿತ ವಿಷಯಗಳನ್ನು ಓದುತ್ತಾರೆ, ಆಸ್ವಾದಿಸುತ್ತಾರೆ ; ಅವುಗಳಿಗೆ ಮೌಖಿಕ ಪ್ರತಿಕ್ರಿಯೆ ನೀಡುತ್ತಾರೆ |
| CG-3: ಮೂಲಭೂತ ಭಾಷಾ ಘಟಕಗಳನ್ನು (ಪದ ಮತ್ತು ವಾಕ್ಯ ರಚನೆ) ಗುರುತಿಸುವ ಮತ್ತು ಅವುಗಳನ್ನು ಮೌಖಿಕ ಹಾಗೂ ಲಿಖಿತವಾಗಿ ಅಭಿವ್ಯಕ್ತಿಸುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವುದು. | C-3.1: ವಿವಿಧ ಪ್ರಕಾರದ ಸಾಹಿತ್ಯ ಪಠ್ಯಗಳಲ್ಲಿ ವ್ಯಕ್ತವಾಗಿರುವ ವಾಕ್ಯ ರಚನೆ, ಲೇಖನ ಚಿಹ್ನೆಗಳು, ಕಾಲ-ಲಿಂಗ-ವಚನ, ನಾಮಪದ, ಕ್ರಿಯಾಪದಗಳಂತಹ ಮೂಲಭೂತ ಭಾಷಾ ನಿಯಮಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ಬರೆಯುವಾಗ ಅವುಗಳನ್ನು ಅನ್ವಯಿಸುವುದು. | 12.ಪಠ್ಯಗಳಲ್ಲಿ ವ್ಯಕ್ತವಾಗಿರುವ ಸರಳ ಮತ್ತು ಸಂಯುಕ್ತ ವಾಕ್ಯಗಳು ಸೇರಿದಂತೆ ವಾಕ್ಯ ರಚನೆ, ಲೇಖನ ಚಿಹ್ನೆಗಳು, ಕಾಲ-ಲಿಂಗ-ವಚನ, ನಾಮಪದ, ಕ್ರಿಯಾಪದಗಳಂತಹ ಮೂಲಭೂತ ಭಾಷಾ ನಿಯಮಗಳನ್ನು ಗುರುತಿಸುತ್ತಾರೆ ಮತ್ತು ಸಾಹಿತ್ಯದಲ್ಲಿ ಅವುಗಳ ಬಳಕೆಯನ್ನು ಗ್ರಹಿಸುತ್ತಾರೆ. |

| | | |
|---|---|---|
| | C-3.2: ಸೂಕ್ತವಾದ ಶೈಲಿ ಮತ್ತು ಭಾಷಾ ಬಳಕೆಯೊಂದಿಗೆ ಗದ್ಯ, ಪದ್ಯ ಮತ್ತು ನಾಟಕಗಳನ್ನು ರಚಿಸುವುದು. | - |
| **CG-4: ವಿಮರ್ಶೆಗಳನ್ನು ಬರೆಯಲು ಮತ್ತು ಆಕರಗಳನ್ನು (References) ಹುಡುಕಲು ಗ್ರಂಥಾಲಯವನ್ನು ಬಳಸುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವುದು.** | C-4.1: ವಿವಿಧ ಪ್ರಕಾರದ (ಕಾಲ್ಪನಿಕ ಮತ್ತು ಕಾಲ್ಪನಿಕವಲ್ಲದ - Fiction & Non-Fiction) ಪುಸ್ತಕಗಳನ್ನು ಓದುವುದು, ಅವುಗಳಿಗೆ ಪ್ರತಿಕ್ರಿಯಿಸುವುದು ಹಾಗೂ ವಿಮರ್ಶಿಸುವುದು. | **13.ತಮ್ಮ ಇಷ್ಟದ ಪುಸ್ತಕಗಳನ್ನು ಆಯ್ಕೆ ಮಾಡಿಕೊಂಡು ಓದುತ್ತಾರೆ ಹಾಗೂ ಅವುಗಳ ಬಗ್ಗೆ ಸಣ್ಣ ಟಿಪ್ಪಣಿಗಳನ್ನು ಬರೆಯುತ್ತಾರೆ.** |
| | C-4.2: ಯೋಜನೆಗಳು (ಪ್ರಾಜೆಕ್ಟ್) ಮತ್ತು ಇತರೆ ಚಟುವಟಿಕೆಗಳ ಪರಾಮರ್ಶನಕ್ಕಾಗಿ ಪುಸ್ತಕಗಳು ಮತ್ತು ಇತರ ಮಾಧ್ಯಮ ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ಬಳಸುವುದು | 14. **ಯೋಜನೆಗಳು ಮತ್ತು ಇತರ ಚಟುವಟಿಕೆಗಳ ಪರಾಮರ್ಶನಕ್ಕಾಗಿ ಪುಸ್ತಕಗಳನ್ನು ಹುಡುಕಲು ಗ್ರಂಥಾಲಯವನ್ನು ಬಳಸುತ್ತಾರೆ.** |
| **CG-5: ಕನ್ನಡ ಭಾಷೆಯ ವಿಶಿಷ್ಟ ಲಕ್ಷಣಗಳಾದ ವರ್ಣಮಾಲೆ, ಲಿಪಿ-ಧ್ವನಿಗಳು, ಪ್ರಾಸ, ಶ್ಲೇಷೆ, ಮತ್ತು ಆ ಭಾಷಾ ಜಾಯಮಾನದ ನಾಣ್ಣುಡಿ, ನುಡಿಗಟ್ಟು ಹಾಗೂ ಭಾಷಾ ಆಟಗಳನ್ನು ಆಸ್ವಾದಿಸುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವುದು.** | C-5.1: ಕನ್ನಡ ಭಾಷೆಯಲ್ಲಿನ ಧ್ವನಿ, ಲಿಪಿ, ಸ್ವರ, ವ್ಯಂಜನಗಳು ಆ ಭಾಷೆಯಲ್ಲಿ ಹೇಗೆ ಬಳಕೆಯಾಗುತ್ತವೆ ಎಂಬುದನ್ನು ಅರ್ಥಮಾಡಿಕೊಳ್ಳುವುದು. | **15. ಕನ್ನಡ ಭಾಷೆಯಲ್ಲಿನ ಸ್ವರ ಮತ್ತು ವ್ಯಂಜನ ಧ್ವನಿಗಳ ಉಗಮ ಮತ್ತು ಪ್ರಾಮುಖ್ಯತೆಯನ್ನು ಗುರುತಿಸುತ್ತಾರೆ.** |
| | | **16. ಗ್ರಾಂಥಿಕ ಮತ್ತು ಆಡುಭಾಷೆಯ ನಡುವಿನ ವ್ಯತ್ಯಾಸಗಳನ್ನು ಗುರುತಿಸುತ್ತಾರೆ ಮತ್ತು ದೈನಂದಿನ ಸಂವಹನದಲ್ಲಿ ಅವುಗಳ ಮಹತ್ವವನ್ನು ಅರ್ಥಮಾಡಿಕೊಳ್ಳುತ್ತಾರೆ.** |
| | C-5.2: ಶ್ಲೇಷೆಗಳು (Puns), ಪ್ರಾಸ, ಅನುಪ್ರಾಸ, ಗಾದೆ, ನಾಣ್ಣುಡಿ ಹಾಗೂ ನುಡಿಗಟ್ಟುಗಳನ್ನು ಬಳಸುವ ಮೂಲಕ ಭಾಷಣ ಮತ್ತು ಬರವಣಿಗೆಯನ್ನು ಹೆಚ್ಚು ಆಸಕ್ತಿದಾಯಕ ಹಾಗೂ ಆನಂದದಾಯಕಗೊಳಿಸುವುದು. | 17. **ತಮ್ಮ ಸಾಂಸ್ಕೃತಿಕ ಪರಿಸರದಲ್ಲಿನ ವಿವಿಧ ಶ್ಲೇಷೆ, ಪ್ರಾಸ ಗಾದೆ, ನುಡಿಗಟ್ಟು ಹಾಗೂ ನಾಣ್ಣುಡಿಗಳನ್ನು ಸಂಗ್ರಹಿಸುತ್ತಾರೆ.** |
| | C-5.3: ಭಾಷಾ ಕಲಿಕೆಯನ್ನು ಚೈತನ್ಯಶೀಲಗೊಳಿಸುವುದಕ್ಕೆ ಪೂರಕವಾಗಿ ಭಾಷಾ ಆಟಗಳನ್ನು ಪರಿಚಯಿಸುವುದು. ಉದಾಹರಣೆಗೆ ಒಗಟು, ಗಾದೆ, ಅಂತ್ಯಾಕ್ಷರಿ, ಅಕ್ಷರ ಪಲ್ಲಟ (spoonerisms), ದ್ವಿಮುಖಿ ಪದ (palindromes), ಪದಬಂಧ ರಚನೆ ಇತ್ಯಾದಿ | 18. **ಒಗಟು, ಗಾದೆ, ಅಂತ್ಯಾಕ್ಷರಿ, ಅಕ್ಷರ ಪಲ್ಲಟ (spoonerisms), ದ್ವಿಮುಖಿ ಪದ (palindromes), ಪದಬಂಧ ಮೊದಲಾದ ಭಾಷಾ ಆಟಗಳನ್ನು ಪರಿಚಯಿಸಿಕೊಳ್ಳುತ್ತಾರೆ.** |
| | | 19. **ಅಂತಾಕ್ಷರಿ, ಒಗಟು ಮತ್ತು ಪದಬಂಧ ಆಟಗಳಲ್ಲಿ ಭಾಗವಹಿಸುತ್ತಾರೆ.** |

# ಪರಿವಿಡಿ

## ಗದ್ಯಭಾಗ


| ಕ್ರ. ಸಂ | ಪಾಠದ ಹೆಸರು | ಪುಟ ಸಂಖ್ಯೆ | |
|---|---|---|---|
| | | ಪ್ರಶ್ನೆಗಳು | ಉತ್ತರಗಳು |
| | **ಪ್ರಶ್ನೆಗಳು** | | |
| 1 | ದೊಡ್ಡವರ ದಾರಿ | 8-13 | 85-87 |
| 2 | ಗಂಧರ್ವಸೇನ | 14-18 | 88-90 |
| 3 | ಕೃಷ್ಣ ಸುಧಾಮ | 19-22 | 91-93 |
| 4 | ಡಾ|| ರಾಜಕುಮಾರ | 23-27 | 94-96 |
| 5 | ಧನ್ಯವಾದ ಹೇಳಿದ ಕೊಕ್ಕರೆ | 28-33 | 97-100 |
| 6 | ಸಿದ್ದಾರೂಢ ಜಾತ್ರೆ | 34-37 | 101-103 |
| 7 | ಯಾಣ ಕುರಿತೊಂದು ಪತ್ರ | 38-42 | 104-106 |
| 8 | ಕರ್ನಾಟಕ ಏಕೀಕರಣ | 43-47 | 107-110 |
| | **ಪದ್ಯಭಾಗ** | | |
| | **ಪ್ರಶ್ನೆಗಳು** | | |
| 9 | ಬೇಸಿಗೆ | 48-52 | 111-113 |
| 10 | ಮಂಗಳ ಗ್ರಹದಲ್ಲಿ ಪುಟ್ಟಿ | 53-56 | 114-116 |
| 11 | ನೀ ಹೋದ ಮರುದಿನ | 57-61 | 117-118 |
| 12 | ಮಗು ಮತ್ತು ಹಣ್ಣುಗಳು | 62-66 | 119-121 |
| 13 | ನೀ ನನಗಿದ್ದರೆ | 67-70 | 122-123 |
| 14 | ಗಂಗವ್ವತಾಯಿ | 71-75 | 124-125 |
| 15 | ಹೃದಯ ವಚನಗಳು | 76-79 | 126-127 |
| 16 | ಕಿತ್ತೂರ ಕೇಸರಿ | 80-84 | 128-130 |

# ಗದ್ಯಪಾಠ –1

## ದೊಡ್ಡವರ ದಾರಿ

### ಕ್ಲಿಷ್ಟತೆಯ ಮಟ್ಟ

| ಕ್ರ. ಸಂ | ಕಠಿಣತೆಯ ಮಟ್ಟ | ಪ್ರಶ್ನೆ | ಅಂಕ | ಶೇಕಡ |
|---|---|---|---|---|
| 01 | ಸುಲಭ | 12 | 12 | 17.14 |
| 02 | ಸಾಧಾರಣ | 34 | 40 | 57.58 |
| 03 | ಕಠಿಣ | 07 | 18 | 25.71 |
| 04 | ಒಟ್ಟು | 53 | 70 | 100 |

### ಉದ್ದಿಷ್ಟವಾರು ಅಂಕ ಹಂಚಿಕೆ

| ಕ್ರ. ಸಂ | ಉದ್ದಿಷ್ಟಗಳು | ಪ್ರಶ್ನೆ | ಅಂಕ | ಶೇಕಡ |
|---|---|---|---|---|
| 1 | ಜ್ಞಾನ | 25 | 22 | 31.42 |
| 2 | ಗ್ರಹಿಕೆ | 20 | 24 | 34.28 |
| 3 | ಅಭಿವ್ಯಕ್ತಿ | 05 | 12 | 17.14 |
| 4 | ಪ್ರಶಂಸೆ | 03 | 12 | 17.16 |
| 5 | ಒಟ್ಟು | 53 | 70 | 100 |

**I. 1. ಹೊಂದಿಸಿ ಬರೆಯಿರಿ**: (1 ಅಂಕದ ಪ್ರಶ್ನೆಗಳು)

| | | | |
|---|---|---|---|
| 1. ರಾಷ್ಟ್ರಪತಿ | ಅ. ಮಿಥಿಲೆಯ ರಾಜ | (ಸುಲಭ) | (LO-2) |
| 2. ಜನಕ | ಆ. ರೂಢನಾಮ | (ಸುಲಭ) | (LO-2) |
| 3. ಪ್ರಥಮ ರಾಷ್ಟ್ರಪತಿ | ಇ. ದೆಹಲಿ | (ಸುಲಭ) | (LO-2) |
| 4. ಜಾಮಿಯಾ ಮಿಲಿಯ | ಈ. ಪ್ರಥಮ ಪ್ರಜೆ | (ಸುಲಭ) | (LO-2) |
| 5. ಪರ್ವತ | ಉ. ರಾಜೇಂದ್ರ ಪ್ರಸಾದ್ | (ಸುಲಭ) | ( LO-2) |

**II. ಬಿಟ್ಟ ಸ್ಥಳವನ್ನು ಸೂಕ್ತ ಉತ್ತರದಿಂದ ತುಂಬಿರಿ.** (1 ಅಂಕದ ಪ್ರಶ್ನೆಗಳು **)**

**2.** 'ದೊಡ್ಡವರ ದಾರಿ' ಪಾಠದ ಲೇಖಕರು ________________ (ಸಾಧಾರಣ) (LO-12)

**3.** ರಾಜೇಂದ್ರ ಪ್ರಸಾದರು ಮಕ್ಕಳಿಗೆ ____________ ಕೊಟ್ಟರು. (ಸಾಧಾರಣ) (LO-12)

**4.** ಪುಸ್ತಕದ ಪುಟಗಳನ್ನು ಹರಿಯುವುದು _____________ (ಸಾಧಾರಣ) (LO-12)

**5.** ಪ್ರಸಾದರು ತಾವು ____________ಸೇವಕ ಎಂದು ಹೇಳುತ್ತಿದ್ದರು. (ಸಾಧಾರಣ) (LO-12)

**6.** ಜಾಮಿಯಾ ಮಿಲಿಯಾ ವಿಶ್ವವಿದ್ಯಾಲಯದ ಸ್ಥಾಪಕರು _______ (ಸಾಧಾರಣ) (LO-12)

**7.** ಮಕ್ಕಳಿಗೆ ತಮ್ಮ ____________ ಅರಿವಾಗಬೇಕು ಎಂದೆನಿಸಿತು. (ಸಾಧಾರಣ) (LO-12)

**8.** ವಿದ್ಯಾರ್ಥಿಗಳಿಗೆ ಬುದ್ಧಿ ಕಲಿಸಲು ತಾವೇ ಒಂದು ____________ಕಂಡುಕೊಂಡರು. (ಸಾಧಾರಣ) (LO-12)

**9.** ಒಂದಿಬ್ಬರು ______ ಹಾಕಿಸಿಕೊಂಡೂ ಆಗಿತ್ತು. (ಸಾಧಾರಣ) (LO-12)

**III. ಕೆಳಗಿನ ಪದಗಳಿಗೆ ಸರಿಹೊಂದುವ ಪದವನ್ನು ಆರಿಸಿ ಬರೆಯಿರಿ**: (1 ಅಂಕದ ಪ್ರಶ್ನೆಗಳು **)**

**10.** ಕನ್ನಡ ವರ್ಣಮಾಲೆಯಲ್ಲಿರುವ ಅಕ್ಷರಗಳು ______ (ಸಾಧಾರಣ) (LO-15)

ಎ) 49 ಬಿ) 50

ಸಿ) 47 ಡಿ) 52

**11.** ಕನ್ನಡ ವರ್ಣಮಾಲೆಯಲ್ಲಿರುವ ಸ್ವರಾಕ್ಷರಗಳ ಸಂಖ್ಯೆ ________ (ಸಾಧಾರಣ) (LO-15)

ಎ) 15 ಬಿ) 18

ಸಿ) 13 ಡಿ) 25

**12.** ಅನುಸ್ವಾರ ಮತ್ತು ವಿಸರ್ಗ ಎಂಬುದು_________ (ಸಾಧಾರಣ) (LO-15)

ಎ) ಸ್ವರಾಕ್ಷರಗಳು ಬಿ) ಯೋಗವಾಹಗಳು

ಸಿ) ವ್ಯಂಜನಾಕ್ಷರಗಳು ಡಿ) ದೀರ್ಘಸ್ವರಗಳು

**13.** ಅನುನಾಸಿಕ ಅಕ್ಷರಕ್ಕೆ ಉದಾಹರಣೆ______ (ಸಾಧಾರಣ) (LO-15)

ಎ) ಙ ಬಿ) ಕ

ಸಿ) ಇ ಡಿ) ಚ

**14.** ರಾಷ್ಟ್ರದ ಪ್ರಥಮ ಪ್ರಜೆ ____________ (ಸಾಧಾರಣ) ( LO-2)

ಎ) ಪ್ರಧಾನಮಂತ್ರಿ ಬಿ) ರಾಷ್ಟ್ರಾಧ್ಯಕ್ಷರು

ಸಿ) ರಾಜ್ಯಪಾಲರು ಡಿ) ಮುಖ್ಯಮಂತ್ರಿ

**15.** ಆದೇಶ ಪದದ ಅರ್ಥ____________ (ಸಾಧಾರಣ) ( LO-12)

ಎ) ಬೇರೆ ದೇಶ ಬಿ) ದೇಶ

ಸಿ) ಆಜ್ಞೆ ಡಿ) ಪಾಲಿಸು

**16.** ನೀಡಿರುವ ಪದಗಳಲ್ಲಿ ಅನುಸ್ವಾರ ಸಹಿತ ಪದ. (ಸಾಧಾರಣ) ( LO-15)

ಎ) ತಂದೆ ಬಿ) ಅಪ್ಪ

ಸಿ) ದುಃಖ ಡಿ) ಸೊನ್ನೆ

**17.** ಉಪಕುಲಪತಿ__________ದ ಮುಖ್ಯಸ್ಥರು. (ಸಾಧಾರಣ) ( LO-2)

ಎ) ಶಾಲೆಯ ಬಿ) ವಿಶ್ವವಿದ್ಯಾಲಯ

ಸಿ) ಕಚೇರಿಯ ಡಿ) ಊರಿನ

**18.** 'ಮಗು' ಪದದ ಬಹುವಚನ ರೂಪ_________ (ಸಾಧಾರಣ) (LO-2)

ಎ) ಮಗುಗಳು ಬಿ) ವಿದ್ಯಾರ್ಥಿಗಳು

ಸಿ) ಮಕ್ಕಳು ಡಿ) ಸುತ

**IV. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.** (1 ಅಂಕದ ಪ್ರಶ್ನೆಗಳು **)**

**19.** ವಿದ್ಯಾರ್ಥಿಗಳಿಗೆ ಬುದ್ಧಿಕಲಿಸಲು ಹುಸೇನರು ಹಾಕಿದ ವೇಷ ಯಾವುದು? (ಸುಲಭ) (LO-2)

**20.** ಯಾವುದು ಒಳ್ಳೆಯ ಅಭ್ಯಾಸವಲ್ಲವೆಂದು ಪ್ರಸಾದರು ಮಕ್ಕಳಿಗೆ ಹೇಳಿದರು? (ಸುಲಭ) (LO-2)

**21.** ಭಾರತದ ಈಗಿನ ರಾಷ್ಟ್ರಪತಿ ಯಾರು? (ಸುಲಭ) (LO-2)

**22.** ಜಾಕಿರ್ ಹುಸೇನ್ ರ ಆದೇಶ ಏನಾಗಿತ್ತು? (ಸುಲಭ) (LO-2)

**23.** ಜಾಮಿಯಾ ಮಿಲಿಯಾ ಎಲ್ಲಿದೆ? (ಸುಲಭ) (LO-2)

**24.** ಸ್ವತಂತ್ರ ಭಾರತದ ಪ್ರಥಮ ರಾಷ್ಟ್ರಾಧ್ಯಕ್ಷರು ಯಾರು? (ಸುಲಭ) (LO-2)

**V. ಆವರಣದಲ್ಲಿ ನೀಡಿರುವ ಉತ್ತರವನ್ನು ಆರಿಸಿ ಬಿಟ್ಟ ಸ್ಥಳವನ್ನು ಪೂರ್ಣಗೊಳಿಸಿ.**

(1 ಅಂಕದ ಪ್ರಶ್ನೆಗಳು)

(ಶಾಂತಿ ಪ್ರಿಯ ರಾಧಮ್ಮ ದೊಡ್ಡ ಹನಸೋಗೆ ವಚನಸಾಗರ ಪ್ರಸಿದ್ಧ ವ್ಯಕ್ತಿಗಳ ಬಾಳಿನಲ್ಲಿ ಒಂದು ದಿನ)

**25.** ಬೆ. ಗೋ. ರಮೇಶ್ ರವರ ವಚನಗಳ ಅಂಕಿತ __________ (ಸಾಧಾರಣ) (LO-12)

**26.** 'ದೊಡ್ಡವರ ದಾರಿ ಪಾಠವನ್ನು____________ ಕೃತಿಯಿಂದ ಆರಿಸಿಕೊಳ್ಳಲಾಗಿದೆ. (ಸಾಧಾರಣ) (LO-12)

**27.** ಬೆ. ಗೋ. ರಮೇಶ್ ರವರ ಜನ್ಮಸ್ಥಳ____________ (ಸಾಧಾರಣ) (LO-12)

**28.** ಬೆ.ಗೋ.ರಮೇಶ್ ರವರಿಗೆ ವಚನ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ತಂದು ಕೊಟ್ಟ ಕೃತಿ_________ (ಸಾಧಾರಣ) (LO-12)

**29.** ಬೆ. ಗೋ. ರಮೇಶ್ ರವರ ತಾಯಿಹೆಸರು _______________ (ಸಾಧಾರಣ) (LO-12)

**VI. ಕೊಟ್ಟಿರುವ ಪದ ಬಳಸಿ ಸ್ವಂತ ವಾಕ್ಯ ರಚಿಸಿ.** (1 ಅಂಕದ ಪ್ರಶ್ನೆಗಳು )

**30.** ರಾಷ್ಟ್ರಪತಿ (ಕಠಿಣ) (LO-12)

**31.** ಕಾಸು (ಕಠಿಣ) (LO-12)

**32.** ಶಿಸ್ತು (ಕಠಿಣ) (LO-12)

VII. **ಕೆಳಗಿನ ವಾಕ್ಯಗಳನ್ನು ಸರಿಯಾದ ಕ್ರಮದಲ್ಲಿ ಜೋಡಿಸಿ ಬರೆಯಿರಿ.** (1 ಅಂಕದ ಪ್ರಶ್ನೆಗಳು )

**33.** ಪ್ರಥಮ/ರಾಷ್ಟ್ರಪತಿಗಳು/ಭಾರತದ/ಡಾ||ರಾಜೇಂದ್ರಪ್ರಸಾದರು (ಸಾಧಾರಣ) (LO-18)

**34.** ಧರಿಸಿ/ಪ್ರತಿನಿತ್ಯ/ಶುಚಿಯಾದ/ಬಟ್ಟೆಗಳನ್ನು (ಸಾಧಾರಣ) (LO-18)

**35.** ಪಾಠಶಾಲೆ/ಮೊದಲ/ಮನೆಯೇ (ಸಾಧಾರಣ) (LO-18)

**36.** ಶಿಸ್ತು/ಸಮಯ ಪಾಲನೆ/ಮುಖ್ಯ/ಬಾಳಿನಲ್ಲಿ/ಬಹಳ (ಸಾಧಾರಣ) (LO-18)

**37.** ಗ್ರಂಥಾಲಯದಲ್ಲಿ /ಬಗೆಯ/ಪುಸ್ತಕಗಳಿವೆ/ಹಲವು/ನಮ್ಮ ಶಾಲೆಯ (ಸಾಧಾರಣ) (LO-18)

**VIII. ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ .** (2 ಅಂಕದ ಪ್ರಶ್ನೆಗಳು)

**38.**ರಾಜೇಂದ್ರ ಪ್ರಸಾದರ ವ್ಯಕ್ತಿತ್ವವನ್ನು ವಿವರಿಸಿ. (ಸಾಧಾರಣ) ( LO-2)

**39.**ರಾಜೇಂದ್ರ ಪ್ರಸಾದರು ಪುಸ್ತಕದ ಮಹತ್ವವನ್ನು ಮಕ್ಕಳಿಗೆ ತಿಳಿಸಿದ ಬಗೆ ಹೇಗೆ ? (ಸಾಧಾರಣ) (LO-2)

**40.**ಜಾಕಿರ್ ಹುಸೇನರು ಮಾಡಿದ ಉಪಾಯದಿಂದ ವಿದ್ಯಾರ್ಥಿಗಳಲ್ಲಿ ಉಂಟಾದ ಬದಲಾವಣೆಗಳೇನು? (ಸಾಧಾರಣ) (LO-2)

**IX . ಕೆಳಗಿನ ವಾಕ್ಯವನ್ನು ಯಾರು - ಯಾರಿಗೆ ಹೇಳಿದರು.** ( 2 ಅಂಕದ ಪ್ರಶ್ನೆಗಳು )

**41. “** ನೋಡಿ ಮಕ್ಕಳೇ ಪುಸ್ತಕಗಳು ಜ್ಞಾನ ಬಂಡಾರ” (ಸಾಧಾರಣ) (LO-2)

**42.**“ತಾತ ನಾವು ಇನ್ನು ಮುಂದೆ ಎಂದು ಪುಸ್ತಕಗಳ ಪುಟಗಳನ್ನು ಹರಿಯುವುದಿಲ್ಲ”(ಸಾಧಾರಣ) (LO-2)

**X .**

**43. ಸಜಾತಿ ಮತ್ತು ವಿಜಾತಿಯ ಸಂಯುಕ್ತಾಕ್ಷರಗಳನ್ನು ವಿಂಗಡಿಸಿ ಬರೆಯಿರಿ.**

**(**1 ಅಂಕದ ಪ್ರಶ್ನೆಗಳು**)** (ಸಾಧಾರಣ) (LO-15)

ಅನ್ನ ,ರಕ್ತ, ಕ್ಷಮಿಸು, ರಕ್ಷಣೆ, ಹಗ್ಗ, ಆಸ್ಪತ್ರೆ, ವ್ಯಂಜನ, ತಾಪತ್ರಯ, ದೃಶ್ಯ, ಆಡುತ್ತಿರುವ, ಇದ್ದಿಲು, ಕತ್ತಲು, ಚಿತ್ರ, ಅರಣ್ಯ, ಪಪ್ಪಾಯಿ, ಸಪ್ಪಳ.

**XI. ಮಾದರಿಯಂತೆ ಅಕ್ಷರಗಳನ್ನು ಬಿಡಿಸಿ ಬರೆಯಿರಿ.** (1 ಅಂಕದ ಪ್ರಶ್ನೆಗಳು**)**

ಮಾದರಿ :- ಕವಲು = ಕ್ + ಅ ವ್ + ಅ ಲ್ + ಉ

**44.** ಹಗ್ಗ : ____________________ (ಸಾಧಾರಣ) (LO-18)

**45.** ರಕ್ತ : ____________________ (ಸಾಧಾರಣ) (LO-18)

**46.** ಬಾಯಾರಿಕೆ : ____________________ (ಸಾಧಾರಣ) (LO-18)

**47.** ಹೋಲಿಕೆ : ____________________ (ಸಾಧಾರಣ) (LO-18)

**48.** ಸಂತೆ : ____________________ (ಸಾಧಾರಣ) (LO-18)

**XII.**

**49. ಬೆ.ಗೋ.ರಮೇಶ್ ರವರ ಕವಿ ಕೃತಿ ಪರಿಚಯವನ್ನು ಸಂಕ್ಷಿಪ್ತವಾಗಿ ಬರೆಯಿರಿ.** (ಕಠಿಣ) (LO-2)

(3 ಅಂಕದ ಪ್ರಶ್ನೆಗಳು**)**

**XIII.**

**50. "ಪುಸ್ತಕಗಳು ಜ್ಞಾನ ಭಂಡಾರ" ಹೇಗೆ ವಿವರಿಸಿ.** (ಕಠಿಣ) (LO-13)

(3 ಅಂಕದಪ್ರಶ್ನೆಗಳು**)**




**XVI.**

**51. ಈ ಅಕ್ಷರಗಳನ್ನು ಬಳಸಿ 10 ಪದಗಳನ್ನು ರಚಿಸಿ.** (ಕಠಿಣ) (LO-18) (1 ಅಂಕದ ಪ್ರಶ್ನೆಗಳು)



XV.

**52. ಕೆಳಗಿನ ಸನ್ನಿವೇಶದ ಚಿತ್ರವನ್ನು ಗಮನಿಸಿ ನೀಡಿರುವ ಬಹುಆಯ್ಕೆ ಪ್ರಶ್ನೆಗಳಿಗೆ ಉತ್ತರವನ್ನು ಆರಿಸಿ ಬರೆಯಿರಿ.** **(ಕಠಿಣ)** (1 ಅಂಕದ ಪ್ರಶ್ನೆಗಳು **)** (LO-13)




**ಪ್ರಶ್ನೆಗಳು**

**1**. ಮಕ್ಕಳು ಈ ವ್ಯಕ್ತಿಗೆ ಸಹಾಯ ಮಾಡುತ್ತಿದ್ದಾರೆ.

ಎ) ಸ್ನೇಹಿತರು  ಬಿ) ಶಿಕ್ಷಕರು

ಸಿ) ಹಿರಿಯ ನಾಗರಿಕರು  ಡಿ) ಅಂಗಡಿಯವರು

**2.** ಮಕ್ಕಳು ಹಿರಿಯರಿಗೆ  ಮಾಡಿದ ಸಹಾಯ ಇದು.

ಎ) ಆಟವಾಡಿಸಿದರು  ಬಿ) ರಸ್ತೆ ದಾಟಲು ಸಹಾಯ ಮಾಡಿದರು

ಸಿ) ಓಡಲು ಹೇಳಿದರು  ಡಿ) ಮನೆಗೆ ಕಳುಹಿಸಿದರು

**3.** ಹಿರಿಯರಿಗೆ ಸಹಾಯ ಮಾಡುವುದು ಯಾವ ಗುಣವನ್ನು ತೋರಿಸುತ್ತದೆ?

ಎ) ಮಾನವೀಯತೆ  ಬಿ) ಸೋಮಾರಿತನ

ಸಿ) ಕೋಪ  ಡಿ) ಅಹಂಕಾರ

**4.** ರಸ್ತೆ ದಾಟುವಾಗ ಹಳದಿ ದೀಪ ನೀಡುವ ಸೂಚನೆ ಇದು

ಎ) ರಸ್ತೆ ದಾಟುವುದು  ಬಿ) ರಸ್ತೆ ದಾಟಲು ಸಿದ್ಧವಾಗುವುದು

ಸಿ) ನಿಲ್ಲುವುದು  ಡಿ) ಹಿಂದೆ ಸರಿಯುವುದು

**5.** ಈ ಸನ್ನಿವೇಶದಿಂದ ನಾವು ಏನು ಕಲಿಯುತ್ತೇವೆ?

ಎ) ಜಗಳ ಮಾಡುವುದು

ಬಿ) ಸಮಯ ವ್ಯರ್ಥ ಮಾಡುವುದು

ಸಿ) ಅಗತ್ಯವಿರುವವರಿಗೆ ಸಹಾಯ ಮಾಡುವುದು

ಡಿ) ಹಿರಿಯರನ್ನು ನಿರ್ಲಕ್ಷಿಸುವುದು

XVI.

53. ಕೆಳಗಿನ ಚಿತ್ರಸನ್ನಿವೇಶಗಳನ್ನು ಗಮನಿಸಿ ಮುಂದಿನ ಸನ್ನಿವೇಶದಲ್ಲಿನ ಸಂಭಾಷಣೆಯನ್ನು ಪೂರ್ಣಗೊಳಿಸಿ ಅದಕ್ಕೆ ಸೂಕ್ತವಾದ ಶೀರ್ಷಿಕೆಯನ್ನು ನೀಡಿ.

**(ಕಠಿಣ)** (3 ಅಂಕದಪ್ರಶ್ನೆಗಳು) **(LO-13)**




ರಮೇಶನು ಶಾಲೆಗೆ ಹೋಗುವಾಗ ರಸ್ತೆಯಲ್ಲಿ ಒಂದು ಹಣದ ಪರ್ಸ್ ಕಂಡನು.




ಪರ್ಸ್ ತೆರೆದು ನೋಡಿದಾಗ ಅದರಲ್ಲಿ ಹಣ ಮತ್ತು ಗುರುತಿನ ಚೀಟಿ ಇತ್ತು.




ರಮೇಶ ಹಣವನ್ನು ತನ್ನ ಬಳಿ ಇಟ್ಟು ಕೊಳ್ಳದೇ ಪರ್ಸ್ ಮಾಲೀಕರನ್ನು ಹುಡುಕಲು ನಿರ್ಧರಿಸಿದನು.




ಗುರುತಿನ ಚೀಟಿಯ ಸಹಾಯದಿಂದ ಪರ್ಸ್ ಕಳೆದುಕೊಂಡ ವ್ಯಕ್ತಿಯನ್ನು ಕಂಡುಕೊಂಡನು




ರಮೇಶ ಪರ್ಸ್ ಅನ್ನು ಅದರ ಮಾಲೀಕರಿಗೆ ಹಿಂತಿರುಗಿಸಿದನು.




----------------------------------- **?**

**ಗದ್ಯ ಪಾಠ- 2**

# ಗಂಧರ್ವ ಸೇನ

## ಕ್ಲಿಷ್ಟತೆಯ ಮಟ್ಟ

| ಕ್ರ.ಸಂ | ಕಠಿಣತೆಯ ಮಟ್ಟ | ಪ್ರಶ್ನೆ | ಅಂಕ | ಶೇಕಡ |
|---|---|---|---|---|
| 01 | ಸುಲಭ | 11 | 11 | 20.37 |
| 02 | ಸಾಧಾರಣ | 21 | 26 | 48.14 |
| 03 | ಕಠಿಣ | 09 | 17 | 31.48 |
| 04 | ಒಟ್ಟು | 41 | 54 | 100 |

## ಉದ್ದಿಷ್ಟವಾರು ಅಂಕ ಹಂಚಿಕೆ

| ಕ್ರ. ಸಂ | ಉದಿಷ್ಟಗಳು | ಪ್ರಶ್ನೆ | ಅಂಕ | ಶೇಕಡ |
|---|---|---|---|---|
| 1 | ಜ್ಞಾನ | 20 | 22 | 31.42 |
| 2 | ಗ್ರಹಿಕೆ | 26 | 28 | 48.00 |
| 3 | ಅಭಿವ್ಯಕ್ತಿ | 03 | 11 | 15.71 |
| 4 | ಪ್ರಶಂಸೆ | 03 | 09 | 12.85 |
| 5 | ಒಟ್ಟು | 52 | 70 | 100 |

**I. ಪದಗಳ ಅರ್ಥ ಬರೆಯಿರಿ.** (1 ಅಂಕದ ಪ್ರಶ್ನೆಗಳು**)**

**1.** ನಿಟ್ಟುಸಿರು (ಕಠಿಣ) (LO-12)

**2.** ಪರಿಸಮಾಪ್ತಿ (ಕಠಿಣ) (LO-12)

**3.** ಮಾರ್ನುಡಿ (ಕಠಿಣ) (LO-12)

**4.** ಉದ್ಘರಿಸು (ಕಠಿಣ) (LO-12)

**5.** ಒಡ್ಡೋಲಗ (ಕಠಿಣ) (LO-12)

**II. ಕೊಟ್ಟಿರುವ ಪ್ರತಿ ಪ್ರಶ್ನೆಗೂ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ ಇವುಗಳಿಗೆ ಕ್ರಮಾಕ್ಷರದೊಂದಿಗೆ ಬರೆಯಿರಿ.** (1 ಅಂಕದ ಪ್ರಶ್ನೆಗಳು)

**6.** ಗಂಧರ್ವ ಸೇನಾ ಎಂಬುದು____________________ (ಸಾಧಾರಣ) (LO-2)

ಎ) ಕುದುರೆ ಬಿ) ಸಿಂಹ
ಸಿ) ಕತ್ತೆ ಡಿ) ಆನೆ

**7.** ಇವುಗಳಲ್ಲಿ ಅಂಕಿತನಾಮಕ್ಕೆ ಉದಾಹರಣೆಯ ಪದವಿದು (ಸಾಧಾರಣ) (LO-12)

ಎ) ಕಾವೇರಿ ಬಿ) ಮನುಷ್ಯ

ಸಿ) ವಿದ್ವಾಂಸ ಡಿ) ಹೊಸದು

**8.** ಕೆಳಗಿನವರಲ್ಲಿ ಚುರುಕು ಬುದ್ಧಿಯವರು (ಸಾಧಾರಣ) (LO-2)

ಎ) ಮಂತ್ರಿ ಬಿ) ಸೇವಕಿ

ಸಿ) ಸೈನಿಕ ಡಿ) ಮಡಿವಾಳ್ತಿ

**9.** ರಾಜನ ಒಡ್ಡೋಲಗಕ್ಕೆ ಅಳುತ್ತಾ ಬಂದವರು ______________ (ಸಾಧಾರಣ) (LO-2)

ಎ) ರಾಣಿ ಬಿ) ಸೇವಕಿ

ಸಿ) ಪ್ರಜೆ ಡಿ) ಮಂತ್ರಿ

**10.** ರಾಜನಿಗೆ ಗಂಧರ್ವ ಸೇನ ತೀರಿಹೋದ ವಿಷಯವನ್ನು ತಿಳಿಸಿದವರು___________ (ಸಾಧಾರಣ) (LO-2)

ಎ) ಮಂತ್ರಿ ಬಿ) ರಾಣಿ

ಸಿ) ಸೇವಕಿ ಡಿ) ಸೈನಿಕ

**11.** 'ಅಂತಃಪುರ' ಪದದ ಅರ್ಥ__________________ (ಸಾಧಾರಣ) (LO-12)

ಎ) ರಾಜಾಗೃಹ ಬಿ) ರಾಣಿವಾಸ

ಸಿ) ರಾಜಸಭೆ ಡಿ) ಸೇವಕಿಯರ ವಾಸ

**III. ಕೊಟ್ಟಿರುವ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಕೊಟ್ಟಿರುವ ಮೂರನೇ ಪದಕ್ಕೆ ಸಂಬಂಧ ಹೊಂದುವ ಪದವನ್ನು ಬರೆಯಿರಿ. (1ಅಂಕದ ಪ್ರಶ್ನೆಗಳು)**

**12.** ಗೌರಿಯು : ಪ್ರಥಮ ವಿಭಕ್ತಿ :: ಗೌರಿಗೆ :------------ (ಸಾಧಾರಣ) (LO-17)

**13.** ಮೂಗು ತೂರಿಸು : ನುಡಿಗಟ್ಟು : : ಮುಚ್ಚಿಟ್ಟಿದ್ದು ಮಣ್ಣಿನ ಪಾಲು :---------- (ಸಾಧಾರಣ) (LO-17)

**14.** ಪರ್ವತ : ರೂಢನಾಮ : : ಶಿಕ್ಷಕಿ : --------------------- (ಸಾಧಾರಣ) (LO-12)

**15.** ರಾಜ : ಪುಲ್ಲಿಂಗ : : ಭಾರ್ಗವಿ :------------------------ (ಸಾಧಾರಣ) (LO-12)

**IV . ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.** (1 ಅಂಕದ ಪ್ರಶ್ನೆಗಳು)

**16.** ಮಂತ್ರಿ ಅಳುತ್ತಾ ರಾಜನ ಬಳಿ ಏನೆಂದು ಹೇಳಿದನು? (ಸುಲಭ) (LO-2)

**17.** ಅಳುತ್ತಿದ್ದ ರಾಜನ ಬಗ್ಗೆ ಸೇವಕಿಯು ರಾಣಿಯಿಂದ ಪಡೆದ ಉತ್ತರವೇನು ? (ಸುಲಭ) (LO-2)

**18.** ರಾಜನು ಮಂತ್ರಿಯನ್ನು ಏನೆಂದು ಪ್ರಶ್ನಿಸಿದನು? (ಸುಲಭ) (LO-2)

**19.** ಗಂಧರ್ವ ಸೇನಾ ಯಾರು? (ಸುಲಭ) (LO-2)

**20.** ರಾಣಿಯರ ನಗುವಿಗೆ ಕಾರಣವೇನು? (ಸುಲಭ) (LO-2)

**21.** ಗಂಧರ್ವಸೇನ ತೀರಿಕೊಂಡ ವಿಷಯವನ್ನು ರಾಜ ಯಾರಿಗೆ ಹೇಳಿದ? (ಸುಲಭ) (LO-2)

**V.**

**22. ಹೊಂದಿಸಿ ಬರೆಯಿರಿ**: (1 ಅಂಕದ ಪ್ರಶ್ನೆಗಳು)

**1**. ಅಂಕಿತ ನಾಮ ಅ) ರೂಢಿಯಿಂದ ಬಂದ ಪದಗಳು. (ಸಾಧಾರಣ) (LO-12)

**2**. ರೂಢನಾಮ ಆ) ರೂಪ ಗುಣ ಸ್ವಭಾವಾದಿ ವಿಶೇಷವಾದ ಅರ್ಥಕ್ಕೆ ಅನುಗುಣವಾಗಿ ಬಂದ ಹೆಸರು. (ಸಾಧಾರಣ) (LO-12)

**3**. ಅನ್ವರ್ಥನಾಮ ಇ) ಗುರುತಿಗಾಗಿ ಹಾಗು ವ್ಯವಹಾರದ ಉಪಯೋಗಕ್ಕೆ ಇಟ್ಟುಕೊಂಡ ಹೆಸರು. (ಸಾಧಾರಣ) (LO-12)

**VI. ಅಡಿಗೆರೆ ಎಳೆದ ಪದವನ್ನು ಸರಿಪಡಿಸಿ ಬರೆಯಿರಿ.** (1ಅಂಕದ ಪ್ರಶ್ನೆಗಳು **)**

**23.** ತೋಟದಲ್ಲಿ **ಗಂಡಸರು** ಕೆಲಸ ಮಾಡುತ್ತಿದ್ದಾನೆ. (ಸುಲಭ) (LO-12)
**24.** ಸುಧಾಳಿಗೆ ಒಬ್ಬಳೇ **ಅಕ್ಕಂದಿರು** ಇರುವಂತೆ ಕಾಣುತ್ತದೆ. (ಸುಲಭ) (LO-12)
**25.** ಕಾಡಿನಲ್ಲಿ **ಪ್ರಾಣಿ** ಸಭೆ ಸೇರಿದವು. (ಸುಲಭ) (LO-12)
**26.** **ಮಗು** ಸಭೆಯಲ್ಲಿ ಕುಳಿತಿದ್ದರು. (ಸುಲಭ) (LO-12)

**VII. ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ.** (2 ಅಂಕದ ಪ್ರಶ್ನೆಗಳು **)**

**27.** ಮಂತ್ರಿ ಮತ್ತು ಪಡೆಯ ಮುಖ್ಯಸ್ಥನ ನಡುವೆ ನಡೆದ ಸಂವಾದವನ್ನು ತಿಳಿಸಿ. (ಸಾಧಾರಣ) (LO-2)
**28.** ಗಂಧರ್ವಸೇನನ ವಿಷಯವನ್ನು ಪಡೆಯ ಮುಖ್ಯಸ್ಥನ ಹೆಂಡತಿ ತಿಳಿಸಿದ ಬಗೆ ಹೇಗೆ?
(ಸಾಧಾರಣ) (LO-2)
**29.** ಗಂಧರ್ವ ಸೇನಾ ಪಾಠದಲ್ಲಿ ಬರುವ ಪಾತ್ರಗಳು ಯಾವುವು? (ಸಾಧಾರಣ) (LO-2)

**VIII. ಕೆಳಗಿನ ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರಿಸಿ.** (3 ಅಂಕದ ಪ್ರಶ್ನೆಗಳು**)**

**30.** ಗಂಧರ್ವಸೇನಾ ಯಾರು ಎಂಬುದನ್ನು ತಿಳಿಯಲು ಮಂತ್ರಿಯೂ ಮಾಡಿದ ಪ್ರಯತ್ನಗಳೇನು?
(ಕಠಿಣ) (LO-2)
**31.** ಮಡಿವಾಳ್ತಿಯು ಗಂಧರ್ವ ಸೇನನ ವಿಚಾರವನ್ನು ಕುರಿತು ತನ್ನ ಮನಸ್ಸಿನ ನೋವನ್ನು ಯಾವ ರೀತಿ ವ್ಯಕ್ತಪಡಿಸಿದಳು? (ಕಠಿಣ) (LO-2)

**IX. ಸಂದರ್ಭ ಸಹಿತ ವಿವರಿಸಿ.** (3 ಅಂಕದ ಪ್ರಶ್ನೆಗಳು**)**

**32.** " ರಾಜ ಅಲ್ಲಿಯೂ ಕರುಳು ಕಿತ್ತು ಬರುವಂತೆ ಅಳತೊಡಗಿದ". (ಸಾಧಾರಣ) (LO-1)
**33.** " ಮಹಾರಾಜರೇ ಗಂಧರ್ವ ಸೇನರು ತೀರಿಕೊಂಡರಂತೆ". (ಸಾಧಾರಣ) (LO-1)
**34.** " ನಿನ್ನೆ ರಾತ್ರಿ ಕಣ್ಣು ಮುಚ್ಕೊಂಡ್ಬಿಟ್ಟ". (ಸಾಧಾರಣ) (LO-1)
**35.** "ಒಂದು ಕುರಿ ಹಳ್ಳಕ್ಕೆ ಬಿದ್ದರೆ ಎಲ್ಲಾ ಬಿದ್ದವು". (ಸಾಧಾರಣ) (LO-1)
**36.** "ಸ್ವಾಮಿ ಅವರು ಯಾರು? ಏನಾಗಿದ್ದರು? ಎಂದು ನನಗೆ ತಿಳಿಯದು" (ಸಾಧಾರಣ) (LO-1)

**X.**
**37. ಈ ಕೆಳಗಿನವುಗಳಲ್ಲಿ ನುಡಿಗಟ್ಟು ಗಾದೆ ಒಗಟುಗಳಾಗಿ ವಿಂಗಡಿಸಿ ಬರೆಯಿರಿ.** (ಸಾಧಾರಣ)
(1 ಅಂಕದ ಪ್ರಶ್ನೆಗಳು **)** (LO-10)

ಮೂಗು ತೂರಿಸು, ಚಿಕ್ಕ ತೋಟ, ಚೂರು ಕಸ ಬಿದ್ದರೆ ಹಾಳು, ಕಾಲಿಗೆ ಬುದ್ಧಿ ಹೇಳು, ಚಿನ್ನದ ಪೆಟ್ಟಿಗೆಯಲ್ಲಿ ಬೆಳ್ಳಿ ಲಿಂಗ, ದಾಸ್ ಬುರುಡೆ ದೌಲತ್ ಬುರುಡೆ ಲೋಕಕ್ಕೆಲ್ಲ ಎರಡೆ ಬುರುಡೆ, ಮುಚ್ಚಿಟ್ಟದ್ದು ಮಣ್ಣಿನ ಪಾಲು, ಕೇಳಿದ ಕಿವಿ ಊರಿಗೆ ಮಾರಿ ತಂದಿತು.

**XII.**

**38. ಈ ನಾಮಪದಗಳಲ್ಲಿರುವ ವಿಭಕ್ತಿ ಪ್ರತ್ಯಯಗಳನ್ನು ಗುರುತಿಸಿ.** (ಕಠಿಣ)

(1 ಅಂಕದ ಪ್ರಶ್ನೆಗಳು **)** ( LO-12)

| **ನಾಮಪದ** | **ವಿಭಕ್ತಿ** |
| --- | --- |
| ಸುರೇಶನು | |
| ಶಾಲೆಯಲ್ಲಿ | |
| ಕಣ್ಣನ್ನು | |
| ದೂರದಿಂದ | |
| ಮನೆಯ | |
| ರಾಣಿಗೆ | |
| ನಿನ್ನ ದೆಸೆಯಿಂದ | |

**XIII.**

**39. ಕೊಟ್ಟಿರುವ ಗದ್ಯವನ್ನು ಓದಿ ಅರ್ಥೈಸಿಕೊಂಡು ಅಡಿಗೆರೆ ಎಳೆದ ಪದಗಳಲ್ಲಿರುವ ವಿಭಕ್ತಿ ಪ್ರತ್ಯಯಗಳನ್ನು ಬರೆಯಿರಿ.** (ಕಠಿಣ) (1 ಅಂಕದ ಪ್ರಶ್ನೆಗಳು **)** (LO-12)

**"ಊರಿಗೊಂದು ವನ"**

ಒಂದು ಸುಂದರವಾದ ಊರು ಆ ಊರಿನಲ್ಲಿದ್ದ ಅರಸ ಊರಿನ **ಜನರನ್ನು** ಚೆನ್ನಾಗಿ ನೋಡಿಕೊಳ್ಳುತ್ತಿದ್ದನು. ಜನರು ನೆಮ್ಮದಿಯಿಂದ ಜೀವನ ಮಾಡುತ್ತಿದ್ದರು. ಅಲ್ಲಿ ಬೇರೆ ಬೇರೆ ಭಾಷೆ ಮಾತನಾಡುವ ಜನರಿದ್ದರು. ರಾಜ ಆ ಊರನ್ನು ಶತ್ರುಗಳಿಂದ ಕಾಪಾಡಲು ದಟ್ಟವಾದ ಕಾಡನ್ನು **ಊರಿನ** ಸುತ್ತ ಬಳಸಿದ್ದರು. ಆ ವನದ ತುಂಬಾ ವಿವಿಧ ರೀತಿಯ ಗಿಡಮರಗಳಿವೆ ಮರದ ತುಂಬಾ ಹಕ್ಕಿಗಳ ಚಿಲಿಪಿಲಿ ಶಬ್ದ ಕಿವಿಗೆ ಇಂಪಾಗಿ ಕೇಳಿಸುತ್ತಿತ್ತು.

ಒಂದು ದಿನ ಅಮರನು **ಮನೆಯಲ್ಲಿ** ಅಡುಗೆ ಮಾಡಲು ಸೌದೆ ಖಾಲಿಯಾಗಿದ್ದರಿಂದ ಸೌದೆಯನ್ನು ಹುಡುಕಿ ಗರಗಸ ತೆಗೆದುಕೊಂಡು ವನದ ಕಡೆಗೆ ನಡೆದನು. ಅಮರನಿಗೆ ಮನದಲ್ಲೇ ಒಣಗಿರುವ ಮರ ಒಂದು ಕಾಣಿಸಿತು ತನ್ನ **ಗರಗಸದಿಂದ** ಮರವನ್ನು ಕಡಿಯಲು ಮುಂದಾದನು. ಇದನ್ನು ವನದಲ್ಲಿರುವ ಪಕ್ಷಿಗಳನ್ನು ನೋಡಲು ವನಜ ತನ್ನ ತಂದೆಯ ಜೊತೆಗೆ ಬಂದಿದ್ದಳು. ಅಮರನು ಗರಗಸದಿಂದ ಮರವನ್ನು ಕಡಿಯುತ್ತಿರುವುದನ್ನ ಗಮನಿಸಿದ ವನಜ ಊರಿನ **ಅರಸನಿಗೆ** ದೂರು ಕೊಟ್ಟಳು. ವನಜ ಮತ್ತು ಅಮರನನ್ನು ಅರಸ ಅರಮನೆಗೆ ಕರೆಸಿದನು. ವನದಲ್ಲಿರುವ ಮರ ಕಡಿಯುವುದು ತಪ್ಪೆಂದು ಅಮರನಿಗೆ ಹೊಲದಲ್ಲಿ ನೂರು ಮರಗಳನ್ನು ಬೆಳೆಸಲು ಅರಸನು ಸೂಚಿಸಿದನು. ಇದರಿಂದ ವನಜ ಸಂತೋಷಗೊಂಡಳು ಮತ್ತು ಅಮರನಿಗೆ ಮರ ಬೆಳೆಸಲು ಸಹಾಯ ಮಾಡಿದಳು.

**XIV.**

**40. ಪಠ್ಯವನ್ನು ಓದಿ ಪುಲ್ಲಿಂಗ ಸ್ತ್ರೀಲಿಂಗ ಮತ್ತು ನಪುಂಸಕ ಲಿಂಗಗಳನ್ನು ಪ್ರತಿನಿಧಿಸುವ ಪದಗಳನ್ನು ಆರಿಸಿ ಬರೆಯಿರಿ.** (ಸಾಧಾರಣ) (1 ಅಂಕದ ಪ್ರಶ್ನೆಗಳು **)** (LO-8)

ಕನ್ನಡ ನಾಡು ಕವಿ ಶ್ರೇಷ್ಠ ಬೀಡು. ಪಂಪ ರನ್ನ ಜನ್ನ ಪೊನ್ನ ಅಕ್ಕಮಹಾದೇವಿ ಲಕ್ಷ್ಮೀಶ ಷಡಕ್ಷರಿ ಗಂಗಾಂಬಿಕೆ ತ್ರಿವೇಣಿ ಮುದ್ದಣ್ಣ ಕುವೆಂಪು ಬೇಂದ್ರೆ ಅಮುಗೆ ರಾಯಮ್ಮ ಶಿವಶರಣೆ ಲಿಂಗಮ್ಮಅಂಬಿಗರ ಚೌಡಯ್ಯ ಪುರಂದರದಾಸರು ಕನಕದಾಸರು ಮುಂತಾದ ಕವಿಗಳು ಜನಿಸಿದ್ದಾರೆ. ಈ ಕವಿಗಳಿಂದ ಕನ್ನಡದ

ಕಂಪು ಜಗದ ತುಂಬಾ ಹರಡಿದೆ. ಕನ್ನಡ ನಾಡಿನ ಪ್ರಕೃತಿ ವೈಶಿಷ್ಟ್ಯ ಪೂರ್ಣವಾದದ್ದು. ಪಕ್ಷಿ ಮತ್ತು ಪುಷ್ಪಗಳನ್ನು ನೀಡುವ ತರ ತರದ ಲತೆಗಳಿವೆ. ಪ್ರಾಣಿ ಪಕ್ಷಿ ಉರಗಗಳ ಹಾಗೂ ನದಿ ನಗರ ಪರ್ವತಗಳ ಸಮೂಹವೇ ಕನ್ನಡ ನಾಡಿನಲ್ಲಿದೆ.

**XV.**

**41. ಕೆಳಗೆ ನೀಡಿರುವ ಗದ್ಯಭಾಗವನ್ನು ಓದಿ ಅರ್ಥೈಸಿಕೊಂಡು ಕೊಟ್ಟಿರುವ ಬಹುಆಯ್ಕೆ ಪ್ರಶ್ನೆಗಳಿಗೆ ಉತ್ತರಿಸಿ.**



ಒಂದು ಹಳ್ಳಿಯಲ್ಲಿ ನಾಲ್ವರು ಸ್ನೇಹಿತರು ವಾಸಿಸುತ್ತಿದ್ದರು. ಅವರು ಯಾವಾಗಲೂ ಒಟ್ಟಾಗಿ ಕೆಲಸ ಮಾಡುತ್ತಿದ್ದರು. ಒಂದು ದಿನ ಗ್ರಾಮದ ಕೆರೆಯನ್ನು ಸ್ವಚ್ಛಗೊಳಿಸುವ ಕೆಲಸ ಆರಂಭಿಸಿದ್ದರು. ಕೆಲವರು ಇದು ನಮ್ಮಿಂದ ಆಗುವುದಿಲ್ಲ ಎಂದು ಕೈಚೆಲ್ಲಿದರು. ಆದರೆ ಆ ನಾಲ್ವರು ಸ್ನೇಹಿತರು ಧೈರ್ಯ ಕಳೆದುಕೊಳ್ಳಲಿಲ್ಲ. ಎಲ್ಲರನ್ನು ಸೇರಿಸಿ ಕೆಲಸ ಆರಂಭಿಸಿದರು. ಅವರ ಪರಿಶ್ರಮವನ್ನು ನೋಡಿ ಗ್ರಾಮಸ್ಥರಿಗೂ ಕೈಜೋಡಿಸುವ ಮನಸ್ಸಾಯಿತು. ಎಲ್ಲರೂ ಸೇರಿ ದುಡಿದು ಪರಿಣಾಮ ಕೆರೆ ಸ್ವಚ್ಛವಾಯಿತು. ಗ್ರಾಮದ ಹಿರಿಯ ಮಕ್ಕಳನ್ನು ಮೆಚ್ಚಿ "ಒಗ್ಗಟ್ಟಿದ್ದರೆ ಯಶಸ್ಸು ಖಂಡಿತ" ಸಿಗುತ್ತದೆ ಎಂದು ಹೇಳಿದರು.

**ಪ್ರಶ್ನೆಗಳು**

**1.** ಕೊಟ್ಟಿರುವ ಚಿತ್ರದಲ್ಲಿ ಜನರು ಮಾಡುತ್ತಿರುವ ಕೆಲಸ. (ಸಾಧಾರಣ) (LO-13)
ಎ) ರಸ್ತೆ ನಿರ್ಮಾಣ ಬಿ) ಮನೆ ಕಟ್ಟುವುದು
ಸಿ) ಕೆರೆ ಸ್ವಚ್ಛಗೊಳಿಸುವುದು ಡಿ) ಮರ ನೆಡುವುದು

**2.** "ಕೈಚೆಲ್ಲಿದರು" ನುಡಿಗಟ್ಟಿನ ಅರ್ಥ (ಸಾಧಾರಣ) ( LO-17)
ಎ) ಕೈ ತೊಳೆಯುವುದು ಬಿ) ಪ್ರಯತ್ನ ಬಿಟ್ಟುಬಿಡುವುದು
ಸಿ) ಸಹಾಯ ಮಾಡುವುದು ಡಿ) ಆಟವಾಡುವುದು

**3.** "ಕೈಜೋಡಿಸುವುದು" ಎಂಬ ನುಡಿಗಟ್ಟಿನ ಅರ್ಥ (ಸಾಧಾರಣ) (LO-17)
ಎ) ಜಗಳ ಮಾಡುವುದು ಬಿ) ಓಡುವುದು
ಸಿ) ಸಹಾಯ ಮಾಡುವುದು ಡಿ) ನಗುವುದು

**4.** ಈ ಗದ್ಯದ ನೀತಿ ಇದಾಗಿದೆ (ಸಾಧಾರಣ) (LO-13)
ಎ) ಒಗ್ಗಟ್ಟಿದ್ದರೆ ಯಶಸ್ಸು ಸಿಗುತ್ತದೆ ಬಿ) ಸಮಯ ವ್ಯರ್ಥ ಮಾಡಬೇಕು
ಸಿ) ಸುಳ್ಳು ಹೇಳಬಾರದು ಡಿ) ಒಬ್ಬರೇ ಕೆಲಸ ಮಾಡುವುದು

# ಗದ್ಯ ಪಾಠ- 3

# ಕೃಷ್ಣ ಸುಧಾಮ

## (ನಾಟಕ)

### ಕ್ಲಿಷ್ಟತೆಯ ಮಟ್ಟ

| ಕ್ರ.ಸಂ | ಕಠಿಣತೆಯ ಮಟ್ಟ | ಪ್ರಶ್ನೆ | ಅಂಕ | ಶೇಕಡ |
|---|---|---|---|---|
| 01 | ಸುಲಭ | 10 | 10 | 15.16 |
| 02 | ಸಾಧಾರಣ | 23 | 37 | 56.06 |
| 03 | ಕಠಿಣ | 5 | 19 | 28.78 |
| 04 | ಒಟ್ಟು | 38 | 66 | 100 |

### ಉದ್ದಿಷ್ಟವಾರು ಅಂಕ ಹಂಚಿಕೆ

| ಕ್ರ ಸಂ | ಉದಿಷ್ಟಗಳು | ಪ್ರಶ್ನೆ | ಅಂಕ | ಶೇಕಡ |
|---|---|---|---|---|
| 1 | ಜ್ಞಾನ | 12 | 12 | 18.18 |
| 2 | ಗ್ರಹಿಕೆ | 20 | 30 | 45.45 |
| 3 | ಅಭಿವ್ಯಕ್ತಿ | 04 | 16 | 24.25 |
| 4 | ಪ್ರಶಂಸೆ | 02 | 08 | 12.12 |
| 5 | ಒಟ್ಟು | 38 | 66 | 100 |

**I. ಕೊಟ್ಟಿರುವ ವಾಕ್ಯಗಳಲ್ಲಿ ಅಡಿಗೆರೆಯ ಎಳೆದಿರುವ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಗುರುತಿಸಿ.** (1 ಅಂಕದ ಪ್ರಶ್ನೆಗಳು **)**

**1.** ಕೃಷ್ಣ ಮತ್ತು ಸುಧಾಮರಿಬ್ಬರು ಪರಮ ಮಿತ್ರರು (ಸಾಧಾರಣ) (LO-12)

ಎ) ಗೆಳೆಯ ಬಿ) ಸ್ನೇಹ

ಸಿ) ಶತ್ರು ಡಿ) ರಾಜ

**2.** ಶ್ರೀ ಕೃಷ್ಣನ ಹತ್ತಿರ ನನ್ನ ಬಡತನ ಹೇಳಿ ಆತನ ಮನಸ್ಸಿಗೆ ಬೇಸರ ಉಂಟು ಮಾಡಬಾರದೆಂದು ಸುಧಾಮ ಯೋಚಿಸಿದನು. (ಸಾಧಾರಣ) (LO-12)

ಎ) ಸಮೀಪ ಬಿ) ದೂರ

ಸಿ) ಕಠಿಣ ಡಿ) ಮೇಲಿನ ಯಾವುದು ಅಲ್ಲ

**3.** ಸುಖದ ದಿನಗಳು ನಮಗೆ ಯಾವಾಗ ಬರುತ್ತವೆ? (ಸಾಧಾರಣ) (LO-12)

ಎ) ಸಂತೋಷ ಬಿ) ಸಿರಿತನ

ಸಿ) ದುಃಖ ಡಿ) ಹಣ

**4.** ಕೃಷ್ಣನು ಸುಧಾಮನ ಮೇಲೆ ಅಪಾರವಾದ <u>ಗೌರವ</u> ಪ್ರೀತಿಯನ್ನು ಹೊಂದಿದ್ದನು. (ಸಾಧಾರಣ) (LO-12)

ಎ) ಕೆಡುಕು ಬಿ) ಅಗೌರವ

ಸಿ) ಅನಿಯಮ ಡಿ) ಸಂಯಮ

**5.** ನೀವು <u>ನೀತಿ</u> ಹೇಳುವುದರಲ್ಲಿ ಬಹಳ ಮುಂದು. (ಸಾಧಾರಣ) (LO-12)

ಎ) ಅನೀತಿ ಬಿ) ವಿನಾಶ

ಸಿ) ಆಶ್ಚರ್ಯ ಡಿ) ಅವನತಿ

**II . ಕೊಟ್ಟಿರುವ ಪದಗಳಿಗೆ ಸ್ವಂತ ವಾಕ್ಯವನ್ನು ರಚಿಸಿ.** (1 ಅಂಕದ ಪ್ರಶ್ನೆಗಳು **)**

**6.** ಪರಮಮಿತ್ರ (ಸಾಧಾರಣ) (LO-12)

**7.** ವಿಶ್ರಾಂತಿ (ಸಾಧಾರಣ) (LO-12)

**8.** ಸತ್ಕಾರ (ಸಾಧಾರಣ) (LO-12)

**9.** ಸಂತೋಷ (ಸಾಧಾರಣ) (LO12)

**10.** ಶ್ರಮಿಸು (ಸಾಧಾರಣ) (LO-12)

**III. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.** (1 ಅಂಕದ ಪ್ರಶ್ನೆಗಳು **)**

**11.** ಗುರುಕುಲದಲ್ಲಿ ಸುಧಾಮನಿಗೆ ಸ್ನೇಹಿತನಾದವರು ಯಾರು? (ಸುಲಭ) (LO-2)

**12.** ಶ್ರೀ ಕೃಷ್ಣನ ಹತ್ತಿರ ಸಹಾಯ ಕೇಳಿ ಎಂದು ಸುಧಾಮನಿಗೆ ಹೇಳಿದವರು ಯಾರು? (ಸುಲಭ) (LO-2)

**13.** ಕೃಷ್ಣನನ್ನು ನೋಡಲು ಸುಧಾಮನು ಬಟ್ಟೆಯಲ್ಲಿ ಏನನ್ನು ಕಟ್ಟಿಕೊಂಡು ಹೋಗಿದ್ದನು? (ಸುಲಭ) (LO-2)

**14.** ಸುಧಾಮನ ಮಕ್ಕಳು ಹಸಿವಿನಿಂದ ಬಳಲುತ್ತಿರಲು ಕಾರಣವೇನು? (ಸುಲಭ) (LO-2)

**15.** 'ಕೃಷ್ಣ - ಸುಧಾಮ' ಎಂಬ ಪಾಠವನ್ನು ವಿ. ಎಸ್. ಶಿರಹಟ್ಟಿ ಮಠ ರವರ ಯಾವ ಕೃತಿಯಿಂದ ಆಯ್ದುಕೊಳ್ಳಲಾಗಿದೆ? (ಸುಲಭ) (LO-2)

**16.** ಸುಧಾಮ ಯಾವುದನ್ನು ಮಾನವ ಧರ್ಮ ಎನ್ನುತ್ತಾನೆ? (ಸುಲಭ) (LO-2)

**17.** ಯಾರಿಗಾಗಿ ಶ್ರೀಕೃಷ್ಣನ ಬಳಿ ಸಹಾಯ ಕೇಳಲು ಸುಧಾಮನ ಪತ್ನಿ ಹೇಳುತ್ತಾಳೆ? (ಸುಲಭ) ( LO-2)

**18.** ಸುಧಾಮನ ಕಣ್ಣಿನಲ್ಲಿ ನೀರು ಏಕೆ ಬಂತು? (ಸುಲಭ) (LO-2)

**19.** ಮನೆಗೆ ಮರಳಿದ ಸುಧಾಮನು ಏನನ್ನು ಕಂಡನು? (ಸುಲಭ) (LO-2)

**20.** ಸುಧಾಮನ ಮನೆಯನ್ನು ಕಟ್ಟಿಸಿದವರು ಯಾರು? (ಸುಲಭ) (LO-2)

**IV. ಕೆಳಗಿನ ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರಿಸಿ.** (3 ಅಂಕದಪ್ರಶ್ನೆಗಳು **)**

**21.** ಕೃಷ್ಣ ಮತ್ತು ಸುಧಾಮರ ಗೆಳೆತನದ ಬಗ್ಗೆ ಬರೆಯಿರಿ. (ಸಾಧಾರಣ) (LO-8)

**22.** ಕೃಷ್ಣ-ಸುಧಾಮನಿಗೆ ಮನೆಯನ್ನು ಕಟ್ಟಿಸಿಕೊಟ್ಟ ಸಂದರ್ಭವನ್ನು ವಿವರಿಸಿ. (ಸಾಧಾರಣ) (LO-8)

**23.** ಗೆಳೆತನದ ಬಗ್ಗೆ ನಿನ್ನದೇ ಆದ ಮಾತುಗಳನ್ನು ಬರೆ. (ಸಾಧಾರಣ) (LO-8)

**V . ಈ ಮಾತನ್ನು ಯಾರು - ಯಾರಿಗೆ ಯಾವಾಗ ಹೇಳಿದರು?** (2 ಅಂಕದ ಪ್ರಶ್ನೆಗಳು)

**24.** "ಬಡತನ ನಮಗಿರಲಿ ಮನೆ ತುಂಬಾ ಮಕ್ಕಳಿರಲಿ ' ಎಂದು ದೇವರಲ್ಲಿ ನೀ ಬೇಡಿಕೊಂಡೆಯೋಹೇಗೆ" ? (ಸಾಧಾರಣ) (LO-2)

**25.** "ಹಸಿವು ಅದನ್ನಾದರೂ ನನಗೆ ಕೊಡಮ್ಮ" (ಸಾಧಾರಣ) (LO-2)
**26.** "ಸುಧಾಮ ನಿನಗೇನು ಬೇಕು" ? (ಸಾಧಾರಣ) (LO-2)
**27.** "ನಿಮ್ಮ ಮಿತ್ರನ ಕೃಪೆಯಿಂದ". (ಸಾಧಾರಣ) (LO-2)
**28.** "ನನ್ನನ್ನು ಕಂಡರೆ ಅವನಿಗೆ ಅಪಾರ ಪ್ರೀತಿ ಸ್ನೇಹ ಗೌರವ". (ಸಾಧಾರಣ) (LO-2)
**29.** "ಹಸಿದಿರುವ ಮಕ್ಕಳಿಗೋಸ್ಕರವಾದರು ಹೋಗಿ ಕೇಳಿ". (ಸಾಧಾರಣ) (LO-2)
**30.** "ನನಗೆ ಗುರಕುಲದ ಜೀವನ ನೆನಪಾಗುತ್ತಿದೆ". (ಸಾಧಾರಣ) (LO-2)
**31.** "ನಿಮಗೂ ರೇಷ್ಮೆಬಟ್ಟೆ ಕೊಟ್ಟಿದ್ದಾರೆ". (ಸಾಧಾರಣ) (LO-2)

**VI.**

**32. ಈ ಕೆಳಗಿನ ನುಡಿಗಟ್ಟುಗಳನ್ನು ಹೊಂದಿಸಿ ಬರೆಯಿರಿ.** (1 ಅಂಕದ ಪ್ರಶ್ನೆಗಳು)

| | | | |
|---|---|---|---|
| **1.** ಮೂಗು ತೂರಿಸು | ಅ) ಮೋಸ ಮಾಡು | (ಸಾಧಾರಣ) | (LO-17) |
| **2.** ಮಂಕುಬೂದಿ | ಆ) ನೊಂದು ಕೊಳ್ಳು | (ಸಾಧಾರಣ) | (LO-17) |
| **3.** ಬೆನ್ನಿಗೆ ಚೂರಿ ಹಾಕು | ಇ) ಮಧ್ಯ ಪ್ರವೇಶಿಸು | (ಸಾಧಾರಣ) | (LO-17) |
| **4.** ಎತ್ತಿದ ಕೈ | ಈ) ಪ್ರವೀಣ | (ಸಾಧಾರಣ) | (LO-17) |
| **5.** ಕರುಳು ಹಿಂಡು | ಉ) ನಂಬಿಕೆ ದ್ರೋಹ | (ಸಾಧಾರಣ) | (LO-17) |

**VII. ಕೆಳಗೆ ಕೊಟ್ಟಿರುವ ಒಗಟನ್ನು ಬಿಡಿಸಿ.** (1 ಅಂಕದ ಪ್ರಶ್ನೆಗಳು) (ಕಠಿಣ) (LO-17)
**33.** ಸೂಜಿ ಗಿಂತ ಸಣ್ಣ ಕಾಗೆ ಗಿಂತ ಕಪ್ಪು.
**34.** ಸುತ್ತ-ಮುತ್ತ ಸುಣ್ಣದ ಗೋಡೆ ಎತ್ತ ನೋಡಿದರು ಬಾಗಿಲಿಲ್ಲ. (ಕಠಿಣ) (LO-17)

**VIII.**

**35. "ಕೈ ಕೆಸರಾದರೆ ಬಾಯಿ ಮೊಸರು" ಈ ಗಾದೆ ಮಾತನ್ನು ಸಂಕ್ಷಿಪ್ತವಾಗಿ ಬರೆಯಿರಿ.**
(ಕಠಿಣ (3 ಅಂಕದ ಪ್ರಶ್ನೆಗಳು ) (LO-17)

**IX.**

**36. ನೀಡಿರುವ ಚಿತ್ರವನ್ನು ಗಮನಿಸಿ ಸಂಭಾಷಣೆಯನ್ನು ಪೂರ್ಣಗೊಳಿಸಿ. ( ಕಠಿಣ)**
(3 ಅಂಕದಪ್ರಶ್ನೆಗಳು ) (LO-12)



**ರಂಗ ಎಂಬ ರೋಗಿ ಹೊಟ್ಟೆ ಹಿಡಿದುಕೊಂಡು ಡಾಕ್ಟರ್ ಕೋಣೆಗೆ ಅವಸರದಿಂದ ಪ್ರವೇಶಿಸಿದ.**

**ರಂಗ** :________________________________________________

**ಡಾಕ್ಟರ್** : ________________________________________________

**ರಂಗ** :________________________________________________

**ಡಾಕ್ಟರ್** :________________________________________________

**ರಂಗ** :________________________________________________

**ಡಾಕ್ಟರ್** :________________________________________________

**X.**

**37. ಚಿತ್ರದಲ್ಲಿ ನೀಡಿರುವ ಸನ್ನಿವೇಶ ಗಮನಿಸಿ (ಶಾಲೆಗೆ ಹೊರಡುವ ಸಮಯ) ತಾಯಿ ಮತ್ತು ಮಗನ ನಡುವೆ ನಡೆಯುವ ಸಂಭಾಷಣೆಯನ್ನು ನಿನ್ನದೇ ಮಾತುಗಳಲ್ಲಿ ಬರೆ.** (3 ಅಂಕದಪ್ರಶ್ನೆಗಳು **)**
(ಕಠಿಣ) (LO-13)



**XI.**

**38. ಬುದ್ಧನು ಅಂಗುಲೀಮಾಲನ ಮನಸ್ಸನ್ನು ಪರಿವರ್ತಿಸಿದ ಕಥೆಯ ಲಿಂಕ್ ಅನ್ನು QR CODE ಮೂಲಕ ನೀಡಲಾಗಿದೆ. (ಶಿಕ್ಷಕರು ತಮ್ಮ ಮೊಬೈಲ್‌ನಲ್ಲಿ QR CODE scan ಮೂಲಕ ಈ ಕಥೆಯನ್ನುಮಕ್ಕಳಿಗೆ ಕೇಳಿಸಿ ಪ್ರಶ್ನೆಗಳನ್ನು ಕೇಳಿ ಉತ್ತರವನ್ನು ದೃಢೀಕರಿಸಿ.)** (ಸಾಧಾರಣ)
(3 ಅಂಕದಪ್ರಶ್ನೆಗಳು ) (LO-6)

*** *** ***

# ಗದ್ಯ ಪಾಠ - 4

## ಡಾ. ರಾಜಕುಮಾರ

**ಕ್ಲಿಷ್ಟತೆಯ ಮಟ್ಟ**

| ಕ್ರ.ಸಂ | ಕಠಿಣತೆಯ ಮಟ್ಟ | ಪ್ರಶ್ನೆ | ಅಂಕ | ಶೇಕಡ |
|---|---|---|---|---|
| 01 | ಸುಲಭ | 12 | 12 | 22.64 |
| 02 | ಸಾಧಾರಣ | 14 | 23 | 4339 |
| 03 | ಕಠಿಣ | 7 | 18 | 33.96 |
| 04 | ಒಟ್ಟು | 33 | 53 | 100 |

**ಉದ್ದಿಷ್ಟವಾರು ಅಂಕ ಹಂಚಿಕೆ**

| ಕ್ರ ಸಂ | ಉದಿಷ್ಟಗಳು | ಪ್ರಶ್ನೆ | ಅಂಕ | ಶೇಕಡ |
|---|---|---|---|---|
| 1 | ಜ್ಞಾನ | 11 | 11 | 20.75 |
| 2 | ಗ್ರಹಿಕೆ | 18 | 26 | 49.05 |
| 3 | ಅಭಿವ್ಯಕ್ತಿ | 02 | 08 | 15.09 |
| 4 | ಪ್ರಶಂಸೆ | 02 | 08 | 15.09 |
| 5 | ಒಟ್ಟು | 33 | 53 | 100 |

**I. ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.** **(1 ಅಂಕದ ಪ್ರಶ್ನೆಗಳು)**

1. ರಾಜಕುಮಾರ್ ಅವರು ಹುಟ್ಟಿದ ಊರು ________________ (ಸುಲಭ) (LO-12)
2. ರಾಜಕುಮಾರ್ ಮೊದಲು ಅಭಿನಯಿಸಿದ ನಾಟಕ ಕಂಪನಿ__________ (ಸುಲಭ) (LO-12)
3. ಮೈಸೂರು ವಿಶ್ವವಿದ್ಯಾಯಲವು ರಾಜ ಕುಮಾರ್ ಅವರಿಗೆ ನೀಡಿದ ಪದವಿ__________ (ಸುಲಭ) (LO-12)

**II. ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.** (1 ಅಂಕದ ಪ್ರಶ್ನೆಗಳು **)**

**4.** ಈ ಕೆಳಗಿನವುಗಳಲ್ಲಿ ಕನ್ನಡ ಸಂಧಿಯನ್ನು ಆರಿಸಿ ಬರೆಯಿರಿ. (ಸಾಧಾರಣ) (LO-12)

ಎ) ಗುಣಸಂಧಿ ಬಿ) ಯಣ್ ಸಂಧಿ

ಸಿ) ಆಗಮ ಸಂಧಿ ಡಿ) ಸವರ್ಣದೀರ್ಘ ಸಂಧಿ

**5.** ಡಾ|| ರಾಜಕುಮಾರ್ ರವರು ಜನಿಸಿದ್ದು (ಸಾಧಾರಣ) ( LO-12)

ಎ) 1920 ಬಿ) 1929

ಸಿ) 1931 ಡಿ) 1928

**6.** "ಮೇಲೇರು" ಪದವು ಈ ಸಂಧಿಗೆ ಉದಾಹರಣೆ. (ಸಾಧಾರಣ) (LO-12)

ಎ) ಲೋಪ ಸಂಧಿ ಬಿ) ಆಗಮ ಸಂಧಿ

ಸಿ) ಆದೇಶ ಸಂಧಿ ಡಿ) ಸವರ್ಣದೀರ್ಘ ಸಂಧಿ

**7.** "ಬೆಟ್ಟದ ಹೂ" ಈ ಚಿತ್ರದಲ್ಲಿ ಅಭಿನಯಿಸಿದ ನಟ. (ಸಾಧಾರಣ) (LO-12)

ಎ) ಪುನೀತ್ ರಾಜಕುಮಾರ್ ಬಿ) ಶಿವರಾಜ್ ಕುಮಾರ್

ಸಿ) ರಾಜ್ ಕುಮಾರ್ ಡಿ) ರಾಘವೇಂದ್ರ ರಾಜ್ ಕುಮಾರ್

**8.** "ಸವಿಗನ್ನಡ" ಈ ಪದವನ್ನು ಬಿಡಿಸಿದಾಗ. (ಸಾಧಾರಣ)

ಎ) ಸವಿ+ಗನ್ನಡ ಬಿ) ಸವಿಯಾದ+ಕನ್ನಡ

ಸಿ) ಸರಿ+ಕನ್ನಡ ಡಿ) ಸವಿ+ಕನ್ನಡ

**III.**

**9. ಹೊಂದಿಸಿ ಬರೆಯಿರಿ**. (1 ಅಂಕದ ಪ್ರಶ್ನೆಗಳು **)**
(ಸಾಧಾರಣ) ( LO-2)

| **ಅ** | **ಬ** |
|---|---|
| 1. ಜನ್ಮಸ್ಥಳ | ಅ) ರಾಷ್ಟ್ರ ಪ್ರಶಸ್ತಿ |
| 2. ಮೊದಲ ಹೆಸರು | ಆ) ಗಾಜನೂರು |
| 3. ಜೀವನ ಚೈತ್ರ | ಇ) ಮುತ್ತುರಾಜ |
| 4. ಮೊದಲ ಚಿತ್ರ | ಈ) ಸಂಪತ್ತಿಗೆ ಸವಾಲ್ |
| 5. ಮೊದಲ ಗಾಯನ | ಉ) ಬೇಡರ ಕಣ್ಣಪ್ಪ |

**IV. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.** **(1 ಅಂಕದ ಪ್ರಶ್ನೆಗಳು )**

**10.** ಮುತ್ತುರಾಜ ಎಂಬ ಹೆಸರನ್ನು ರಾಜಕುಮಾರ ಎಂದು ಬದಲಿಸಿದ ನಿರ್ದೇಶಕರು ಯಾರು?
(ಸುಲಭ) (LO-2)

**11.** ರಾಜಕುಮಾರ ರವರ ಗಾಯನ ಯಾವ ಸಿನಿಮಾದಿಂದ ಆರಂಭಗೊಂಡಿತು? (ಸುಲಭ) (LO-2)

**12.** ರಾಜಕುಮಾರ ಅವರ ಪತ್ನಿಯ ಹೆಸರೇನು? (ಸುಲಭ) (LO-2)

**13.** ರಾಜಕುಮಾರ ರವರು ನಾಯಕರಾಗಿ ಅಭಿನಯಿಸಿದ ಮೊದಲ ಚಲನಚಿತ್ರ ಯಾವುದು? (ಸುಲಭ) (LO-2)

**14.** ರಾಜಕುಮಾರ್ ಅವರ ಮೊದಲ ಹೆಸರೇನು? (ಸುಲಭ) (LO-2)

**15.** ರಾಜ ಕುಮಾರ್ ಅವರ ತಂದೆ ತಾಯಿ ಯಾರು? (ಸುಲಭ) (LO-2)

**16.** ಕರ್ನಾಟಕ ಸರ್ಕಾರ ರಾಜಕುಮಾರ್ ಅವರಿಗೆ ನೀಡಿದ ಅತ್ಯುತ್ತಮ ಪುರಸ್ಕಾರ ಯಾವುದು?
(ಸುಲಭ) (LO-2)

**V . ಕೆಳಗಿನ ಪದಗಳನ್ನು ಬಿಡಿಸಿ ಸಂಧಿ ಹೆಸರಿಸಿ.** **(1 ಅಂಕದ ಪ್ರಶ್ನೆಗಳು)**

**17.** ಅಲ್ಲಲ್ಲಿ (ಸಾಧಾರಣ) (LO-12)

**18.** ಮರವನ್ನು (ಸಾಧಾರಣ) (LO-12)

**19.** ಬೆಟ್ಟದಾವರೆ (ಸಾಧಾರಣ) (LO-12)

**20.** ಮೈದೊಳೆ (ಸಾಧಾರಣ) (LO-12)

**21.** ಹೊಳೆಯಲ್ಲಿ (ಸಾಧಾರಣ) (LO-12)

**VI. ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.** 1 ಅಂಕದ ಪ್ರ(ಶ್ನೆಗಳು )

**22.** ಡಾ. ರಾಜಕುಮಾರ್ ಅಭಿನಯದ ಸಾಮಾಜಿಕ ಚಿತ್ರಗಳನ್ನು ಹೆಸರಿಸಿ. (ಸಾಧಾರಣ) (LO-2)

**23.** ಡಾ. ರಾಜಕುಮಾರ್ ಅವರಿಗೆ ಪ್ರಶಸ್ತಿಗಳನ್ನು ಪಟ್ಟಿ ಮಾಡಿ. (ಸಾಧಾರಣ) (LO-2)

**24.** ರಾಜಕುಮಾರ್ ಅವರು ಅಭಿನಯಿಸಿದ ಭಕ್ತ ಪ್ರಧಾನವಾದ ಚಿತ್ರಗಳಾವುವು? (ಸಾಧಾರಣ ) (LO-2)

**25.** ಅಭಿಮಾನಿಗಳು ರಾಜಕುಮಾರ್ ರವರಿಗೆ ನೀಡಿದ ವಿಶೇಷಣ ಬಿರುದುಗಳು ಯಾವುವು? (ಸಾಧಾರಣ) (LO-2)

**26.** ರಾಜಕುಮಾರ್ ಅವರ ಹೃದಯ ಸಂಪನ್ನತೆಗೆ ಒಂದೆರೆಡು ಉದಾಹರಣೆ ಕೊಡಿ. (ಸಾಧಾರಣ)(LO-2)

**VII. ಕೆಳಗಿನ ಪ್ರಶ್ನೆಗಳಿಗೆ ನಾಲ್ಕೈದು ವಾಕ್ಯಗಳಲ್ಲಿ ಉತ್ತರಿಸಿ.** **(3 ಅಂಕದ ಪ್ರಶ್ನೆಗಳು)**

**27.** ಡಾ. ರಾಜಕುಮಾರ್ ಅವರ ಕನ್ನಡ ಪ್ರೀತಿಯ ಬಗ್ಗೆ ಬರೆಯಿರಿ. (ಕಠಿಣ) (LO-8)

**28.** ಡಾ. ರಾಜಕುಮಾರ್ ಅವರ ಗಾಯನದ ಬಗ್ಗೆ ವಿವರಿಸಿ. (ಕಠಿಣ) (LO-8)

**29.** ರಾಜಕುಮಾರ್ ಅವರ ಬಾಲ್ಯ ಜೀವನವನ್ನು ಪರಿಚಯಿಸಿ. (ಕಠಿಣ) (LO-8)

**30.** ರಾಜಕುಮಾರ್ ರವರ ಕುಟುಂಬವು ಚಲನಚಿತ್ರ ಕ್ಷೇತ್ರಕ್ಕೆ ಕೊಟ್ಟ ಕೊಡುಗೆಯನ್ನು ಸಂಕ್ಷಿಪ್ತವಾಗಿ ವಿವರಿಸಿ. (ಕಠಿಣ) (LO-8)

**VIII.**

**31. ಡಾ|| ಹೆಚ್. ಎಸ್. ಸತ್ಯನಾರಾಯಣರವರ ಕವಿ ಕೃತಿ ಪರಿಚಯವನ್ನು ಬರೆಯಿರಿ.**
(3 ಅಂಕದ ಪ್ರಶ್ನೆಗಳು) (ಕಠಿಣ) (LO-8)

**IX.**

**32. ಕೆಳಗೆ ನೀಡಿರುವ ಮುದ್ರಿತ ಪಠ್ಯವನ್ನು ಓದಿ ಅರ್ಥೈಸಿಕೊಂಡು ನೀಡಿರುವ ಪ್ರಶ್ನೆಗಳಿಗೆ ಉತ್ತರಿಸಿ.** (ಸಾಧಾರಣ) (LO-13)

# ‘ಮಿಥ್ಯ’ ಚಿತ್ರಕ್ಕೆ ರಾಷ್ಟ್ರೀಯ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 72ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳನ್ನು ಕೇಂದ್ರ ಸರ್ಕಾರ ಶನಿವಾರ ಪ್ರಕಟಿಸಿದ್ದು, ಕನ್ನಡದ ‘ಮಿಥ್ಯ’ ಪ್ರಾದೇಶಿಕ ಭಾಷೆ ವಿಭಾಗದಲ್ಲಿ ಅತ್ಯುತ್ತಮ ಚಲನಚಿತ್ರ ಪ್ರಶಸ್ತಿಗೆ ಭಾಜನವಾಗಿದೆ.



ರೂಪಶ್ರೀ ವರ್ಕಾಡಿ

ಇದೇ ಚಿತ್ರದ ನಟನೆಗಾಗಿ ಅಥೀಶ್ ಶೆಟ್ಟಿ ‘ಅತ್ಯುತ್ತಮ ಬಾಲನಟ’ ಹಾಗೂ ರೂಪಶ್ರೀ ವರ್ಕಾಡಿ ‘ಅತ್ಯುತ್ತಮ ಪೋಷಕ ನಟಿ’ ಪ್ರಶಸ್ತಿಗೆ ಪಾತ್ರರಾಗಿದ್ದಾರೆ.

2024ನೇ ಸಾಲಿನಲ್ಲಿ ತಯಾರಾದ ಚಿತ್ರಗಳಿಗೆ ಪ್ರಶಸ್ತಿ ಘೋಷಣೆಯಾಗಿದೆ. ರಕ್ಷಿತ್ ಶೆಟ್ಟಿ ಅವರ ಪರಂವಃ ಪಿಕ್ಚರ್ಸ್ ಸಂಸ್ಥೆಯು ಚಿತ್ರವನ್ನು ನಿರ್ಮಿಸಿದ್ದು, ಸುಮಂತ್ ಭಟ್ ನಿರ್ದೇಶಿಸಿದ್ದರು. 11 ವರ್ಷದ ಅನಾಥ ಬಾಲಕನ ನೋವು, ಕನಸುಗಳ ಕಥೆ ಚಿತ್ರದ್ದಾಗಿದೆ.

ಪ್ರಶಸ್ತಿ ಕುರಿತು ‘ಪ್ರಜಾವಾಣಿ’ ಜೊತೆ ಮಾತನಾಡಿದ ನಿರ್ದೇಶಕ ಸುಮಂತ್ ಭಟ್, ‘ಚಿತ್ರಕ್ಕೆ ಮೂರು ಪ್ರಶಸ್ತಿಗಳನ್ನು ಖಂಡಿತವಾಗಿಯೂ ನಿರೀಕ್ಷಿಸಿರಲಿಲ್ಲ. ಉತ್ತಮ ಅಭಿನಯ ನೀಡಿದ್ದ ಅಥೀಶ್‌ಗೆ ಪ್ರಶಸ್ತಿ ಬರಬೇಕು ಎಂಬ ಅಪೇಕ್ಷೆಯಂತೂ ಇತ್ತು’ ಎಂದರು.

‘ಆದರೆ, ರೂಪಶ್ರೀ ಅವರಿಗೆ ಪೋಷಕ ನಟಿ ಪ್ರಶಸ್ತಿ ಬಂದಿದ್ದು ಹೆಚ್ಚು ಖುಷಿ ನೀಡಿದೆ. ಪೋಷಕ ಪಾತ್ರವನ್ನು ಸಾಮಾನ್ಯವಾಗಿ ಗಮನಿಸುವುದಿಲ್ಲ. ಅಂಥ ಪಾತ್ರದ ಅಭಿನಯವನ್ನು ಗುರುತಿಸಿ ಮಾನ್ಯತೆ ನೀಡಿರುವುದು ಖುಷಿಯ ಸಂಗತಿ’ ಎಂದರು.

‘ಇದು, ನನ್ನ ಮೊದಲ ಯತ್ನ. ಪ್ರಶಸ್ತಿಗಳ ಒಟ್ಟು ಹಿರಿಮೆಯು ಚಿತ್ರ ನಿರ್ಮಾಣಕ್ಕೆ ಮನಸ್ಸು ಮಾಡಿದ ರಕ್ಷಿತ್ ಶೆಟ್ಟಿ ಅವರಿಗೆ ಸಲ್ಲಬೇಕು. ಸಿನಿಮಾಗೆ ಬೇಕಾದ ಎಲ್ಲವನ್ನೂ ಒದಗಿಸಿಕೊಟ್ಟಿದ್ದರು. ಹಣ ಗಳಿಸದು ಎಂಬ ಅಭಿಪ್ರಾಯವಿದ್ದರೂ ಜನ ಇಂಥ ಸಿನಿಮಾ ನೋಡಬೇಕು ಎಂದು ಬಿಡುಗಡೆಗೆ ಒತ್ತು ನೀಡಿದರು. ಚಿತ್ರರಂಗದಲ್ಲಿ ಪ್ರೋತ್ಸಾಹ ಮುಖ್ಯ. ಅದು ನಮಗೆ ದಕ್ಕಿತು’ ಎಂದರು.

ರೂಪಶ್ರೀ ವರ್ಕಾಡಿ, ‘ನನಗೆ ಅವಕಾಶ ನೀಡಿದ ಎಲ್ಲ ಚಿತ್ರಗಳು, ರಂಗಭೂಮಿ ನಿರ್ದೇಶಕರು ಸೇರಿ ಎಲ್ಲ ಹಿರಿಯರ ಆಶೀರ್ವಾದದ ಫಲವೇ ಈ ಪ್ರಶಸ್ತಿ’ ಎಂದು ಸಂತಸ ಹಂಚಿಕೊಂಡರು.

‘ಈ ಚಿತ್ರದ ಚಿತ್ರೀಕರಣಕ್ಕೆ ಮೊದಲು ನಿರ್ದೇಶಕರು ಪಾತ್ರದ ವಿವರಣೆ ನೀಡಿ, ಎಲ್ಲ ನಟರಿಗೂ ಕಾರ್ಯಾಗಾರ ಏರ್ಪಡಿಸಿದ್ದರು. ಅದು, ಚಿತ್ರದಲ್ಲಿ ನಟನೆ ಪರಿಣಾಮಕಾರಿ ಆಗಲು, ಪಾತ್ರದ ಮೇಲೆ ಹಿಡಿತ ಸಾಧಿಸಲು ನೆರವಾಯಿತು’ ಎಂದು ಸ್ಮರಿಸಿದರು.

ಅಥೀಶ್ ಶೆಟ್ಟಿ ಮಂಗಳೂರಿನ ಲೂರ್ಡ್ಸ್ ಸೆಂಟ್ರಲ್ ಸ್ಕೂಲ್‌ನ ಪಿಯು ವಿದ್ಯಾರ್ಥಿ. ನಟನೆ ಜೊತೆಗೆ ಕ್ರೀಡೆಯಲ್ಲೂ ಸಾಧನೆ ಮಾಡಿದ್ದು, ರಾಷ್ಟ್ರ ಮಟ್ಟದ ಕಿಕ್ ಬಾಕ್ಸಿಂಗ್‌ನಲ್ಲಿ ಪದಕ ಗೆದ್ದಿದ್ದಾನೆ.




‘ಮಿಥ್ಯ’ ಚಿತ್ರದ ಪೋಸ್ಟರ್



ಪ್ರಶಸ್ತಿ ಬಂದದ್ದು ಖುಷಿ ನೀಡಿದೆ. ದೊಡ್ಡ ಕನಸು ಈಡೇರಿದೆ. ಇದೇ ವರ್ಷ ‘ಅತ್ಯುತ್ತಮ ಬಾಲನಟ’ ರಾಜ್ಯ ಪ್ರಶಸ್ತಿ ಕೂಡಾ ದಕ್ಕಿತ್ತು. ಚಿತ್ರದ ನಿರ್ದೇಶಕರು, ಪೋಷಕರ ಬೆಂಬಲ ಇದಕ್ಕೆ ಕಾರಣ

**ಅಥೀಶ್ ಶೆಟ್ಟಿ**

‘ಅತ್ಯುತ್ತಮ ಬಾಲನಟ’ ಪ್ರಶಸ್ತಿ ವಿಜೇತ

## ‘ಆರ್ಟಿಕಲ್ 370’ ಅತ್ಯುತ್ತಮ ಚಿತ್ರ

ನವದೆಹಲಿ (ಪಿಟಿಐ): ಆದಿತ್ಯ ಸುಹಾಸ್ ಜಂಭಾಲೆ ನಿರ್ದೇಶಿಸಿದ ರಾಜಕೀಯ ಆಕ್ಷನ್-ಥ್ರಿಲ್ಲರ್ ಚಿತ್ರ ‘ಆರ್ಟಿಕಲ್ 370’ ಅತ್ಯುತ್ತಮ ಚಲನಚಿತ್ರ ಪ್ರಶಸ್ತಿಗೆ ಆಯ್ಕೆಯಾಗಿದೆ. ಈ ಚಿತ್ರದಲ್ಲಿನ ಉತ್ತಮ ನಟನೆಗಾಗಿ ಯಾಮಿ ಗೌತಮ್ ಅತ್ಯುತ್ತಮ ನಟಿ ಪ್ರಶಸ್ತಿ ಪಡೆದಿದ್ದಾರೆ.

ಮಲಯಾಳಂ ನಟ ಮಮ್ಮೂಟಿ ಮತ್ತು ಬಾಲಿವುಡ್ ನಟ ಕಾರ್ತಿಕ್ ಆರ್ಯನ್ ಅವರು ಕ್ರಮವಾಗಿ ‘ಭ್ರಮಯುಗಂ’ ಮತ್ತು ‘ಚಂದು ಚಾಂಪಿಯನ್’ ಚಿತ್ರಗಳಲ್ಲಿನ ನಟನೆಗಾಗಿ ಅತ್ಯುತ್ತಮ ನಟ ಪ್ರಶಸ್ತಿಯನ್ನು ಹಂಚಿಕೊಂಡರು.

‘ಸ್ವಾತಂತ್ರ್ಯ ವೀರ್ ಸಾವರ್ಕರ್’ ಚಿತ್ರದ ನಿರ್ದೇಶನಕ್ಕಾಗಿ ರಣದೀಪ್ ಹೂಡಾ ಅವರು ಅತ್ಯುತ್ತಮ ಚೊಚ್ಚಲ ನಿರ್ದೇಶಕ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ನಾಗ್ ಅಶ್ವಿನ್ ನಿರ್ದೇಶನದ ತೆಲುಗು ಚಿತ್ರ ‘ಕಲ್ಕಿ 2898 ಎಡಿ’ ಅತ್ಯುತ್ತಮ ಜನಪ್ರಿಯ ಚಿತ್ರ, ತಮಿಳಿನ ‘ಅಮರನ್’ ಚಿತ್ರಕ್ಕಾಗಿ ರಾಜಕುಮಾರ್ ಪೆರಿಯ ಸಾಮಿ ಅವರಿಗೆ ಅತ್ಯುತ್ತಮ ನಿರ್ದೇಶಕ ಪ್ರಶಸ್ತಿ ಲಭಿಸಿದೆ. ಹಿಂದಿ ಚಿತ್ರ ‘ಮೈದಾನ್’ನ ಜಾನೇ ದೋ ಹಾಡಿಗೆ ಗೀತೆ ರಚನೆಕಾರ ಮನೋಜ್ ಮುಂತಾಶಿರ್‌ಗೆ ಅತ್ಯುತ್ತಮ ಸಾಹಿತ್ಯ ಪ್ರಶಸ್ತಿ ಲಭಿಸಿದೆ.

**ಪ್ರಶ್ನೆಗಳು** **(1 ಅಂಕದ ಪ್ರಶ್ನೆಗಳು )**

**1.** 'ಮಿಥ್ಯ' ಚಿತ್ರವು ಒಳಗೊಂಡಿರುವ ಕಥೆ

ಎ) ಅನಾಥ ಬಾಲಕನ ನೋವು ಕನಸುಗಳ ಕಥೆ

ಬಿ) ಪರಿಸರದ ಕಥೆ

ಸಿ) ಕೌಟುಂಬಿಕ ಕಥೆ

ಡಿ) ಪುರಾಣ ಕಥೆ

**2.** 'ಮಿಥ್ಯ' ಚಿತ್ರದ ನಿರ್ದೇಶಕರು

ಎ) ಯೋಗರಾಜ್

ಬಿ) ಬಿ.ಎಂ. ಗಿರಿರಾಜ

ಸಿ) ಸುಮಂತ್‌ಭಟ್

ಡಿ) ರಿಷಬ್ ಶೆಟ್ಟಿ

**3.** 2024ನೇ ಸಾಲಿನ ರಾಜ್ಯ ಚಲನಚಿತ್ರ ಪ್ರಶಸ್ತಿಯಲ್ಲಿ ' ಮಿಥ್ಯ ' ಯಾವ ವಿಭಾಗದಲ್ಲಿ ಗುರುತಿಸಿಕೊಂಡಿದೆ?

ಎ) ಅತ್ಯುತ್ತಮ ಹಾಸ್ಯ ಚಿತ್ರ
ಬಿ) ಅತ್ಯುತ್ತಮ ಮಕ್ಕಳ ಚಿತ್ರ
ಸಿ) ಅತ್ಯುತ್ತಮ ಬಾಲನಟ ವಿಭಾಗದ ಚಿತ್ರ
ಡಿ) ಅತ್ಯುತ್ತಮ ಸಂಗೀತ ಚಿತ್ರ

**X.**

**33. ಕೆಳಗೆ ನೀಡಿರುವ ಚಿತ್ರಕ್ಕೆ ಸೂಕ್ತವಾದ ಶೀರ್ಷಿಕೆಯನ್ನು ಬರೆಯಿರಿ.**

(ಸಾಧಾರಣ) **(1 ಅಂಕದ ಪ್ರಶ್ನೆಗಳು )** (LO-13)



ಗದ್ಯಪಾಠ – 5

# ಧನ್ಯವಾದ ಹೇಳಿದ ಕೊಕ್ಕರೆ

**ಕ್ಲಿಷ್ಟತೆಯ ಮಟ್ಟ**

| ಕ್ರ.ಸಂ | ಕಠಿಣತೆಯ ಮಟ್ಟ | ಪ್ರಶ್ನೆ | ಅಂಕ | ಶೇಕಡ |
|---|---|---|---|---|
| 01 | ಸುಲಭ | 18 | 18 | 27.27 |
| 02 | ಸಾಧಾರಣ | 22 | 42 | 63.63 |
| 03 | ಕಠಿಣ | 02 | 06 | 9.09 |
| 04 | ಒಟ್ಟು | 42 | 66 | 100 |

**ಉದ್ದಿಷ್ಟವಾರು ಅಂಕ ಹಂಚಿಕೆ**

| ಕ್ರ ಸಂ | ಉದಿಷ್ಟಗಳು | ಪ್ರಶ್ನೆ | ಅಂಕ | ಶೇಕಡ |
|---|---|---|---|---|
| 1 | ಜ್ಞಾನ | 16 | 16 | 24.24 |
| 2 | ಗ್ರಹಿಕೆ | 21 | 35 | 53.03 |
| 3 | ಅಭಿವ್ಯಕ್ತಿ | 04 | 12 | 18.18 |
| 4 | ಪ್ರಶಂಸೆ | 01 | 03 | 4.55 |
| 5 | ಒಟ್ಟು | 42 | 66 | 100 |

**I. ಈ ಕೆಳಗಿನ ಪ್ರಶ್ನೆಗಳನ್ನು ಒದಿ ಸರಿಯಾದ ಉತ್ತರಕ್ಕೆ ಗುರುತು ಮಾಡಿ ಬರೆಯಿರಿ.**

**(1 ಅಂಕದ ಪ್ರಶ್ನೆಗಳು )**

**1.** ಹರಿ ಉಪಚರಿಸಿದ ಪಕ್ಷಿ (ಸುಲಭ) (LO-2)

ಎ) ಕಾಗೆ ಬಿ) ನವಿಲು

ಸಿ) ಕೊಕ್ಕರೆ ಡಿ) ಗುಬ್ಬಚ್ಚಿ

**2.** ಇದು ಅನುಪಮಾ ನಿರಂಜನ ರವರ ಕೃತಿಯಾಗಿದೆ. (ಸುಲಭ) (LO-2)

ಎ) ಔರಂಗಜೇಬ ಬಿ) ಅಯಸ್ಕಾಂತ

ಸಿ) ಹಕ್ಕಿಗಳು ಡಿ) ಹಿಮದ ಹೂ

**3.** ಕ್ಷಾಮ ಪದದ ಅರ್ಥ. (ಸುಲಭ) (LO-12)

ಎ) ಕಾಲ ಬಿ) ಬರಗಾಲ

ಸಿ) ಆಜ್ಞೆ ಡಿ) ಗಿಡಮೂಲಿಕೆ

**4.** ಅಹಾ ಹೂವು ಎಷ್ಟು ಸುಂದರವಾಗಿದೆ (ಸುಲಭ) (LO-12)

**(ಈ ವಾಕ್ಯದಲ್ಲಿ ಬಳಕೆ ಮಾಡಬಹುದಾದ ಲೇಖನ ಚಿಹ್ನೆಗಳನ್ನು ಬರೆಯಿರಿ)**

ಎ) ಭಾವಸೂಚಕ ಮತ್ತು ಪ್ರಶ್ನಾರ್ಥಕ ಬಿ) ಭಾವಸೂಚಕ ಮತ್ತು ಅಲ್ಪ ವಿರಾಮ

ಸಿ) ಭಾವಸೂಚಕ ಮತ್ತು ಪೂರ್ಣವಿರಾಮ ಡಿ) ಉದ್ಧರಣ ಮತ್ತು ಭಾವಸೂಚಕ

**5.** ಕಾರ್ಯ ಪದದ ತದ್ಭವ ರೂಪವಿದು. (ಸುಲಭ) (LO-12)

ಎ) ಕಜ್ಜ ಬಿ) ಕಬ್ಬ

ಸಿ)ಕಂದ ಡಿ) ಕಾಯಕ

**6.** ಹೊಂದಿಕೆಯಾಗುವ ಉತ್ತರವನ್ನು ಆಯ್ಕೆ ಮಾಡಿ ಬರೆಯಿರಿ. (ಸುಲಭ) (LO12)

1) ಹುಡುಗಿ ಅ) ಚಿನ್ನದ ನಾಣ್ಯ

2) ವರಹ ಆ) ರೇಷ್ಮೆ ಬಟ್ಟೆ

3) ಪೀತಾಂಬರ ಇ) ಕೊಕ್ಕರೆ

ಎ) 1-ಅ 2-ಆ 3-ಇ ಬಿ) 1-ಇ 2-ಅ 3-ಆ

ಸಿ) 2-ಆ 3-ಅ 1-ಇ ಡಿ) 3-ಆ 1-ಇ 2-ಅ

**7.** ನಿಜ ಹುಡುಗಿಯಾಗಿದ್ದೆ ನಾನು ನೀನು ಕಾಪಾಡಿದ ಕೊಕ್ಕರೆ. (ಸುಲಭ) (LO-12)

(ಅಡಿಗೆರೆ ಎಳೆದ ಪದ ಇದಕ್ಕೆ ಉದಾಹರಣೆಯಾಗಿದೆ)

ಎ) ನಾಮಪದ ಬಿ) ನಾಮ ಪ್ರಕೃತಿ

ಸಿ) ಕ್ರಿಯಾಪದ ಡಿ) ಸರ್ವನಾಮ

**6.** ಎಲ್ಲರೊಳಗೊಂದು ನುಡಿ ಕಲಿತು________ಪರ್ವತವೇ ಆದ ಸರ್ವಜ್ಞ. (ಸುಲಭ) (LO-2)

**7.** ಹಣ್ಣಿನ ಹಾಗೆ ಬದುಕು ಮಾಲಿದರೆ ಬಾಳು____________ (ಸುಲಭ) (LO-2)

**8**. ತಿರುವಿನಲ್ಲಿ ಅವತರಿಸಿರುವ ವಾಹನ___________ (ಸುಲಭ) (LO-2)

**9.** ಮಗು_______ಹಣ್ಣಿನಂತೆ ಕೊಬ್ಬಬಾರದು (ಸುಲಭ) (LO-2)

**10.** ಹಬ್ಬಿಕೋ __________ಬಳ್ಳಿಯ ಹಾಗೆ (ಸುಲಭ) (LO-2)

**11.** ಬೆಲೆಯ___________ಯಾನ ಹೊರಡದಿರು (ಸುಲಭ) (LO-2)

**12.** ಸರಿ ಗಾತ್ರವಾಗಿ ಸಮನಿಸಲಿ__________ (ಸುಲಭ) (LO-2)

**13.** ಥಳ ಥಳ ಕೆಂಡ_________ ಮಣಿ ಮಣಿ. (ಸುಲಭ) (LO-2)

**14.** ಎಲ್ಲರಿಗೂ___________ ಎಲಚಿಯಾಗು. (ಸುಲಭ) (LO-2)

**III. ಈ ಪದಗಳನ್ನು ಬಿಡಿಸಿ ಬರೆಯಿರಿ.** (1 ಅಂಕದ ಪ್ರಶ್ನೆಗಳು)

**15.** ಹಣ್ಣಿನಂಗಡಿ (ಸಾಧಾರಣ) (LO-12)

**16.** ತುಂಟರೆಸೆಯುವ (ಸಾಧಾರಣ) (LO-12)

**17.** ಹುಳಿಗಟ್ಟುವುದು (ಸಾಧಾರಣ) (LO-12)

**18.** ನಿನ್ನೊಳಗೆ (ಸಾಧಾರಣ) (LO-12)

**19.** ಅಪರೂಪವಾಗು (ಸಾಧಾರಣ) (LO-12)

**20.** ಕಣ್ಣರಳಿಸು (ಸಾಧಾರಣ) (LO-12)

**IV. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ. (1 ಅಂಕದ ಪ್ರಶ್ನೆಗಳು)**

**21.** ಮಗು ಕಣ್ಣನ್ನು ಎಲ್ಲಿ ಅರಳಿಸುತ್ತದೆ? (ಸುಲಭ) (LO-2)

**22.** ಮಗು ಯಾವ ಹಣ್ಣಿನ ಹಾಗೆ ಬಾಗಬೇಕು ? (ಸುಲಭ) (LO-2)

**23.** ಅಪರೂಪದ ಹಣ್ಣು ಯಾವುದು? (ಸುಲಭ) (LO-2)

**24.** ಕಮರಿರುವ ಹಣ್ಣುಗಳಿಗೆ ಹೇಗೆ ಕಾಣಬೇಕು? (ಸುಲಭ) (LO-2)

**25.** ಎಲ್ಲರಿಗೂ ಒಪ್ಪುವ ಹಣ್ಣು ಯಾವುದು? (ಸುಲಭ) (LO-2)

**26.** ಕವಿಯ ಪ್ರಕಾರ ಮಗು ಏನಾಗಬೇಕು? (ಸುಲಭ) (LO-2)

**27**. ಯಾವ ಹಣ್ಣಿನಂತೆ ಕುಗ್ಗಬೇಕು ಎಂದು ಕವಿಗಳು ಹೇಳುತ್ತಾರೆ? (ಸುಲಭ) (LO-2)

**V. ಈ ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. (3 ಅಂಕದ ಪ್ರಶ್ನೆಗಳು)**

**28.** ಮಗು ಹಣ್ಣಿನಂತಾಗ ಬೇಕಾದುದು ಎಲ್ಲಿ? (ಸಾಧಾರಣ) (LO-8)

**29.** ಅರಳಿದ ದಾಳಿಂಬೆ ಯಾವ ರೀತಿ ಕಾಣುತ್ತದೆ? (ಸಾಧಾರಣ) (LO-8)

**30.**ಮಗು ಬದುಕಿನಲ್ಲಿ ಯಾವ ಯಾವ ತೊಂದರೆಗಳಿಗೆ ಒಳಗಾಗಬಾರದು? (ಸಾಧಾರಣ) (LO-8)

**VI. ಕೊಟ್ಟಿರುವ ವಾಕ್ಯಗಳಿಗೆ ಲೇಖನ ಚಿಹ್ನೆಗಳನ್ನು ಬರೆಯಿರಿ**. (1 ಅಂಕದ ಪ್ರಶ್ನೆಗಳು)

**31.** ಸುನೀತ ರಾಜು ರವಿ ಹಾಗೂ ಸುರೇಶ್ ಪ್ರತಿದಿನ ಜೊತೆಯಾಗಿ ಪಾಠದ ಬಗ್ಗೆ ಚರ್ಚಿಸುತ್ತಿದ್ದರು (ಸಾಧಾರಣ) (LO-12)

**32.** ಅಬ್ಬಬ್ಬಾ ಹೆಬ್ಬಾವು ಹೇಗೆ ಬರುತ್ತಿದೆ ನೋಡು (ಸಾಧಾರಣ) (LO-12)

**33.** ನೀನು ಇಂದು ಎಷ್ಟು ಪ್ರಶ್ನೆಗಳಿಗೆ ಉತ್ತರಿಸಿದೆ (ಸಾಧಾರಣ) (LO-12)

**34.** ಕನ್ನಡದಲ್ಲಿ ಅನೇಕ ಇಂಗ್ಲೀಷ್ ಪದಗಳು ಬಳಕೆಯಾಗಿವೆ (ಸಾಧಾರಣ) (LO-12)

**VII. ಸಂದರ್ಭ ಸಹಿತ ವಿವರಿಸಿ.** (2 ಅಂಕದ ಪ್ರಶ್ನೆಗಳು)

**35.** "ಕಾಯಿಯಲ್ಲೇ ನಿನ್ನ ಕೆಡವುದಿರಲಿ" (ಸಾಧಾರಣ) (LO-8)

**36."** ಅಂಜೂರದಂತೆ ಅಪರೂಪವಾಗು" (ಸಾಧಾರಣ) (LO-8)

**VIII. ಕೆಳಗಿನ ಪ್ರಶ್ನೆಗೆ ಐದಾರು ವಾಕ್ಯದಲ್ಲಿ ಉತ್ತರಿಸಿ.** (2 ಅಂಕದ ಪ್ರಶ್ನೆಗಳು)

**37.** ಮಗು ಹಣ್ಣುಗಳಿಂದ ಕಲಿಯಬೇಕಾದ ಗುಣಗಳು ಯಾವುವು? (ಕಠಿಣ) (LO-8)

**IX.**

**38. ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ.** (4 ಅಂಕದ ಪ್ರಶ್ನೆಗಳು) (ಕಠಿಣ) (LO-12)

ಕೊಬ್ಬಿದರೆ ---------------------

--------------------------------

--------------------------------

-----------------------ನಿನ್ನತನ

**ಅಥವಾ**

ಹಬ್ಬಿಕೋ ದ್ರಾಕ್ಷಿ -------------------

-------------------------------------

-------------------------------------

-----------------------------ನಿನಗೆ

**X.**

**39. ಇವರ ಕಾಲ ಸ್ಥಳ ಕೃತಿ ಪ್ರಶಸ್ತಿಗಳನ್ನು ಕುರಿತು ಬರೆಯಿರಿ.** (4 ಅಂಕದ ಪ್ರಶ್ನೆಗಳು) (ಕಠಿಣ) (LO-8)

**ಶ್ರೀ. ಎಚ್.ಎಸ್. ಶಿವಪ್ರಕಾಶ್**

**XI.**

**40. ಕೆಳಗೆ ನೀಡಿರುವ ಸನ್ನಿವೇಶಕ್ಕೆ ತಕ್ಕಂತೆ ಸಂಭಾಷಣೆಯನ್ನು ಊಹಿಸಿ ಬರೆಯಿರಿ.**

(ಕಠಿಣ) (4 ಅಂಕದ ಪ್ರಶ್ನೆಗಳು) (LO-13)



**XII.**

**41. ನಿಮ್ಮ ಊರಿನಲ್ಲಿ ಸರ್ಕಾರಿ ಉದ್ಯೋಗ ಪಡೆದ ಗಣ್ಯ ವ್ಯಕ್ತಿಯನ್ನು ಭೇಟಿ ಮಾಡಿ ಕೆಳಗಿನಂತೆ ಸಂದರ್ಶನ ಮಾಡಿ.** (ಕಠಿಣ) (4 ಅಂಕದ ಪ್ರಶ್ನೆಗಳು) (LO-3)

**ಸಂದರ್ಶಕ:** ನಮಸ್ಕಾರ ಸರ್. ನಿಮ್ಮನ್ನು ಭೇಟಿ ಮಾಡಿರುವುದು ನಮಗೆ ತುಂಬ ಸಂತೋಷ. ದಯವಿಟ್ಟು ನಿಮ್ಮ ಹೆಸರನ್ನು ತಿಳಿಸುವಿರಾ?

**ಗಣ್ಯ ವ್ಯಕ್ತಿ:** ____________

**ಸಂದರ್ಶಕ:** ನೀವು ಯಾವ ಸರ್ಕಾರಿ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದೀರಿ?

**ಗಣ್ಯ ವ್ಯಕ್ತಿ:** ____________

**ಸಂದರ್ಶಕ:** ಸರ್ಕಾರಿ ಉದ್ಯೋಗ ಪಡೆಯಲು ನೀವು ಎಷ್ಟು ವರ್ಷಗಳ ಕಾಲ ತಯಾರಿ ನಡೆಸಿದಿರಿ?

**ಗಣ್ಯ ವ್ಯಕ್ತಿ:** ____________

**ಸಂದರ್ಶಕ:** ನಿಮ್ಮ ಯಶಸ್ಸಿನ ಹಿಂದಿನ ಪ್ರಮುಖ ಕಾರಣವೇನು?

**ಗಣ್ಯ ವ್ಯಕ್ತಿ:** ____________

**ಸಂದರ್ಶಕ:** ವಿದ್ಯಾರ್ಥಿಗಳು ಸರ್ಕಾರಿ ಉದ್ಯೋಗ ಪಡೆಯಲು ಯಾವ ರೀತಿಯ ತಯಾರಿ ಮಾಡಬೇಕು?

**ಗಣ್ಯ ವ್ಯಕ್ತಿ:** ____________

**ಸಂದರ್ಶಕ:** ನಿಮ್ಮ ಓದಿನ ಸಮಯದಲ್ಲಿ ಎದುರಿಸಿದ ಸವಾಲುಗಳು ಯಾವುವು?

**ಗಣ್ಯ ವ್ಯಕ್ತಿ:** ____________

**ಸಂದರ್ಶಕ:** ನಮ್ಮ ಊರಿನ ಯುವಜನರಿಗೆ ನೀವು ಯಾವ ಸಂದೇಶ ನೀಡಲು ಬಯಸುತ್ತೀರಿ?

**ಗಣ್ಯ ವ್ಯಕ್ತಿ:** ____________

**ಸಂದರ್ಶಕ:** ನಿಮ್ಮ ಅಮೂಲ್ಯ ಸಮಯ ಮತ್ತು ಮಾರ್ಗದರ್ಶನಕ್ಕೆ ಧನ್ಯವಾದಗಳು.

**ಗಣ್ಯ ವ್ಯಕ್ತಿ:** ____________

XIII.

42. ಕೊಟ್ಟಿರುವ ಚಿತ್ರಗಳನ್ನು ಗಮನಿಸಿ ಅವುಗಳನ್ನು ಸವಿದಿರುವ ನಿಮ್ಮ ಅನುಭವವನ್ನು ನೆನಪಿಸಿಕೊಂಡು ಅದರ ರುಚಿಯನ್ನು ಪಟ್ಟಿಯಲ್ಲಿ ನಮೂದಿಸಿ.

(ಕಠಿಣ) (4 ಅಂಕದ ಪ್ರಶ್ನೆಗಳು) ( LO-4)







______________________ ______________________ ______________________









______________________ ______________________ ______________________

## ಪದ್ಯಪಾಠ– 5

# ನೀ ನನಗಿದ್ದರೆ

### ಕ್ಲಿಷ್ಟತೆಯ ಮಟ್ಟ

| ಕ್ರ.ಸಂ | ಕಠಿಣತೆಯ ಮಟ್ಟ | ಪ್ರಶ್ನೆ | ಅಂಕ | ಶೇಕಡ |
|---|---|---|---|---|
| 01 | ಸುಲಭ | 12 | 12 | 25.42 |
| 02 | ಸಾಧಾರಣ | 15 | 30 | 52.54 |
| 03 | ಕಠಿಣ | 04 | 12 | 22.04 |
| 04 | ಒಟ್ಟು | 31 | 54 | 100 |

### ಉದ್ದಿಷ್ಟವಾರು ಅಂಕ ಹಂಚಿಕೆ

| ಕ್ರ ಸಂ | ಉದ್ದಿಷ್ಟಗಳು | ಪ್ರಶ್ನೆ | ಅಂಕ | ಶೇಕಡ |
|---|---|---|---|---|
| 1 | ಜ್ಞಾನ | 10 | 12 | 22.24 |
| 2 | ಗ್ರಹಿಕೆ | 17 | 26 | 48.14 |
| 3 | ಅಭಿವ್ಯಕ್ತಿ | 02 | 08 | 14.81 |
| 4 | ಪ್ರಶಂಸೆ | 02 | 08 | 14.81 |
| 5 | ಒಟ್ಟು | 31 | 54 | 100 |

**I. ಈ ಪದಗಳಿಗೆ ಅರ್ಥ ಬರೆಯಿರಿ.** (1 ಅಂಕದ ಪ್ರಶ್ನೆಗಳು)

1. ಹೊರೆ (ಸಾಧಾರಣ) (LO-12)
2. ಮದ (ಸಾಧಾರಣ) (LO-12)
3. ಉಪಕಾರ (ಸಾಧಾರಣ) (LO-12)

**II. ಈ ಪದಗಳನ್ನು ಬಿಡಿಸಿ ಬರೆಯಿರಿ.** (1 ಅಂಕದ ಪ್ರಶ್ನೆಗಳು)

4. ನಮ್ಮೊಳಗೆ (ಸಾಧಾರಣ) (LO-12)
**5.** ನಿನ್ನುಪ ಕಾರ (ಸಾಧಾರಣ) (LO-12)
6. ಹೊರೆಯನ್ನು (ಸಾಧಾರಣ) (LO-12)
7. ಅರಮನೆ (ಸಾಧಾರಣ) (LO-12)
8. ಕೈಮುಗಿ (ಸಾಧಾರಣ) (LO-12)

**III. ಕೆಳಗಿನ ಈ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.** (1 ಅಂಕದ ಪ್ರಶ್ನೆಗಳು)

**9.** ಭೀಮಣ್ಣ ಎಲ್ಲಿಗೆ ಹೋದನು? (ಸುಲಭ) (LO-2)

**10.** ಕತ್ತೆಯು ಕುದುರೆಗೆ ಹೊರೆಯನ್ನು ಹೊರಲು ಏಕೆ ಹೇಳಿತು? (ಸುಲಭ) (LO-2)

**11.** ಭೀಮಣ್ಣಸಂತೆಯಲ್ಲಿ ಏನನ್ನು ಕೊಂಡನು? (ಸುಲಭ) (LO-2)

**12.** ಮಾನವ ಎಂತಹ ಜೀವಿ? (ಸುಲಭ) (LO-2)

**13.** ಭೀಮಣ್ಣ ಎಷ್ಟು ಮಣ ಹಿಂಡಿಯನ್ನು ಕೊಂಡನು? (ಸುಲಭ) (LO-2)

**14.** ನೀ ನನಗಿದ್ದರೆ ಪದ್ಯವನ್ನು ಬರೆದ ಕವಿ ಯಾರು? (ಸುಲಭ) (LO-2)

**15.** ಕುದುರೆಯು ನನ್ನಯ ಪ್ರಾಣ ಉಳಿಸಿ ಎಂದು ಯಾರನ್ನು ಕೇಳಿತು? (ಸುಲಭ) (LO-2)

**IV. ಈ ಪದಗಳಲ್ಲಿರುವ ಸ್ವರಾಕ್ಷರಗಳನ್ನು ಗುರುತಿಸಿ ಬರೆಯಿರಿ.** (1 ಅಂಕದ ಪ್ರಶ್ನೆಗಳು)

**16.** ಅರಚಿತು (ಸಾಧಾರಣ) (LO-15)

**17.** ಉಳಿಸಿಕೊಂಡು (ಸಾಧಾರಣ) (LO-15)

**18.** ಈಶನ ಕರುಣೆ (ಸಾಧಾರಣ) (LO-15)

**V. ಈ ಪದಗಳಲ್ಲಿರುವ ಅವರ್ಗೀಯ ವ್ಯಂಜನಗಳನ್ನು ಗುರುತಿಸಿ ಬರೆಯಿರಿ.** (1 ಅಂಕದ ಪ್ರಶ್ನೆಗಳು)

**19.** ಕತ್ತೆಯನ್ನು (ಸಾಧಾರಣ) (LO-12)

**20.** ಹತ್ತು ಮಣ (ಸಾಧಾರಣ) (LO-12)

**21.** ಬಡವ (ಸಾಧಾರಣ) (LO-12)

**VI. ಈ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.** (1 ಅಂಕದ ಪ್ರಶ್ನೆಗಳು)

**22.** ಕತ್ತೆಯು ಕುದುರೆಗೆ ಏನು ಹೇಳಿತು? (ಸಾಧಾರಣ) (LO-2)

**23.** ಮಾನವರಂತೆ ಸಂಘ ಜೀವನ ನಡೆಸುವ ಇತರೆ ಜೀವಿಗಳಾವುವು? (ಸಾಧಾರಣ) (LO-2)

**24.** ನೀ ನನಗಿದ್ದರೆ ಪದ್ಯದ ನೀತಿ ಏನು? (ಸಾಧಾರಣ) (LO-2)

**25.** ಈ ಪದ್ಯದಲ್ಲಿ ಬರುವ ಪ್ರಾಸಪದಗಳನ್ನು ಪಟ್ಟಿ ಮಾಡಿ. (ಸಾಧಾರಣ) (LO-2)

**26.** ಕತ್ತೆಯು ಸಹಾಯ ಕೇಳಿದಾಗ ಕುದುರೆ ಏನೆಂದು ಹೇಳಿತು? (ಸಾಧಾರಣ) (LO-2)

**27.** ಕುದುರೆಯು ಕತ್ತೆಯನ್ನು ಏನೆಂದು ಬೇಡಿಕೊಂಡಿತು? (ಸಾಧಾರಣ) (LO-2)

**VII. 28. ಕೊಟ್ಟಿರುವ ಪ್ರಾಸ ಪದಗಳನ್ನು ಆರಿಸಿ ಬರೆಯಿರಿ**. (1 ಅಂಕದ ಪ್ರಶ್ನೆಗಳು) (ಕಠಿಣ) (LO-10)

ನಡಿ, ಗೂಡು, ಸಾಕಿದನು
ಪದ್ಯ ,ಹಿಗ್ಗನಲ್ಲಿ, ಅಜ್ಜಿಗೆ,
ಕೇಳಿಸಿತು, ಹಾಕಿದನು, ಗದ್ಯ
ಗುಬ್ಬಿ , ತಂಡ, ನಾಡು,
ಸೊಕ್ಕಿನಲ್ಲಿ, ಸುಬ್ಬಿ, ಹಿಡಿ,
ಮಜ್ಜಿಗೆ, ಬಂದ ,ಚಾಳಿಸಿತು

**VIII.**

**29. ಈ ಕೆಳಗಿನ ಚುಟುಕನ್ನು ಪೂರ್ಣಗೊಳಿಸಿ:** (ಕಠಿಣ) (4 ಅಂಕದ ಪ್ರಶ್ನೆಗಳು) (LO-17)

ಶಾಲೆಯಲ್ಲಿ ಮಾಡುತ್ತಾರೆ ____________

ಬಯಲಿನಲ್ಲಿ ಮಕ್ಕಳದ್ದೆ ____________

ಮಧ್ಯಾಹ್ನ ಕೊಡುತ್ತಾರೆ ಬಿಸಿ ____________

ಸಂಜೆಯಾದರೆ ಮನೆಕಡೆಗೆ ____________

**(ಆಟ ಓಟ ಹೊತ್ತು ಊಟ ಮಣ ಪಾಠ)**

**IX.**

**30. ಕೊಟ್ಟಿರುವ ಸುಳುಹುಗಳನ್ನು ಬಳಸಿಕೊಂಡು ಪದಬಂಧವನ್ನುರಚಿಸಿ.**

(ಕಠಿಣ) (4 ಅಂಕದ ಪ್ರಶ್ನೆಗಳು) ( LO-19)

| | | | | | |
|---|---|---|---|---|---|
| 1<br>8 | | | 3 | | |
| | 6 | | | | 4 |
| | | 2 | | | |
| | 5 | | | | |
| | | | | 7 | |

**ಮೇಲಿನಿಂದ ಕೆಳಕ್ಕೆ:**

೧ ತರಕಾರಿ ತರಲು ಎಲ್ಲಿಗೆ ಹೋಗುತ್ತಾರೆ.

೨. ಸ್ನೇಹಿತನನ್ನು ಹೀಗೂ ಅನ್ನುವರು.

೩. ನಡೆದಾಡಲು ಬಳಸುವ ದೇಹದ ಅಂಗ.

೪. ಕುದುರೆಯ ಮತ್ತೊಂದು ಹೆಸರು.

**ಎಡದಿಂದ ಬಲಕ್ಕೆ:**

೫. ಕೈ ಗೆ ಧರಿಸುವ ಅಲಂಕಾರಿಕ ಆಭರಣ

೬. ಬೆಳಕು ಇದರ ವಿರುದ್ಧ ಪದ.

೭. ಹಳೆಯ ಕಾಲದ ತೂಕದ ಮಾನ.

೮. ಮನಸ್ಸಿಗೆ ಆನಂದವನ್ನುಂಟು ಮಾಡುವ ಭಾವನೆ.

X.

**31. ನೀಡಿರುವ ಚಿತ್ರವನ್ನು ಗಮನಿಸಿ ಹೆಸರು ಬರೆದು ವಚನಗಳನ್ನು ಬದಲಿಸಿ ಬರೆಯಿರಿ.**

**(4 ಅಂಕದ ಪ್ರಶ್ನೆಗಳು) (ಸಾಧಾರಣ) (LO-12)**

| ಕ್ರ. ಸಂ | ಚಿತ್ರ | ಹೆಸರು (ಏಕವಚನ) | ಚಿತ್ರ | ಬಹುವಚನ |
|---|---|---|---|---|
| 1. |  | |  | |
| 2. |  | |  | |
| 3. |  | |  | |
| 4. |  | |  | |
| 5. |  | |  | |

**ಪದ್ಯಪಾಠ-6**

# ಗಂಗವ್ವ ತಾಯಿ

### ಕ್ಲಿಷ್ಟತೆಯ ಮಟ್ಟ

| ಕ್ರ.ಸಂ | ಕಠಿಣತೆಯ ಮಟ್ಟ | ಪ್ರಶ್ನೆ | ಅಂಕ | ಶೇಕಡ |
|---|---|---|---|---|
| 01 | ಸುಲಭ | 10 | 14 | 25.92 |
| 02 | ಸಾಧಾರಣ | 20 | 28 | 51.86 |
| 03 | ಕಠಿಣ | 04 | 12 | 22.22 |
| 04 | ಒಟ್ಟು | 34 | 54 | 100 |

### ಉದ್ದಿಷ್ಟವಾರು ಅಂಕ ಹಂಚಿಕೆ

| ಕ್ರ ಸಂ | ಉದ್ದಿಷ್ಟಗಳು | ಪ್ರಶ್ನೆ | ಅಂಕ | ಶೇಕಡ |
|---|---|---|---|---|
| 1 | ಜ್ಞಾನ | 10 | 12 | 22.22 |
| 2 | ಗ್ರಹಿಕೆ | 18 | 24 | 44.44 |
| 3 | ಅಭಿವ್ಯಕ್ತಿ | 03 | 09 | 16.68 |
| 4 | ಪ್ರಶಂಸೆ | 03 | 09 | 16.66 |
| 5 | ಒಟ್ಟು | 34 | 54 | 100 |

**I. ಬಿಟ್ಟ ಸ್ಥಳಗಳನ್ನು ಆವರಣದಲ್ಲಿ ಕೊಟ್ಟಿರುವ ಸೂಕ್ತ ಪದಗಳಿಂದ ತುಂಬಿರಿ.** (1 ಅಂಕದ ಪ್ರಶ್ನೆಗಳು)

1. ಬಾರವ್ವ ತಾಯಿ _________ ತಾಯಿ (ಸುಲಭ) (LO-2)
2. ಹೊಳೆಯವ್ವ ತಾಯಿ __________ ತಾಯಿ (ಸುಲಭ) (LO-2)
3. ಮೈಮನಸು ಹೊಲಸೆಲ್ಲ ____________ ತಾಯಿ (ಸುಲಭ) (LO-2)
4. ನೀರವ್ವ ಗಂಗವ್ವ ________ ಬಾರವ್ವ (ಸುಲಭ) (LO-2)
5. ಒಣಗೀದ ನೆಲದಾಗ ___________ ಹೊಳೆಯವ್ವ (ಸುಲಭ) (LO-2)

**(**ನೀಡವ್ವ ತಾಯಿ ನೀರವ್ವ ತಾಯಿ ಮೈ ಮನದ ಹೊಲಸೆಲ್ಲ ಅನುಕರಣಾವ್ಯಯ ಗಂಗವ್ವ ತೊಳೆಯವ್ವ ಮಳೆಯಾಗಿ ನೀರವ್ವ**)**

**II. ನೀಡಿರುವ ಚಿತ್ರಗಳನ್ನು ನೋಡಿ ಹೆಸರು ಬರೆದು ಆ ಪದಕ್ಕೆ ಸಮಾನಾರ್ಥಕ ಪದಗಳನ್ನು ಬರೆಯಿರಿ.** (ಸಾಧಾರಣ) (1 ಅಂಕದ ಪ್ರಶ್ನೆಗಳು) (LO-12)

**6 .**



________________________________

**7.**



________________________________

**8.**



________________________________

**9.**



________________________________

**10.**



________________________________

**11.**



________________________________

**III. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.** (1 ಅಂಕದ ಪ್ರಶ್ನೆಗಳು)

**12.** ಕವಿ ಯಾರನ್ನು ಬಾ ತಾಯಿ ಬಾ ತಾಯಿ ಎಂದು ಕರೆದಿದ್ದಾರೆ? (ಸುಲಭ) (LO-2)

**13.** ಯಾವ ಮೈಮನಸ್ಸನ್ನು ತೊಳೆಯಬೇಕಾಗಿದೆ? (ಸುಲಭ) (LO-2)

**14.** ಗಂಗವ್ವ ತಾಯಿ ಪದ್ಯದಲ್ಲಿರುವ ಎರಡು ಆದಿಪ್ರಾಸಗಳನ್ನು ಬರೆಯಿರಿ. (ಸುಲಭ) (LO-2)

**15.** ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿಯವರ ಸ್ಥಳ ಯಾವುದು? (ಸುಲಭ) (LO-2)

**16.** ಗಂಗವ್ವ ತಾಯಿ ಪದ್ಯವನ್ನು ಯಾವ ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ? (ಸುಲಭ) (LO-2)

**17.** ನೀರು ಎಲ್ಲೆಲ್ಲಿ ತುಂಬಬೇಕು ಎಂದು ಕವಿ ಹೇಳುತ್ತಾರೆ? (ಸುಲಭ) (LO-2)

**18.** ನೀರು ಹೇಗೆಲ್ಲ ಹರಿದು ಬರಬೇಕೆಂದು ಕವಿ ವಿನಂತಿಸಿಕೊಂಡಿದ್ದಾರೆ? (ಸುಲಭ) (LO-2)

**19.** ಒಣಗಿದ ನೆಲದಲ್ಲಿ ನೀರು ಹೇಗೆ ಹೊಳೆಯಬೇಕು ಎಂದು ಕವಿ ಹೇಳುತ್ತಾರೆ? (ಸುಲಭ) (LO-2)

**20.** 'ಗಂಗವ್ವ ತಾಯಿ' ಕವನವನ್ನು ರಚಿಸಿದವರು ಯಾರು? (ಸುಲಭ) (LO-2)

**IV. ಈ ಮಾತನ್ನು ಯಾರು ಯಾರಿಗೆ ಹೇಳಿದರು.** (2 ಅಂಕದ ಪ್ರಶ್ನೆಗಳು)

**21.** ನೆಲದ ಕಣಕಣದಾಗ ಮನದ ಪದಪದರಾಗ. (ಸಾಧಾರಣ) (LO-8)

**22.** ಹರಿಯುತ್ತ ಸುರಿಯುತ್ತ ಧೋ ಧೋ ಬಾರವ್ವ (ಸಾಧಾರಣ) (LO-8)

**23.** ಒಣಗಿದ ನೆಲದಾಗ ಹಸಿ ಹಸಿರು ನೆಡಲಾಕ (ಸಾಧಾರಣ) (LO-8)

**24.** ಜೀವದಾ ತುಣುಕಾಗಿ ಮೈಮನಸ ಹೊಲಸೆಲ್ಲ (ಸಾಧಾರಣ) (LO-8)

**V. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.** (3 ಅಂಕದ ಪ್ರಶ್ನೆಗಳು)

**25.** ಗಂಗವ್ವಳನ್ನು ಕವಿ ಈ ಪದ್ಯದಲ್ಲಿ ಹೇಗೆ ವರ್ಣಿಸಿದ್ದಾರೆ. (ಸಾಧಾರಣ) (LO-8)

**26.** ಗಂಗವ್ವ ಇದ್ದರೆ ಎಲ್ಲೆಲ್ಲಿ ಏನೇನು ಆಗುವುದೆಂದು ಕವಿ ಹೇಳಿದ್ದಾರೆ. (ಸಾಧಾರಣ) (LO-8)

**27.** ನೀರು ಯಾವ ಯಾವ ಕೆಲಸಕ್ಕೆ ಬೇಕು ಎಂದು ಕವಿ ಹೇಳಿದ್ದಾರೆ? (ಕಠಿಣ) (LO-8)

**VI. ಕೊಟ್ಟಿರುವ ಪದ್ಯದಲ್ಲಿ ಪ್ರಾಸಪದಗಳನ್ನು ಗುರುತಿಸಿ ಬರೆಯಿರಿ. (ಕಠಿಣ)** (2 ಅಂಕದ ಪ್ರಶ್ನೆಗಳು)

28. **ಗೂಡಿನಿಂದ ಬಾನಿನೆಡೆಗೆ** **(ಕಠಿಣ)** (LO-10)
ಹಕ್ಕಿಹಾರಿತು
ರೆಕ್ಕೆ ಬಡಿದು ಹಕ್ಕಿ
ಮೇಲಕ್ಕೇರಿತು

29. **ಮೇಲ ಮೇಲ ಕೇರಿ ಹಕ್ಕಿ** **(ಕಠಿಣ)** (LO-10)
ಕೆಳಗೆ ನೋಡಿತು
ಹಳ್ಳಕೊಳ್ಳ ಹಸಿರು ಬೆಟ್ಟ
ಕಂಡು ಹಾರಿತು.

**VIII.ನೀಡಿರುವ ಚಿತ್ರಗಳನ್ನ ಗಮನಿಸಿ ಆ ಚಿತ್ರುಗಳಿಗೆ ಸಂಬಂಧಿಸಿದಂತೆ ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿ:**
(ಸಾಧಾರಣ) (1 ಅಂಕದ ಪ್ರಶ್ನೆಗಳು) (LO-12)



**30.** ಚಿತ್ರದಲ್ಲಿ ಕಾರ್ಖಾನೆಗಳಿಂದ ಹೊರಬರುವ ಹೊಗೆ ಯಾವ ಮಾಲಿನ್ಯವನ್ನು ಸೂಚಿಸುತ್ತದೆ?

(ಸಾಧಾರಣ) (LO-12)

ಎ) ಜಲ ಮಾಲಿನ್ಯ ಬಿ) ವಾಯು ಮಾಲಿನ

ಸಿ) ಮಣ್ಣಿನ ಮಾಲಿನ್ಯ ಡಿ) ಬೆಳಕಿನ ಮಾಲಿನ್ಯ

**31.** ವಾಹನಗಳ ಅತಿಯಾದ ಶಬ್ದದಿಂದ ಉಂಟಾಗುವ ಮಾಲಿನ್ಯ (ಸಾಧಾರಣ) (LO-12)

ಎ) ಜಲ ಮಾಲಿನ್ಯ ಬಿ) ವಾಯು ಮಾಲಿನ್ಯ

ಸಿ) ಶಬ್ದ ಮಾಲಿನ್ಯ ಡಿ) ಮಣ್ಣಿನ ಮಾಲಿನ್ಯ

**32.** ನದಿಗೆ ಕಸ ಮತ್ತು ತ್ಯಾಜ್ಯವನ್ನು ಹಾಕುವುದರಿಂದ ಉಂಟಾಗುವ ಮಾಲಿನ್ಯ (ಸಾಧಾರಣ) **(**LO-12**)**

ಎ) ಜಲ ಮಾಲಿನ್ಯ ಬಿ) ವಾಯು ಮಾಲಿನ್ಯ

ಸಿ) ಶಬ್ದ ಮಾಲಿನ್ಯ ಡಿ) ಬೆಳಕಿನ ಮಾಲಿನ್ಯ

**33.** ನಿಮ್ಮ ಊರಿನಲ್ಲಿ ಕಾರ್ಖಾನೆಗಳ ಹೊಗೆ ವಾಹನಗಳ ಶಬ್ದ ನದಿಯಲ್ಲಿ ಕಸ ಹಾಗೂ ಪ್ಲಾಸ್ಟಿಕ್ ತ್ಯಾಜ್ಯ ಹೆಚ್ಚಾಗಿದೆ. ಪರಿಸರ ಮಾಲಿನ್ಯವನ್ನು ಕಡಿಮೆ ಮಾಡಲು ನೀವು ಮೊದಲು ಯಾವ ಕ್ರಮ ಕೈಗೊಳ್ಳಬೇಕು? **(ಸಾಧಾರಣ)** (LO-12)

ಎ) ಕಸವನ್ನು ಎಲ್ಲೆಂದರಲ್ಲಿ ಎಸೆಯುವುದು.

ಬಿ) ತ್ಯಾಜ್ಯವನ್ನು ಪ್ರತ್ಯೇಕವಾಗಿ ಸಂಗ್ರಹಿಸಿ ಮರುಬಳಕೆ ಮಾಡಿ ಹಾಗೂ ಪರಿಸರ ಸ್ವಚ್ಛತೆ ಕಾಪಾಡುವುದು.

ಸಿ) ವಾಹನಗಳ ಹಾರ್ನ್ ಅನ್ನು ಹೆಚ್ಚು ಬಳಸುವುದು.

ಡಿ) ನದಿಗೆ ತ್ಯಾಜ್ಯವನ್ನು ಸುರಿಯುವುದು.

**IX.**

**34. ಕೆಳಗೆ ಕೊಟ್ಟಿರುವ ಚಿತ್ರಗಳನ್ನು ಗಮನಿಸಿ ಅವುಗಳ ವಿಶೇಷತೆಗಳನ್ನು ಬರೆಯಿರಿ**

(ಕಠಿಣ) (3 ಅಂಕದ ಪ್ರಶ್ನೆಗಳು) (LO-13)




ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ

**ಪದ್ಯಪಾಠ - 7**

# ಹೃದಯ ವಚನಗಳು

**ಕ್ಲಿಷ್ಟತೆಯ ಮಟ್ಟ**

| ಕ್ರ.ಸಂ | ಕಠಿಣತೆಯ ಮಟ್ಟ | ಪ್ರಶ್ನೆ | ಅಂಕ | ಶೇಕಡ |
|---|---|---|---|---|
| 01 | ಸುಲಭ | 10 | 14 | 28 |
| 02 | ಸಾಧಾರಣ | 20 | 27 | 54 |
| 03 | ಕಠಿಣ | 03 | 09 | 18 |
| 04 | ಒಟ್ಟು | 33 | 50 | 100 |

**ಉದ್ದಿಷ್ಟವಾರು ಅಂಕ ಹಂಚಿಕೆ**

| ಕ್ರ ಸಂ | ಉದಿಷ್ಟಗಳು | ಪ್ರಶ್ನೆ | ಅಂಕ | ಶೇಕಡ |
|---|---|---|---|---|
| 1 | ಜ್ಞಾನ | 12 | 12 | 24 |
| 2 | ಗ್ರಹಿಕೆ | 17 | 26 | 52 |
| 3 | ಅಭಿವ್ಯಕ್ತಿ | 02 | 06 | 12 |
| 4 | ಪ್ರಶಂಸೆ | 02 | 06 | 12 |
| 5 | ಒಟ್ಟು | 33 | 50 | 100 |

**I. ನೀಡಲಾಗಿರುವ ನಾಲ್ಕು ಆಯ್ಕೆಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.**

**(1 ಅಂಕದ ಪ್ರಶ್ನೆಗಳು)**

**1.** ಡಾ. ಅಮೃತ ಸೋಮೇಶ್ವರರವರ ವಚನಗಳ ಅಂಕಿತನಾಮ --------- (ಸಾಧಾರಣ) (LO-2)

ಎ) ಹೃದಯೇಶ ಸೋಮೇಶ ಬಿ) ರಾಮನಾಥ

ಸಿ) ಗುಹೇಶ್ವರ ಡಿ) ಚೆನ್ನಮಲ್ಲಿಕಾರ್ಜುನ

2. <u>ನಂಜಿನ</u> ನಾಗುವುದೊಮ್ಮೆ---------------- (ಸಾಧಾರಣ) (LO-12)
(ಅಡಿಗೆರೆ ಎಳೆದ ಪದದ ಅರ್ಥ )
ಎ) ವಿಷ ಬಿ) ಅಮೃತ
ಸಿ) ಹಾಲು ಡಿ) ನೀರು

3. ಕೆಳಗಿನ ಚಿಹ್ನೆಗಳಲ್ಲಿ ಭಾವ ಸೂಚಕ ಚಿಹ್ನೆ----------------- (ಸಾಧಾರಣ) (LO-12)
ಎ) **?** ಬಿ) **!**
ಸಿ) **;** ಡಿ) **:**

4. ಡಾ ಅಮೃತ ಸೋಮೇಶ್ವರ ರವರು ಜನಿಸಿದ್ದು---------------- (ಸಾಧಾರಣ) (LO-2)
ಎ) ಉತ್ತರ ಕನ್ನಡ ಬಿ) ದಕ್ಷಿಣ ಕನ್ನಡ
ಸಿ) ಉಡುಪಿ ಡಿ ) ಮಂಡ್ಯ

5. ಈ ವಚನದಲ್ಲಿ ಕಂಡುಬರುವ ಹೃದಯೇಶ ಸೋಮೇಶ ಎಂಬುದು ---------- (ಸಾಧಾರಣ) (LO-2)
ಎ) ನಾಮಪದ ಬಿ) ಕಾವ್ಯನಾಮ
ಸಿ) ಅಂಕಿತನಾಮ ಡಿ) ಕ್ರಿಯಾಪದ

6. ಹೃದಯ ವಚನಗಳು ಎಂಬ ವಚನ ವನ್ನು ರಚಿಸಿದವರು -------- (ಸಾಧಾರಣ) (LO-12)
ಎ) ಬಸವಣ್ಣ ಬಿ) ಅಕ್ಕಮಹಾದೇವಿ
ಸಿ) ಅಲ್ಲಮಪ್ರಭು ಡಿ) ಡಾ ಅಮೃತ ಸೋಮೇಶ್ವರ

7. ಹಲವು ರೂಪಗಳಿಂದ ಕೂಡಿ ಕಾಣಿಸಿಕೊಳ್ಳುವ ಆಟ -------------- (ಸಾಧಾರಣ) (LO-2)
ಎ) ರೂಪಿ ಬಿ ) ಬಹುರೂಪಿ
ಸಿ) ಹದನವ ಡಿ) ಸುತ್ತಿ

8. ಡಾ. ಅಮೃತ ಸೋಮೇಶ್ವರರವರಿಗೆ ಲಭಿಸಿದ ಪ್ರಶಸ್ತಿ ------------- (ಸಾಧಾರಣ) (LO-2)
ಎ) ಜ್ಞಾನಪೀಠ ಬಿ) ಪದ್ಮಶ್ರೀ
ಸಿ) ತುಳು ಸಾಹಿತ್ಯ ಪ್ರಶಸ್ತಿ ಡಿ) ಗೌರವ ಫೆಲೋಶಿಪ್

9. ಎನಿತು ಎಂಬ ಪದದ ಗ್ರಾಂಥಿಕ ರೂಪ ----------------- (ಸಾಧಾರಣ) (LO-16)
ಎ) ಅಷ್ಟ ಬಿ)ಎಷ್ಟು
ಸಿ) ಎಂತು ಡಿ) ಯಾವಾಗ

10. ಶಿವಶರಣರು ರಚಿಸಿದ ಸಾಹಿತ್ಯ ಪ್ರಕಾರ -------------------- (ಸಾಧಾರಣ) (LO-2)
ಎ) ಕಥೆ ಬಿ) ಕವನ
ಸಿ) ಕಾದಂಬರಿ ಡಿ) ವಚನಗಳು

**II. ಪದಗಳ ಅರ್ಥ ಬರೆಯಿರಿ: (1 ಅಂಕದ ಪ್ರಶ್ನೆಗಳು)**

11. ಉಪಕರಿಸು (ಸಾಧಾರಣ) (LO-12)
12. ಮೊರೆವ (ಸಾಧಾರಣ) (LO-12)
13. ನಿರಾಳ (ಸಾಧಾರಣ) (LO-12)
14. ಸಾಧಿತ (ಸಾಧಾರಣ) (LO-12)
15. ಬಹುರೂಪಿ (ಸಾಧಾರಣ) (LO-12)

**III. ಒಂದು ವಾಕ್ಯದಲ್ಲಿ ಉತ್ತರಿಸಿ. (1 ಅಂಕದ ಪ್ರಶ್ನೆಗಳು)**

16. ಶಿವಶರಣರ ವಚನ ಸಾಹಿತ್ಯದ ರಚನೆಯ ಕಾಲ ಯಾವುದು? (ಸುಲಭ) (LO-2)
17. ಡಾ. ಅಮೃತ ಸೋಮೇಶ್ವರರ ವಚನಗಳ ಅಂಕಿತನಾಮವೇನು? (ಸುಲಭ) (LO-2)
18. ಅಂಕಿತನಾಮವು ವಚನದ ಯಾವ ಭಾಗದಲ್ಲಿ ಬರುತ್ತದೆ? (ಸುಲಭ) (LO-2)

**19.** ಡಾ. ಅಮೃತ ಸೋಮೇಶ್ವರರ ಅಧ್ಯಯನ ಭಾಷೆ ಗಳು ಯಾವುವು? (ಸುಲಭ) (LO-2)

**20.** ಯಾವ ಚಾಳಿಯನ್ನು ದೂರವಿಡಿ ಎಂದು ಅಮೃತ ಸೋಮೇಶ್ವರರು ಹೇಳುತ್ತಾರೆ? (ಸುಲಭ) (LO-2)

**21.** ಹೃದಯದ ಬೆಸುಗೆ ಸಾಧಿತವಾಗುವುದು ಯಾವಾಗ? (ಸುಲಭ) (LO-2)

**22.** ನಾವು ಮೊದಲು ಯಾವ ಭಾಷೆಯನ್ನು ಕಲಿಯಬೇಕು? (ಸುಲಭ) (LO-2)

**23.** ಜನ ಕೆರಳಿ ಜರೆಯುವುದು ಯಾವಾಗ? (ಸುಲಭ) (LO-2)

**IV. ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.** **(2 ಅಂಕದ ಪ್ರಶ್ನೆಗಳು)**

**24.** ವಚನಗಳು ಎಂದರೇನು? (ಸಾಧಾರಣ) (LO-8)

**25.** ಡಾ ಅಮೃತ ಸೋಮೇಶ್ವರರು ರಚಿಸಿರುವ ಕವನ ಸಂಕಲನಗಳನ್ನು ಪಟ್ಟಿಮಾಡಿ. (ಸಾಧಾರಣ) (LO-8)

**26.** ಯಾವ ಭಾಷೆ ಮತ್ತು ಶೋಧನೆಯನ್ನು ಮಾಡಬೇಕೆಂದು ವಚನಕಾರರು ತಿಳಿಸಿದ್ದಾರೆ? (ಸಾಧಾರಣ) (LO-8)

**27.** ಒಲ್ಲೈಕೆಯ ಚಾಳಿಯನ್ನು ಹೇಗೆ ದೂರಿಕರಿಸಬೇಕು? (ಸಾಧಾರಣ) (LO-8)

**28.** ಡಾ . ಅಮೃತ ಸೋಮೇಶ್ವರನಿಗೆ ದೊರೆತ ಪ್ರಶಸ್ತಿಗಳನ್ನು ತಿಳಿಸಿ. (ಸಾಧಾರಣ) (LO-8)

V. **29. ನೀಡಿರುವ ವಚನ ಭಾಗ ಪೂರ್ಣಗೊಳಿಸಿ.** (4 ಅಂಕದ ಪ್ರಶ್ನೆಗಳು) **(ಕಠಿಣ)**(LO-7)

ಎನಿತು ಭಾಷೆಗಳ -------------------
-----------------------------------
-----------------------------------
------------ ಹೃದಯೇಶಾ ಸೋಮೇಶ

**VI. 30. ಡಾ. ಅಮೃತ ಸೋಮೇಶ್ವರರ ಕವಿ ಕೃತಿ ಪರಿಚಯವನ್ನು ಸಂಕ್ಷಿಪ್ತವಾಗಿ ಬರೆಯಿರಿ.**
(3 ಅಂಕದ ಪ್ರಶ್ನೆಗಳು) **(ಕಠಿಣ) (LO-2)**

**VII. 31. ಕೆಳಗಿನ ಅಕ್ಷರವೃಂದದಲ್ಲಿ ವಚನಕಾರರು ಅಡಗಿಕೊಂಡಿದ್ದಾರೆ. ನಿಮಗೆ ಸಾಧ್ಯವಾದಷ್ಟು ವಚನಕಾರರ ಹೆಸರನ್ನು ಹುಡುಕಿ ಬರೆಯಿರಿ.** (ಕಠಿಣ) (1 ಅಂಕದ ಪ್ರಶ್ನೆಗಳು) (LO-18)

| | | | | | | | |
|---|---|---|---|---|---|---|---|
| ಬ | ಸಿ | ದ್ದ | ಯ್ಯ | ಮಾ | ಕ | ಕ್ಕ | ಯ್ಯ |
| ಆ | ಸ | ಹಾ | ಪು | ದ | ಚೆ | ನ್ನ | ಯ್ಯ |
| ಕ್ಕ | ವ | ಣ್ಣ | ರಾ | ಣಿ | ಕ | ಸಿ | ಜ |
| ಮ | ಹಾ | ಮ | ಡಿ | ವಾ | ಳ | ದ್ದ | ರ |
| ದಾ | ದೇ | ವಿ | ಪ್ರ | ಭು | ಮಾ | ರಾ | ಮ |
| ಸಿ | ಅ | ಲ್ಲ | ಮ | ಕ | ಚ | ಯ್ಯ | ಕ |
| ಮ | ಯ್ಯ | ಚ | ನ್ನ | ಬ | ಸ | ವ | ಣ್ಣ |

**VIII.**

**32. ಕನ್ನಡದ ಪ್ರಸಿದ್ಧ ವಚನಕಾರರಾದ ಬಸವ**ಣ್ಣ ನವರ ನಾಲ್ಕು ವಚನಗಳನ್ನು ಸಂಗ್ರಹಿಸಿ ಬರೆಯಿರಿ.

(ಕಠಿಣ) ( 3 ಅಂಕದ ಪ್ರಶ್ನೆಗಳು) (LO-14

**IX.**

**33. ಈ ಪದ್ಯವನ್ನು ಓದಿ ಕೆಳಗಿರುವ ಬಹುಆಯ್ಕೆ ಪ್ರಶ್ನೆಗಳಿಗೆ ಆರಿಸಿ ಉತ್ತರ ಬರೆಯಿರಿ.**

(ಕಠಿಣ) (1ಅಂಕದ ಪ್ರಶ್ನೆಗಳು) (LO-7)

| | |
|---|---|
| ಬಂತಪ್ಪ ಬಂತು ಮಳೆಗಾಲ<br>ಬೀಜದ ಬಿತ್ತುವ ಈ ಕಾಲ<br>ಬೆಳೆಯನು ಬೆಳೆಯುವ ಈ ಕಾಲ<br>ಕೊಡೆಯನು ಹಿಡಿಯುವ ಈ ಕಾಲ\|\| |  |
| ಬಂತಪ್ಪ ಬಂತು ಚಳಿಗಾಲ<br>ಎಲೆಗಳು ಉದುರುವ ಈ ಕಾಲ<br>ಗಡ ಗಡ ನಡುಗುವ ಈ ಕಾಲ<br>ಕಂಬಳಿ ಹೊದೆಯುವ ಈ ಕಾಲ\|\| |  |
| ಬಂತಪ್ಪ ಬಂತು ಬೇಸಿಗೆ ಕಾಲ<br>ನೀರನು ಕುಡಿಯುವ ಈ ಕಾಲ<br>ಮಾವು ಸಿಗುವ ಈ ಕಾಲ<br>ಬಿಸಿಲಿಗೆ ಒಣಗುವ ಈ ಕಾಲ\|\| |  |

**<u>ಪ್ರಶ್ನೆಗಳು:</u>**

**01.** ಬೀಜವ ಬಿತ್ತುವ ಕಾಲ ____________

ಎ) ಮಳೆಗಾಲ ಬಿ) ಚಳಿಗಾಲ

ಸಿ) ಬೇಸಿಗೆ ಕಾಲ ಡಿ) ವಸಂತಕಾಲ

**02.** ಎಲೆಗಳು ಯಾವ ಕಾಲದಲ್ಲಿ ಉದುರುತ್ತವೆ?

ಎ) ಬೇಸಿಗೆಯಲ್ಲಿ ಬಿ) ಚಳಿಗಾಲ

ಸಿ)ಮಳೆಯಲ್ಲಿ ಡಿ) ಬೇಸಿಗೆಕಾಲ

**03.** ಮಾವು ಹೆಚ್ಚಾಗಿ ಯಾವ ಕಾಲದಲ್ಲಿ ಸಿಗುತ್ತದೆ.

ಎ) ಚಳಿಗಾಲ ಬಿ) ಮಳೆಗಾಲ

ಸಿ) ವಸಂತಕಾಲ ಡಿ) ಬೇಸಿಗೆಕಾಲ

ಪದ್ಯಪಾಠ -8

# ಕಿತ್ತೂರ ಕೇಸರಿ

## ಕ್ಲಿಷ್ಟತೆಯ ಮಟ್ಟ

| ಕ್ರ.ಸಂ | ಕಠಿಣತೆಯ ಮಟ್ಟ | ಪ್ರಶ್ನೆ | ಅಂಕ | ಶೇಕಡ |
|---|---|---|---|---|
| 01 | ಸುಲಭ | 12 | 12 | 19.35 |
| 02 | ಸಾಧಾರಣ | 24 | 38 | 61.30 |
| 03 | ಕಠಿಣ | 04 | 12 | 19.35 |
| 04 | ಒಟ್ಟು | 41 | 62 | 100 |

## ಉದ್ದಿಷ್ಟವಾರು ಅಂಕ ಹಂಚಿಕೆ

| ಕ್ರ ಸಂ | ಉದಿಷ್ಟಗಳು | ಪ್ರಶ್ನೆ | ಅಂಕ | ಶೇಕಡ |
|---|---|---|---|---|
| 1 | ಜ್ಞಾನ | 14 | 14 | 22.58 |
| 2 | ಗ್ರಹಿಕೆ | 21 | 27 | 43.56 |
| 3 | ಅಭಿವ್ಯಕ್ತಿ | 05 | 12 | 19.35 |
| 4 | ಪ್ರಶಂಸೆ | 03 | 09 | 14.51 |
| 5 | ಒಟ್ಟು | 41 | 62 | 100 |

**I. ಪದಗಳ ಅರ್ಥ ಬರೆಯಿರಿ.** (1ಅಂಕದ ಪ್ರಶ್ನೆಗಳು)

1. ಚರಿತ್ರೆ (ಸಾಧಾರಣ) (LO-12)
2. ಕಲಿ (ಸಾಧಾರಣ) (LO-12)
3. ದುರ್ಮತಿ (ಸಾಧಾರಣ) (LO-12)
4. ಸೆರೆಮನೆ (ಸಾಧಾರಣ) (LO-12)
5. ಮರುಜನ್ಮ (ಸಾಧಾರಣ) (LO-12)

**II. ಬಿಟ್ಟ ಸ್ಥಳ ತುಂಬಿರಿ.** (1ಅಂಕದ ಪ್ರಶ್ನೆಗಳು)

6. ಅನ್ನಕ್ಕೆ ಬಂದಿರುವ —------------- ಮನ್ನಿಸದೆ (ಸಾಧಾರಣ) (LO-2)

7. ಹೋದರಿ —----------- ಪರಕೀಯರ ವಶಕ್ಕೆ (ಸಾಧಾರಣ) (LO-2)
8. ಛಲ ತೊಟ್ಟು —--------- ಎಂತೆ ನುಗ್ಗೋಣ ನಾವು (ಸಾಧಾರಣ) (LO-2)
9. ಮಮ್ಮಲನೆ ಮರುಗಿದಳು ----------- ಕೊರಗಿದಳು (ಸಾಧಾರಣ) (LO-2)

**III. ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.** (1ಅಂಕದ ಪ್ರಶ್ನೆಗಳು)

10. ಧೈರ್ಯ X (ಸಾಧಾರಣ) (LO-12)
11. ನೋವು X (ಸಾಧಾರಣ) (LO-12)
12. ಸೋಲು X (ಸಾಧಾರಣ) (LO-12)
13. ಶತ್ರು X (ಸಾಧಾರಣ) (LO-12)
14. ಹಿಂದೆ X (ಸಾಧಾರಣ) (LO-12)
15. ಕಟ್ಟು X (ಸಾಧಾರಣ) (LO-12)

**IV. ಮೊದಲೆರಡು ಪದಗಳ ಸಂಬಂಧದಂತೆ ಮೂರನೇ ಪದಕ್ಕೆ ಸಂಬಂಧವನ್ನು ಬರೆಯಿರಿ.**
(1ಅಂಕದ ಪ್ರಶ್ನೆಗಳು)

16. ಭೂಮಿ : ಸಂಸ್ಕೃತ ಪದ : : ಸ್ಕೂಲ್ :_____________ (ಸಾಧಾರಣ) LO-17)
17. ಕುನ್ನಿ : ನಾಯಿಮರಿ : : ರಣಚಂಡಿ :______________ (ಸಾಧಾರಣ) LO-17)

**V. ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಆಯ್ಕೆಗಳನ್ನು ಕೊಡಲಾಗಿದೆ ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.** (1ಅಂಕದ ಪ್ರಶ್ನೆಗಳು)

18. ಕಿತ್ತೂರಿನ ಕೇಸರಿ ಪದ್ಯ ಬರೆದವರು____________ (ಸುಲಭ) (LO-2)
ಎ) ಪ. ಗು. ಸಿದ್ಧಾಪುರ ಬಿ) ಬೀಚಿ
ಸಿ) ಎಂ ಗೋವಿಂದ ಪೈ ಡಿ) ಕುವೆಂಪು

19. ಹಕ್ಕಿ ಹಣ್ಣನ್ನು ತಿನ್ನುತ್ತದೆ ಇದು ವಾಕ್ಯದ ಈ ಪ್ರಕಾರವಾಗಿದೆ. (ಸುಲಭ)(LO-12)
ಎ) ಸಾಮಾನ್ಯವಾಕ್ಯ ಬಿ) ಸಂಯೋಜಿತ ವಾಕ್ಯ
ಸಿ) ಮಿಶ್ರವಾಕ್ಯ ಡಿ) ಪ್ರಶ್ನಾರ್ಥಕ ವಾಕ್ಯ

20. ಮರುಜನ್ಮ ನೀಡನಗೆ_____________ ಈ ನೆಲದಿ. (ಸುಲಭ) (LO-2)
ಎ) ಮಗುವಾಗಿ ಬಿ) ವೀರ ವನಿತೆ
ಸಿ) ಗಂಡಾಗಿ ಡಿ) ಹೆಣ್ಣಾಗಿ

**VI. ಕೊಟ್ಟಿರುವ ಪದ ಬಳಸಿ ಸ್ವಂತ ವಾಕ್ಯ ಬರೆಯಿರಿ.** (1ಅಂಕದ ಪ್ರಶ್ನೆಗಳು)

21. ಚರಿತ್ರೆ (ಸಾಧಾರಣ) (LO-12)
22. ಜಯಮಾಲೆ (ಸಾಧಾರಣ) (LO-12)
23. ಋಣ (ಸಾಧಾರಣ) (LO-12)

**VII. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.** (1ಅಂಕದ ಪ್ರಶ್ನೆಗಳು)

24. ತುತ್ತೂರಿ ಊದಿದವರು ಯಾರು? (ಸುಲಭ) (LO-2)
25. ಚೆನ್ನಮ್ಮಳು ಯಾವ ನೆಲಕ್ಕಾಗಿ ಹೋರಾಡಿದಳು? (ಸುಲಭ) (LO-2)
26. ಯಾರಿಗೆ ಕರಿನೆಲದ ಗರಿಮೆಯನ್ನು ತೋರಬೇಕು? (ಸುಲಭ) (LO-2)

**27**. ಮರುಜನ್ಮ ನೀಡೆಂದು ಚೆನ್ನಮ್ಮ ಯಾರಲ್ಲಿ ಕೇಳಿದಳು? (ಸುಲಭ) (LO-2)

**28.** ಚೆನ್ನಮ್ಮ ಏನೆಂದು ಕನವರಿಸಿ ಹಲ್ಲು ಕಡಿದಳು ? (ಸುಲಭ) (LO-2)

**29**. ನಮ್ಮ ಅನ್ನವನ್ನು ಉಂಡು ಕೊಬ್ಬಿರುವವರು ಯಾರು? (ಸುಲಭ) (LO-2)

**30.** ಚೆನ್ನಮ್ಮ ಸೈನಿಕರನ್ನು ಕುರಿತು ಏನೆಂದು ಹೇಳಿದಳು? (ಸುಲಭ) (LO-2)

**31.** ಯಾರ ಕೃಪೆಯಿಂದ ಸೈನ್ಯವನ್ನು ಕಟ್ಟಲಾಯಿತು? (ಸುಲಭ) (LO-2)

**VIII. ಕೆಳಗಿನ ಪ್ರಶ್ನೆಗಳಿಗೆ ಎರಡು- ಮೂರು ವಾಕ್ಯಗಳಲ್ಲಿ ಉತ್ತರಿಸಿ.** (2 ಅಂಕದ ಪ್ರಶ್ನೆಗಳು)

**32.** ಚೆನ್ನಮ್ಮನಿಗೆ ನೋವಾಗಲು ಕಾರಣವೇನು? (ಸಾಧಾರಣ) (LO-8)

**33.** ರಾಣಿ ಚೆನ್ನಮ್ಮ ಹಲ್ಲು ಕಡಿಯಲು ಕಾರಣವೇನು? (ಸಾಧಾರಣ) (LO-8)

**34.** ಕೆಚ್ಚೆದೆಯ ಕಲಿಗಳಿಗೆ ಚೆನ್ನಮ್ಮ ಏನೆಂದು ಹೇಳಿದಳು? (ಸಾಧಾರಣ) (LO-8)

**35.** ಕಿತ್ತೂರು ಕೇಸರಿ ಕಣ್ಮುಚ್ಚಿ ಏನೆಂದು ಬೇಡಿಕೊಂಡಳು? (ಸಾಧಾರಣ) (LO-8)

**IX.**

**36. ಪದ್ಯ ಪೂರ್ಣಗೊಳಿಸಿ.** (4 ಅಂಕದ ಪ್ರಶ್ನೆಗಳು) (ಕಠಿಣ) (LO-12)

ತುತ್ತೂರಿ —--------------------------

—----------------------------------

—----------------------------------

—---------------ಧರಿಸೋಣವೆಂದು

**ಅಥವಾ**

ಮಲ್ಲಸಜ್ಜನ -----------------

-----------------------------

-----------------------------

------------ಹಲ್ ಕಡಿದಾಳಕೆ

.

**X**.

**37. ಕಾಲ ಸ್ಥಳ ಕೃತಿ ಪ್ರಶಸ್ತಿಗಳನ್ನು ಕುರಿತು ಬರೆಯಿರಿ.** ( 3 ಅಂಕದ ಪ್ರಶ್ನೆಗಳು) (ಕಠಿಣ) (LO-8)

ಕವಿ ಪ.ಗು ಸಿದ್ದಾಪುರ ಇವರ ಕಾಲ ಸ್ಥಳ ಕೃತಿ ಪ್ರಶಸ್ತಿಗಳನ್ನು ಕುರಿತು ಬರೆಯಿರಿ.

**XI.**

**38. ಕೆಳಗಿನ ಪದ್ಯ ಭಾಗವನ್ನು ಓದಿ ಅರ್ಥ ಮಾಡಿಕೊಂಡು ಅಡಕವಾಗಿರುವ ಮೌಲ್ಯವನ್ನು ಆಧರಿಸಿ ಸಾರಾಂಶವನ್ನು ಬರೆಯಿರಿ.** (ಕಠಿಣ) ( 4 ಅಂಕದ ಪ್ರಶ್ನೆಗಳು) (LO-8)

ನಿನ್ನ ಋಣ ತೀರಿಸಲು ನನಗಾಗಲಿಲ್ಲಮ್ಮ
ಈ ಒಂದೇ ಜನ್ಮದಲ್ಲಿ ಕರುನಾಡ ಒಡತಿ
ಮರುಜನ್ಮ ನೀಡನಗೆ ಹೆಣ್ಣಾಗಿ ಈ ನೆಲದಿ'
ಕಣ್ಮುಚ್ಚಿ ಬೇಡಿದಳು ಕಿತ್ತೂರ ಕೇಸರಿ.

**XII**.

**39. ನೀಡಲಾದ ಪತ್ರಿಕೆಯ ಲೇಖನವನ್ನು ಓದಿ ಕೇಳಲಾದ ಪ್ರಶ್ನೆಗಳಿಗೆ ನಿಮ್ಮದೇ ಮಾತುಗಳಲ್ಲಿ ಬರೆಯಿರಿ.** (ಕಠಿಣ) (1ಅಂಕದ ಪ್ರಶ್ನೆಗಳು) (LO-13)



ಕುವೆಂಪು ಮನೆಯಂಗಳದ ತೋಟದಲ್ಲಿ ವಿಶ್ರಮಿಸಿದ್ದರು. ಇನ್ನೂರು ಗಿಡಗಳಲ್ಲಿ ತೂಗುತ್ತಿದ್ದ ಕಡುಗೆಂಪು ಹೂವುಗಳನ್ನು ಗಿಡಗಳನ್ನು ಏರಿ ಇಳಿ ಬಿದ್ದಿದ್ದ ಬಳ್ಳಿಗಳಲ್ಲಿ ತುಂಬಿದ್ದ ಮಲ್ಲಿಗೆ ಹೂವುಗಳನ್ನು ಬಣ್ಣದ ಓಕುಳಿಯಲ್ಲಿ ಮಿಂದಂತಿದ್ದ ಕ್ರೋಟನ್ ಎಲೆಗಳನ್ನು ನೋಡಿ ಆನಂದಿಸುತ್ತಿದ್ದರು. ನಾವು ಅಲ್ಲೇ ಓಡಾಡುತ್ತಾ ಅವರ ಚಿತ್ರಗಳನ್ನು ತೆಗೆಯುತ್ತಿದ್ದೆವು. ಇದ್ದಕ್ಕಿದ್ದಂತೆ 'ಅಣ್ಣಾ ಈಗ ಹಾರಿ ಹೋಯ್ತಲ್ಲ ಆ ಹಕ್ಕಿಯನ್ನು ಏನೆಂದು ಕರೆಯುತ್ತೀರಿ" ಎಂದು ನನ್ನ ಗೆಳೆಯ ವಿಚಾರಿಸಿದನು.

ಅದು "Tickell's flower pecker' ಎಂಬ ಪುಟಾಣಿ ಹಕ್ಕಿಯಾಗಿತ್ತು. ನಾನು ಆ ಹಕ್ಕಿಗೆ 'ಬಂದಳಿಕೆ ಹಕ್ಕಿ' ಎಂದು ಕರೆಯುತ್ತೇನೆ" ಎಂದರು. ಗುಬ್ಬಿಗಿಂತಲೂ ಸಣ್ಣದಾದ. ಶರವೇಗದಲ್ಲಿ ಹಾರುವ ಅಷ್ಟು ಚಿಕ್ಕ ಹಕ್ಕಿಯನ್ನು ಕುವೆಂಪು ಕಂಡಿದ್ದಾದರೂ ಹೇಗೆಂದು ಆ ಕ್ಷಣ ನಮಗೆ ಅಚ್ಚರಿಯಾಯಿತು. ಅದೇ ರೀತಿ ಅವರು ಸೂಚಿಸಿದ ಹಕ್ಕಿಯ ಹೆಸರು ಸಹ ನಮಗೆ ರೋಮಾಂಚನವನ್ನು ಉಂಟುಮಾಡಿತ್ತು.

**ಪ್ರಶ್ನೆಗಳು:**

**1.** ಕುವೆಂಪುರವರು ಹೇಗೆ ಆನಂದಿಸುತ್ತಿದ್ದರು?

**2.** ನೀವು ನೋಡಿ ಆನಂದಿಸಿದ ಪ್ರಕೃತಿ ಸೌಂದರ್ಯವನ್ನು ಕುರಿತು ಬರೆಯಿರಿ.

**3.** ಪ್ರಕೃತಿಯನ್ನು ನೋಡಿ ಆನಂದಿಸುವ ನಮ್ಮ ಮೇಲಿರುವ ಜವಾಬ್ದಾರಿಯೇನು?

**4.** ಅಳಿವಿನ ಅಂಚಿನಲ್ಲಿರುವ ಪಕ್ಷಿ ಸಂಕುಲಗಳನ್ನು ಹೇಗೆ ರಕ್ಷಿಸುವಿರಿ.

**XIII.**

**40. ಕೊಟ್ಟಿರುವ ಪದಗಳನ್ನು ಬಳಸಿ ಅರ್ಥ ಪೂರ್ಣ ವಾಕ್ಯ ರಚಿಸಿ.** (ಸಾಧಾರಣ) (1ಅಂಕದ ಪ್ರಶ್ನೆಗಳು)

ತಂದಳು
ಬರುವಾಗ
ರಾಧೆಯು
ಮನೆಗೆ
ತರಕಾರಿ

ನೀರು
ತಾಯಿ
ಕುಡಿಸಿದಳು
ಗಿರೀಶನಿಗೆ

**XIV. 41. ಕೊಟ್ಟಿರುವ ಚಿತ್ರವನ್ನು ಗಮನಿಸಿನಿಮ್ಮದೇ ಅನುಭವದಲ್ಲಿ ಕವಿತೆ ರಚಿಸಿ. (ಕಠಿಣ)**

(4 ಅಂಕದ ಪ್ರಶ್ನೆಗಳು)



****** *****

# ಗದ್ಯ ಭಾಗ

## ಗದ್ಯಪಾಠ-1

## ದೊಡ್ಡವರ ದಾರಿ

### ಮಾದರಿ ಉತ್ತರಗಳು

**I. 1**

1) ಈ 2) ಅ 3) ಉ 4) ಇ 5) ಆ

**II.**

**2)** ಬೆ. ಗೋ. ರಮೇಶ್
**3)** ಕಾಸು
**4)** ತಪ್ಪು
**5)** ಜನಕ
**6)** ಜಾಕಿರ್ ಹುಸೇನ್
**7)** ತಪ್ಪಿನ
**8)** ಉಪಾಯ
**9)** ಪಾಲಿಶ್

**III.**

**10)** (ಎ) 49
**11)** (ಸಿ) 13
**12)** (ಬಿ) ಯೋಗವಾಹಗಳು
**13)** (ಎ) ಐ
**14)** (ಬಿ) ರಾಷ್ಟ್ರಾಧ್ಯಕ್ಷರು
**15)** (ಸಿ) ಆಜ್ಞೆ
**16)** (ಸಿ) ದುಃಖ
**17)** (ಬಿ) ವಿಶ್ವವಿದ್ಯಾಲಯ
**18)** (ಸಿ) ಮಕ್ಕಳು

**IV.**

**19.** ವಿದ್ಯಾರ್ಥಿಗಳಿಗೆ ಬುದ್ಧಿ ಕಲಿಸಲು ಜಾಕಿರ್ ಹುಸೇನರು ಪಾಲಿಶ್ ಮಾಡುವವರ ವೇಷ ಹಾಕಿದ್ದರು.
**20.** ಪುಸ್ತಕದ ಪುಟಗಳನ್ನು ಹರಿಯುವುದು ಒಳ್ಳೆಯ ಅಭ್ಯಾಸವಲ್ಲ
**21.** ಭಾರತದ ಇಂದಿನ ರಾಷ್ಟ್ರಪತಿ ದ್ರೌಪದಿಮುರ್ಮು
**22.** ಶಿಸ್ತು ರೂಢಿಸಿಕೊಳ್ಳಿ
**23.** ದೆಹಲಿ
**24.** ಬಾಬು ರಾಜೇಂದ್ರ ಪ್ರಸಾದ್

**V.**

**25.** ಶಾಂತಿ ಪ್ರಿಯ

**26.** ಪ್ರಸಿದ್ಧ ವ್ಯಕ್ತಿಗಳ ಬಾಳಿನಲ್ಲಿ ಒಂದು ದಿನ

**27.** ದೊಡ್ಡ ಹನಸೊಗೆ

**28.** ವಚನಸಾಗರ

**29.** ರಾಧಮ್ಮ

**VI.**

**30.** ವಿದ್ಯಾರ್ಥಿಯು ತನ್ನ ಬುದ್ಧಿಮತ್ತೆಗೆ ಅನುಗುಣವಾಗಿ ವಾಕ್ಯ ರಚಿಸುವನು.

**31.** ವಿದ್ಯಾರ್ಥಿಯು ತನ್ನ ಬುದ್ಧಿಮತ್ತೆಗೆ ಅನುಗುಣವಾಗಿ ವಾಕ್ಯ ರಚಿಸುವನು.

**32.** ವಿದ್ಯಾರ್ಥಿಯು ತನ್ನ ಬುದ್ಧಿಮತ್ತೆಗೆ ಅನುಗುಣವಾಗಿ ವಾಕ್ಯ ರಚಿಸುವನು.

**VII.**

**33.** ಡಾ|| ರಾಜೇಂದ್ರ ಪ್ರಸಾದರು ಭಾರತದ ಪ್ರಥಮ ರಾಷ್ಟ್ರಪತಿಗಳು.

**34.** ಪ್ರತಿನಿತ್ಯ ಶುಚಿಯಾದ ಬಟ್ಟೆಗಳನ್ನು ಧರಿಸಿ.

**35.** ಮನೆಯೇ ಮೊದಲ ಪಾಠಶಾಲೆ.

**36.** ಬಾಳಿನಲ್ಲಿ ಶಿಸ್ತು ಸಮಯ ಪಾಲನೆ ಬಹಳ ಮುಖ್ಯ

**37.** ನಮ್ಮ ಶಾಲೆಯ ಗ್ರಂಥಾಲಯದಲ್ಲಿ ಹಲವು ಬಗೆಯ ಪುಸ್ತಕಗಳಿವೆ.

**VIII.**

**38.** ರಾಜೇಂದ್ರ ಪ್ರಸಾದರು ಸರಳ ಜೀವನವನ್ನು ನಡೆಸಿದವರು. ಜನಕ ಮಹಾರಾಜನಂತೆ ಅವರದು ಋಷಿ ಸದೃಶ ಜೀವನ. ಬಾಳಿನಲ್ಲಿ ಶಿಸ್ತು ಸಂಯಮ ಸಮಯ ಪಾಲನೆ ಇವುಗಳಿಗೆ ಅಪಾರ ಮಹತ್ವ ನೀಡುತ್ತಿದ್ದರು.

**39.** ರಾಜೇಂದ್ರ ಪ್ರಸಾದರು ಮಕ್ಕಳಿಗೆ ತಾವು ಹರಿದ ಪುಸ್ತಕಗಳ ಬಗ್ಗೆ ಅಪರಾಧಿ ಭಾವ ಮೂಡುವಂತೆ ಪುಸ್ತಕಗಳು ಜ್ಞಾನ ಭಂಡಾರ ನಮ್ಮ ತಿಳುವಳಿಕೆಯನ್ನು ಹೆಚ್ಚಿಸುವ ಆಕರಗಳು. ಪುಸ್ತಕದ ಪುಟಗಳನ್ನು ಹರಿದು ಹಾಕುವುದು. ಒಳ್ಳೆಯ ಅಭ್ಯಾಸವಲ್ಲ ಎಂದು ಮಕ್ಕಳಿಗೆ ತಿಳಿಹೇಳಿ ಪುಸ್ತಕದ ಮಹತ್ವ ತಿಳಿಸಿದರು.

**40.** ಜಾಕಿರ್ ಹುಸೇನರು ಮಾಡಿದ ಉಪಾಯದಿಂದ ವಿದ್ಯಾರ್ಥಿಗಳು ನೀಟಾಗಿ ಬಟ್ಟೆ ಹಾಕಿಕೊಂಡು ಬೂಟುಗಳಿಗೆ ಪಾಲಿಶ್ ಹಾಕಿಕೊಂಡು ಕಾಲೇಜಿಗೆ ಬರತೊಡಗಿದರು.

**IX.**

**41.** ಈ ಮೇಲಿನ ವಾಕ್ಯವನ್ನು ಬೆ. ಗೋ. ರಮೇಶ್ ರವರು ಬರೆದಿರುವ " ದೊಡ್ಡವರ ದಾರಿ" ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

ಯಾರು - ರಾಜೇಂದ್ರ ಪ್ರಸಾದರು

ಯಾರಿಗೆ - ಮಕ್ಕಳಿಗೆ

**42.** ಈ ಮೇಲಿನ ವಾಕ್ಯವನ್ನು ಬೇ. ಗೋ. ರಮೇಶ್ ರವರು ಬರೆದಿರುವ " ದೊಡ್ಡವರ ದಾರಿ" ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

ಯಾರು - ಮಕ್ಕಳು

ಯಾರಿಗೆ - ರಾಜೇಂದ್ರ ಪ್ರಸಾದರಿಗೆ

**X.**

**43.**

| ಸಜಾತಿಯ ಪದಗಳು | ವಿಜಾತಿಯ ಪದಗಳು |
| --- | --- |
| ಅನ್ನಹಗ್ಗ ಆಡುತ್ತಿರುವ ಇದ್ದಿಲು ಕತ್ತಲು ಸಪ್ಪಳ ಪಪ್ಪಾಯಿ | ರಕ್ತ ಆಸ್ಪತ್ರೆ ಕ್ಷಮಿಸು ವ್ಯಂಜನ ರಕ್ಷಣೆ ತಾಪತ್ರಯ ದೃಶ್ಯ ಚಿತ್ರ ಅರಣ್ಯ |

**XI.**

**44.** ಹಗ್ಗ :- ಹ್ + ಅ ಗ್ + ಗ್ + ಅ

**45.** ರಕ್ತ :- ರ್ +ಅ ಕ್ + ತ್ + ಅ

**46.** ಬಾಯಾರಿಕೆ :- ಬ್ +ಆ ಯ್ +ಆ ರ್ + ಇ ಕ್ +ಎ

**47.** ಹೋಲಿಕೆ :- ಹ್ + ಓ ಲ್ + ಇ ಕ್ + ಎ

**48.** ಸಂತೆ :- ಸ್ +ಅಂ ತ್ +ಎ

**XII.**

**49.** ಬೆ. ಗೋ ರಮೇಶ್

**ಜನನ:** 1945 ಆಗಸ್ಟ 22 ಮೈಸೂರು ಜಿಲ್ಲೆ ಕೃಷ್ಣರಾಜನಗರ ತಾ|| ದೊಡ್ಡಹನಸೋಗೆ ಗ್ರಾಮ.

**ತಂದೆ:** ಬಿ.ಎಸ್ ಗೋವಿಂದರಾಜು

**ತಾಯಿ:** ರಾಧಮ್ಮ

**ವಿದ್ಯಾಭ್ಯಾಸ:** ಬಿ. ಇ. ಪದವೀಧರು

**ಕೃತಿಗಳು:** ವಿಶ್ವವಿಖ್ಯಾತ ಮಹಿಳೆಯರು ನಮ್ಮ ಗಮಕಿಗಳು ಕನ್ನಡ ಕವಿರತ್ನತ್ರಯರು ವಿಜ್ಞಾನಿಗಳ ಮತ್ತು ದೇಶಭಕ್ತರ ಜೀವನ ಚರಿತ್ರೆಗಳು ವಚನ ಸಾಗರ.

**ಪ್ರಶಸ್ತಿಗಳು:** ವಚನ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸರ್ ಎಂ.ವಿ ರವರ ಪ್ರಶಸ್ತಿ ಡೆಪ್ಯೂಟಿ ಚನ್ನಬಸಪ್ಪ ರಾಜ್ಯ ಪ್ರಶಸ್ತಿ.

**XIII. 50.** **'ಪುಸಕ್ತಗಳು ಜ್ಞಾನ ಭಂಡಾರ'** ಎಂಬ ಪರಿಕಲ್ಪನೆಯನ್ನು ವಿದ್ಯಾರ್ಥಿಗಳು ತಮ್ಮದೇ ರೀತಿಯಲ್ಲಿ ಆಲೋಚಿಸಿ ಸಮರ್ಥಿಸಿ ಬರೆಯುವರು.

**XIV. 51**

| | |
|---|---|
| 1. ಪಾಠ | 6. ಪುಸ್ತಕ |
| 2. ಆಟ | 7. ಸರ |
| 3. ಅಮ್ಮ | 8. ಪ್ರಸನ್ನ |
| 4. ಜಾತ್ರೆ | 9. ಆಯಾಸ |
| 5. ಕನ್ನಡ | 10. ಶಾಲೆ |

**XV. 52**

1) ಸಿ

2 ಬಿ

3) ಎ

4) ಬಿ

5) ಸಿ

**XVI. 53. ವಿದ್ಯಾರ್ಥಿಗಳು ಸಂಭಾಷಣೆಗೆ ತಕ್ಕಂತೆ ನೀಡಿದ ಶೀರ್ಷಿಕೆಯನ್ನು ಶಿಕ್ಷಕರು ದೃಢೀಕರಿಸುವುದು.**

**ಗದ್ಯಪಾಠ - 2**

# ಗಂಧರ್ವ ಸೇನ

**ಮಾದರಿ ಉತ್ತರಗಳು**

**I.**

**1)** ದೀರ್ಘವಾಗಿ ಬಿಡುವ ಉಸಿರು ನಿಡಿದಾದ ಶ್ವಾಸ
**2)** ಮುಕ್ತಾಯ ಕೊನೆ
**3)** ಪ್ರತಿಯಾಗಿ ಮಾತನಾಡು ಮಾರುತ್ತರ ಕೊಡು
**4)** ಹೇಳು ಹೊರಗೆಡಹು
**5)** ರಾಜಸಭೆ

**II.**

**6)** ಸಿ) ಕತ್ತೆ
**7)** ಎ) ಕಾವೇರಿ
**8)** ಬಿ) ಸೇವಕಿ
**9)** ಡಿ) ಮಂತ್ರಿ
**10)** ಎ) ಮಂತ್ರಿ
**11)** ಬಿ) ರಾಣಿವಾಸ

**III**

**12.**ಚತುರ್ಥಿ ವಿಭಕ್ತಿ
**13.** ಗಾದೆ
**14.** ಅನ್ವರ್ಥನಾಮ
**15.** ಸ್ತ್ರೀಲಿಂಗ

**IV**

**16.** ಮಹಾರಾಜರೇ ಗಂಧರ್ವ ಸೇನರು ತೀರಿಕೊಂಡರಂತೆ ಎಂದು ಮಂತ್ರಿ ಹೇಳಿದನು.
**17.** ಮಹಾರಾಣಿ ಅವರೇ ಎಲ್ಲರೂ ಏಕೆ ಅಳುತ್ತಿದ್ದಾರೆ ಎಂದು ಕೇಳಿದರು
**18.** ಮಂತ್ರಿಗಳೇ ಯಾರು ಈ ಗಂಧರ್ವ ಸೇನಾ? ಎಂದು ಪ್ರಶ್ನಿಸಿದ.
**19.** ಮಡಿವಾಳ್ತಿಯ ಕತ್ತೆ.
**20.** ರಾಜ ಮತ್ತು ಅವನ ಆಸ್ಥಾನಿಕರ ಮೂರ್ಖತನವನ್ನು ನೋಡಿ ರಾಣಿಯರು ನಗುತ್ತಲೇ ಇದ್ದರು.
**21.** ಗಂಧರ್ವ ಸೇನ ತೀರಿಕೊಂಡ ವಿಷಯವನ್ನು ರಾಜ ರಾಣಿಗೆ ಹೇಳಿದ.

**V. 22.**

**ಹೊಂದಿಸಿ ಬರೆಯಿರಿ**

- ೧ — ಇ
- ೨ — ಅ
- ೩ — ಆ

**VI.**

**23.** ಗಂಡಸು
**24.** ಅಕ್ಕ
**25.** ಪ್ರಾಣಿಗಳು
**26.** ಮಕ್ಕಳು

**VII.**

**27.** ಮಂತ್ರಿಯೂ ಪಡೆಯ ಮುಖ್ಯಸ್ಥನ ಬಳಿ ಬಂದು ಗಂಧರ್ವ ಸೇನರು ಯಾರು? ಎಂದು ಪ್ರಶ್ನಿಸಿದ ಸ್ವಾಮಿ ಅವರು ಯಾರು? ಏನಾಗಿದ್ದರು ಎಂದು ನನಗೆ ತಿಳಿಯದು ಆದರೆ ಅವರು ತೀರಿಕೊಂಡರೆಂದು ಸ್ವತಃ ನನ್ನ ಹೆಂಡತಿಯೇ ಅಳುತ್ತಿದ್ದಳು. ಈ ಸುದ್ದಿಯನ್ನು ನಿಮಗೆ ಹೇಳಬೇಕೆನಿಸಿತು ಬಂದು ಹೇಳಿದೆ ಎಂದನು.

28. " ಸ್ವಾಮಿ ಗಂಧರ್ವಸೇನರ ಪರಿಚಯ ನನಗಿಲ್ಲ ಈ ದಿವಸ ಬೆಳಿಗ್ಗೆ ಸ್ನಾನ ಮಾಡಲಿಕ್ಕೆ ಕೆರೆಗೆ ಹೋಗಿದ್ದೆ ಅಲ್ಲಿ ಮಡಿವಾಳ್ತಿ ತನ್ನ ಗಂಧರ್ವ ಸೇನಾ ಸತ್ತಿದ್ದಾನೆ ಎಂದು ಬಾಯಿ ಬಡಿದುಕೊಂಡು ಒಂದೇ ಸಮನೆ ಅಳುತ್ತಿದ್ದಳು. ಅದನ್ನು ನೋಡಿ ನಾನು ಅತ್ತೆ. ಗಂಡನ ಬಳಿ ಹೇಳಿದೆ ಎಂದು ಹೇಳಿದಳು.

**29.** * ರಾಜ - ರಾಣಿ
* ರಾಜಭಟ್ಟರು - ರಾಣಿಯ ಸೇವಕಿ
* ಪಡೆಯ ಮುಖ್ಯಸ್ಥ- ಪಡೆಯ ಮುಖ್ಯಸ್ಥನ ಹೆಂಡತಿ
* ಮಡಿವಾಳ್ತಿ - ಕತ್ತೆ

**VIII.**

**30.** ಗಂಧರ್ವಸೇನ ಯಾರು ಎಂಬುದನ್ನು ತಿಳಿಯಲು ಮೊದಲು ಮಂತ್ರಿ ಆ ಸೇನಾ ಪಡೆಯ ಮುಖ್ಯಸ್ಥನನ್ನು ಕೇಳಿದ " ಯಾರು ಈ ಗಂಧರ್ವಸೇನ?" ಎಂದು ನಂತರ ಆ ಮುಖ್ಯಸ್ಥನು ನನಗೂ ತಿಳಿದಿಲ್ಲ ನನಗೆ ಈ ವಿಷಯವನ್ನು ತನ್ನ ಹೆಂಡತಿ ತಿಳಿಸಿದಳು ಎಂದು ಹೇಳಿದ ನಂತರ ಮಂತ್ರಿಯು ಪಡೆಯ ಮುಖ್ಯಸ್ಥನ ಹೆಂಡತಿಯನ್ನು ವಿಚಾರಿಸಲಾಗಿ ಅವಳು ನನಗೆ ಆ ವಿಷಯವು ಮಡಿವಾಳ್ತಿಯಿಂದ ತಿಳಿಯಿತು ಎಂದು ಹೇಳಿದಳು. ನಂತರ ಮಂತ್ರಿಯು ಮಡಿವಾಳ್ತಿಯನ್ನು ವಿಚಾರಿಸಿದಾಗ ಅವಳು ಗಂಧರ್ವ ಸೇನಾ ತನ್ನ ಪ್ರೀತಿಯ ಕತ್ತೆ ಎಂದು ನುಡಿದಳು. ಈ ರೀತಿಯಾಗಿ ಸೇನಾಪಡೆಯ ಮುಖ್ಯಸ್ಥನಿಂದ ಹಿಡಿದು ಮಡಿವಾಳ್ತಿಯವರೆಗೆ ವಿಚಾರಿಸಿ ವಿಷಯವನ್ನು ತಿಳಿದರು.

**31.** ಮಡಿವಾಳ್ತಿಯು ಗಂಧರ್ವ ಸೇನನ ವಿಚಾರವನ್ನು ಹೇಳಲು ಮೊದಲು ದುಃಖಿಸತೊಡಗಿದಳು. ನಂತರ ಈ ರೀತಿಯಾಗಿ ಹೇಳಿದಳು " ಸ್ವಾಮಿ ನನಗೆ ಅದೃಷ್ಟವಿಲ್ಲ ಈಗಲೂ ನನ್ನ ಹೃದಯ ಅವನಿಗಾಗಿ ಮಿಡಿಯುತ್ತಿದೆ. ಗಂಧರ್ವ ಸೇನಾ ನನ್ನ ಪ್ರೀತಿಯ ಕತ್ತೆ ನನ್ನ ಮಗನಿಗಿಂತಲೂ ಹೆಚ್ಚಾಗಿ ಅವನನ್ನು ಮುದ್ದಿನಿಂದ ಬೆಳೆಸಿದ್ದೆ. ನಮ್ಮ ಎಲ್ಲಾ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದ ಸ್ವಾಮಿ ನಿನ್ನೆ ರಾತ್ರಿ ಕಣ್ಣು ಮುಚ್ಕೊಂಡ್ಬಿಟ್ಟ. ನನ್ನ ಹೊಟ್ಟೆ ಮೇಲೆ ಕಲ್ಲು ಹಾಕಿಬಿಟ್ಟ" ಎಂದು ಬೊಬ್ಬಿಟ್ಟು ತನ್ನ ಮನಸ್ಸಿನ ನೋವನ್ನು ವ್ಯಕ್ತಪಡಿಸಿದಳು.

**IX.**

**32.** ಈ ವಾಕ್ಯವನ್ನು" ಜಾನಪದ ಕಥೆಯಿಂದ" ಆರಿಸಲಾದ "ಗಂಧರ್ವ ಸೇನ" ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ : -** ಗಂಧರ್ವಸೇನರು ತೀರಿ ಹೋದರು ಎಂದು ಮಂತ್ರಿ ರಾಜನಿಗೆ ತಿಳಿಸಿದಾಗ ರಾಜ ಅಂತಃಪುರಕ್ಕೆ ಹೋಗಿ ದುಃಖ ಪಡುತ್ತಿದ್ದರು ಎಂಬುದನ್ನು ಈ ವಾಕ್ಯದಲ್ಲಿ ಓದಬಹುದು.

**ವಿವರಣೆ :-** ಗಂಧರ್ವ ಸೇನರು ತೀರಿಹೋದ ಸುದ್ದಿಯಿಂದ ರಾಜ ತುಂಬಾ ದುಃಖಿತನಾಗಿ ಅಂತಪುರಕ್ಕೆ ಬಂದು ತನ್ನ ರಾಣಿಯರಿಗೆ ವಿಷಯ ತಿಳಿಸಿ ಅಲ್ಲಿಯೂ ಕರುಳು ಕಿತ್ತು ಬರುವಂತೆ ಹಳತೊಡಗಿದ.

**33.** ಈ ವಾಕ್ಯವನ್ನು" ಜಾನಪದ ಕಥೆಯಿಂದ" ಆರಿಸಲಾದ "ಗಂಧರ್ವ ಸೇನ" ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :-** ಈ ಮೇಲಿನ ಮಾತನ್ನು ಮಂತ್ರಿಯು ತನ್ನ ರಾಜನಿಗೆ ಮಹಾರಾಜರೇ ಗಂಧರ್ವ ಸೇನರು ತೀರಿಕೊಂಡರಂತೆ ಎಂದು ಹೇಳಿದಾಗ

**ವಿವರಣೆ :-** ಮಂತ್ರಿಗೆ ಪಡೆಯ ಮುಖ್ಯಸ್ಥನು ಗಂಧರ್ವ ಸೇನೆ ತೀರಿಕೊಂಡರೆಂದು ಗಟ್ಟಿಯಾಗಿ ಗಂಟಲು ಹರಿಯುವಂತೆ ಕೂಗುತ್ತಾ ಅಳುತ್ತಿರುವುದನ್ನು ಕಂಡು ಮಂತ್ರಿಯೂ ಅಳುತ್ತಾ ಒಡ್ಡೋಲಗದಲ್ಲಿದ್ದ ರಾಜನ ಬಳಿ ಬಂದು ಗಟ್ಟಿಯಾಗಿ ಅಳುತ್ತಾ ಮಹಾರಾಜರೇ ಗಂಧರ್ವ ಸೇನರುತೀರಿಕೊಂಡರಂತೆ ಎಂದು ಹೇಳಿದನು.

**34.** ಈ ವಾಕ್ಯವನ್ನು" ಜಾನಪದ ಕಥೆಯಿಂದ" ಆರಿಸಲಾದ "ಗಂಧರ್ವ ಸೇನ" ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :-** ಈ ಮೇಲಿನ ವಾಕ್ಯವನ್ನು ಮಡಿವಾಳ್ತಿ ತನ್ನ ಗಂಧರ್ವ ಸೇನೆ ಎಂಬ ಕತ್ತೆ ತೀರಿಹೋದ ಕುರಿತು ಮಂತ್ರಿ ಪಡೆಯ ಮುಖ್ಯಸ್ಥ ಹಾಗೂ ಆತನ ಹೆಂಡತಿಗೆ ಹೇಳಿದಳು.

**ವಿವರಣೆ :-** ಮಡಿವಾಳ್ತಿಯು ತನ್ನ ಕತ್ತೆಗೆ ಗಂಧರ್ವ ಸೇನೆ ಎಂದು ಹೆಸರಿಟ್ಟಿರುತ್ತಾರೆ. ಊರಿನಲ್ಲಿ ಗಂಧರ್ವ ಸೇನರು ತೀರಿ ಹೋದರು ಎಂಬ ಸುದ್ದಿ ಹರಿದಾಡಿದಾಗ ಮಂತ್ರಿ ಪಡೆಯ ಮುಖ್ಯಸ್ಥ ಹಾಗೂ ಆತನ ಹೆಂಡತಿ ಮಡಿವಾಳ್ತಿಯ ಮನೆಗೆ ಹೋಗಿ ವಿಚಾರಿಸಿದಾಗ ಗಂಧರ್ವ ಸೇನಾ ಎಂಬ ಪ್ರೀತಿಯ ಕತ್ತೆ ನಿನ್ನೆ ರಾತ್ರಿ ತೀರಿಹೋಯಿತೆಂದು ದುಃಖದಿಂದ ಈ ಮೇಲಿನಂತೆ ಹೇಳುತ್ತಾಳೆ.

**35.** ಈ ಮೇಲಿನ ವಾಕ್ಯವನ್ನು ಬೇ. ಗೋ. ರಮೇಶ್ ರವರು ಬರೆದಿರುವ ದೊಡ್ಡವರ ದಾರಿ ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ

**ಸಂದರ್ಭ :** ಗಂಧರ್ವ ಸೇನ ಮಡಿವಾಳ್ತಿಯ ಕತ್ತೆ ಎಂದು ತಿಳಿದ ಮೇಲೆ ರಾಜ ಮತ್ತು ಆಸ್ಥಾನಿಕರ ಮೂರ್ಖತನದ ಸಂದರ್ಭದಲ್ಲಿ ಈ ಗಾದೆಯನ್ನು ಬಳಸಲಾಗಿದೆ.

**36.** ಈ ಮೇಲಿನ ವಾಕ್ಯವನ್ನು ಬೇ. ಗೋ. ರಮೇಶ್ ರವರು ಬರೆದಿರುವ ದೊಡ್ಡವರ ದಾರಿ ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :** ಪಡೆಯ ಮುಖ್ಯಸ್ಥ ನನ್ನು ಗಂಧರ್ವ ಸೇನ ಯಾರು ಎಂದು ಪ್ರಶ್ನಿಸಿದಾಗ ಈ ಮೇಲಿನ ವಾಕ್ಯವನ್ನು ಪಡೆಯ ಮುಖ್ಯಸ್ಥ ಮಂತ್ರಿಯ ಬಳಿ ಹೇಳಿದ.

**X. 37.**

**ಗಾದೆ**

- ಮುಚ್ಚಿಟ್ಟಿದ್ದು ಮಣ್ಣಿನ ಪಾಲು
- ಚಿನ್ನದ ಪೆಟ್ಟಿಗೆಯಲ್ಲಿ ಬೆಳ್ಳಿ ಲಿಂಗ
- ಕೇಳಿದ ಕಿವಿ ಊರಿಗೆ ಮಾರಿ ತಂದಿತು

**ನುಡಿಗಟ್ಟು**

- ಮೂಗು ತೂರಿಸು
- ಕಾಲಿಗೆ ಬುದ್ಧಿ ಹೇಳು

**ಒಗಟು**

- ದಾಸ ಬುರುಡೆ ದೌಲತ್ ಬುರುಡೆ ಲೋಕಕ್ಕೆಲ್ಲ ಎರಡೇ ಬುರುಡೆ
- ಚಿಕ್ಕ ತೋಟ ಚೂರು ಕಸ ಬಿದ್ದರೆ ಹಾಳು.

**XI. 38.** ಉ ಅಲ್ಲಿ ಅನ್ನು ಇಂದ ಅ ಗೆ ದೆಸೆಯಿಂದ.

**XII.39.** ಜನರನ್ನು- ಜನರು +ಅನ್ನು= ದ್ವಿತೀಯ ವಿಭಕ್ತಿ ಪ್ರತ್ಯಯ
ಮನೆಯಲ್ಲಿ – ಮನೆ+ಅಲ್ಲಿ = ಸಪ್ತಮಿ ವಿಭಕ್ತಿ ಪ್ರತ್ಯಯ
ಗರಗಸದಿಂದ –ಗರಗಸ+ ಇಂದ= ತೃತೀಯ ವಿಭಕ್ತಿ ಪ್ರತ್ಯಯ
ಅರಸನಿಗೆ = ಅರಸ +ಇಗೆ = ಚತುರ್ಥಿ ವಿಭಕ್ತಿ ಪ್ರತ್ಯಯ

**XIII. 40.** ಪುಲ್ಲಿಂಗ --- ಪಂಪ ರನ್ನ ಜನ್ನ ಪೊನ್ನ ಲಕ್ಷ್ಮೀಶ ಷಡಕ್ಷರಿ
ಸ್ತ್ರೀಲಿಂಗ--- ತ್ರಿವೇಣಿಗಂಗಾಂಬಿಕೆ ಅಮುಗೆ ರಾಯಮ್ಮ ಶಿವಶರಣೆ ಲಿಂಗಮ್ಮ.... ಇತ್ಯಾದಿ
ನಪುಂಸಕ ಲಿಂಗ --- ಪಕ್ಷಿ ಪ್ರಾಣಿ ಉರಗ ಪರ್ವತ

**XIV.41. 1)** ಸಿ
**2)** ಬಿ
**3)** ಸಿ
**4)** ಎ

## ಗದ್ಯಪಾಠ – 3

# ಕೃಷ್ಣ ಸುಧಾಮ (ನಾಟಕ)

ಮಾದರಿ ಉತ್ತರಗಳು

**I.**

**1.** ಸಿ) ಶತ್ರು
**2.** ಬಿ) ದೂರ
**3.** ಸಿ) ದುಃಖ
**4.** ಬಿ) ಗೌರವ
**5.** ಎ) ಅನೀತಿ

**II.**

**6.** ವಿದ್ಯಾರ್ಥಿಗಳು ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ವಾಕ್ಯ ರಚಿಸುವರು.
**7.** ವಿದ್ಯಾರ್ಥಿಗಳು ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ವಾಕ್ಯ ರಚಿಸುವರು.
**8.** ವಿದ್ಯಾರ್ಥಿಗಳು ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ವಾಕ್ಯ ರಚಿಸುವರು.
**9.** ವಿದ್ಯಾರ್ಥಿಗಳು ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ವಾಕ್ಯ ರಚಿಸುವರು.
**10.** ವಿದ್ಯಾರ್ಥಿಗಳು ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ವಾಕ್ಯ ರಚಿಸುವರು.

**III.**

**11.** ಶ್ರೀ ಕೃಷ್ಣ.
**12.** ಶ್ರೀ ಕೃಷ್ಣನ ಹತ್ತಿರ ಸಹಾಯ ಕೇಳಿ ಎಂದು ಸುಧಾಮನಿಗೆ ಹೇಳಿದವರು ಸುಧಾಮನ ಹೆಂಡತಿ.
**13.** ಶ್ರೀ ಕೃಷ್ಣನನ್ನು ನೋಡಲು ಸುಧಾಮನು ಅವನಿಗಾಗಿ ಅವಲಕ್ಕಿಯನ್ನು ಬಟ್ಟೆಯಲ್ಲಿ ಕಟ್ಟಿಕೊಂಡು ಹೋಗಿದ್ದನು.
**14.** ಸುಧಾಮನ ಮಕ್ಕಳು ಬಡತನದ ಕಾರಣದಿಂದ ಹಸಿವಿನಿಂದ ಬಳಲುತ್ತಿದ್ದರು.
**15.** ' ಕೃಷ್ಣ - ಸುಧಾಮ' ಎಂಬ ಪಾಠದಿಂದ ವಿ. ಎಸ್. ಶಿರಹಟ್ಟಿ ಮಠ ರವರ ' ಹೂವಿನ ಹಂದರ' ಎಂಬ ಕೃತಿಯಿಂದ ಆಯ್ದುಕೊಳ್ಳಲಾಗಿದೆ.
**16.** ಜೀವನದಲ್ಲಿ ಬಂದದ್ದನ್ನು ಅನುಭವಿಸಲೇ ಬೇಕು. ಅದೇ ಮಾನವ ಧರ್ಮ ಎಂದು ಸುಧಾಮನು ಹೇಳುತ್ತಾನೆ.
**17.** ಹಸಿದಿರುವ ಮಕ್ಕಳಿಗೋಸ್ಕರವಾದರೂ ಹೋಗಿ ಸಹಾಯ ಕೇಳಿ ಎಂದು ಪತ್ನಿ ಸುಧಾಮನಿಗೆ ಹೇಳುತ್ತಾಳೆ.
**18.** ಶ್ರೀಕೃಷ್ಣನ ಆತ್ಮೀಯ ಆಲಿಂಗನ ಅನವಪ್ರೀತಿ ವಿಶ್ವಾಸದ ಮಾತುಗಳು ಹಾಗೂ ಬಹಳ ದಿನಗಳ ಅನಂತರ ಕೃಷ್ಣನನ್ನು ನೋಡಿ ಸುಧಾಮನ ಕಣ್ಣಿನಲ್ಲಿ ನೀರು ಬಂದಿತು.
**19.** ಸುಧಾಮ ಮನೆಗೆ ಮರಳಿದಾಗ ಸುಂದರವಾದ ಮನೆ ಹೆಂಡತಿ ಮಕ್ಕಳು ಹೊಸಬಟ್ಟೆ ಧರಿಸಿ ಮನೆಯಲ್ಲಿ ಸಂತೋಷದಿಂದ ಇರುವ ಸನ್ನಿವೇಶ ಕಂಡನು.
**20.** ಸುಧಾಮನ ಮನೆಯನ್ನು ಕಟ್ಟಿಸಿದವರು ಶ್ರೀಕೃಷ್ಣ.

**IV.**

**21.** 'ಗೆಳೆತನ' ಎನ್ನುವುದಕ್ಕೆ ಯಾವುದೇ ಭೇದವಿಲ್ಲ. ಅದಕ್ಕೆ ಉತ್ತಮ ಉದಾಹರಣೆಯೆಂದರೆ ಕೃಷ್ಣ ಮತ್ತು ಸುಧಾಮರ ಸ್ನೇಹ. ಕಷ್ಟದ ಸಮಯದಲ್ಲಿ ಯಾರು ಸಹಾಯ ಮಾಡದಿದ್ದರೂ ಸ್ನೇಹಿತರು ಸಹಾಯ ಮಾಡುತ್ತಾರೆ. ಹಾಗೆಯೇ ಸುಧಾಮ ಬಡತನದಿಂದ ತೊಳಲಾಡುತ್ತಿದ್ದಾಗ ಕೃಷ್ಣನ ಅರಮನೆಗೆ ಭೇಟಿ ನೀಡಿದನು. ಆದರೆ ಸುಧಾಮ ಕೃಷ್ಣನ ಆ ಶ್ರೀಮಂತಿಕೆಯನ್ನು ನೋಡಿ ಗೆಳೆಯನ ಹತ್ತಿರ ಹೇಗೆ ಸಹಾಯ ಕೇಳುವುದು ಎಂದು ಯೋಚಿಸುತ್ತಿದ್ದಾಗ ಶ್ರೀ ಕೃಷ್ಣ ಸುಧಾಮನ ಮನದ ಇಂಗಿತವನ್ನು ಅರಿತು ಅವನಿಗೆ ಗೊತ್ತಿಲ್ಲದಂತೆಯೇ ಅವನ ಊರಿನಲ್ಲಿದ್ದ ಗುಡಿಸಿಲನ್ನು ತನ್ನ ಆಳುಗಳನ್ನು ಕಳುಹಿಸಿ ಅರಮನೆಯನ್ನು ಕಟ್ಟಿಸಿ ಕೊಡುತ್ತಾನೆ. ಇದರ ಅರ್ಥವೇನೆಂದರೆ ಸ್ನೇಹಿತ

ತನ್ನ ಬಳಿ ಕೇಳದಿದ್ದರೂ ಅವನ ಮನಸ್ಸಿನ ನೋವನ್ನು ಅರ್ಥ ಮಾಡಿಕೊಂಡು ಸಹಾಯವನ್ನು ಮಾಡುತ್ತಾನೆ. ಇದು ಸ್ನೇಹಕ್ಕೆ ಶ್ರೀಕೃಷ್ಣ ನೀಡಿದ ಮಹತ್ವ. ಇನ್ನೂ ಅನೇಕ ವಿಷಯಗಳಿಂದ ಇವರಿಬ್ಬರ ಸ್ನೇಹ ಎಲ್ಲರಿಗೂ ಮಾದರಿಯಾಗಿದೆ.

**22.** ನೀವು ದ್ವಾರಕ ನಗರ ತಲುಪಿದ ದಿನವೇ ಅಲ್ಲಿಂದ ಸೇವಕರ ದಂಡು ಬಂತು. ಬೇಕಾದ ಎಲ್ಲಾ ವಸ್ತುಗಳನ್ನು ತಂದರು ಮನೆ ನಿರ್ಮಿಸಿದರು. ನಮಗೆಲ್ಲಾ ಹೊಸ ಉಡುಪು ಆಭರಣಗಳನ್ನು ಸಹ ಕೊಟ್ಟರು.

**23.** ವಿದ್ಯಾಥಿ ತನ್ನದೇ ಆದ ಅಭಿಪ್ರಾಯ ಬರೆಯುತ್ತಾನೆ.

**V.**

**24.** ಪ್ರಸ್ತುತ ಗದ್ಯಭಾಗವನ್ನು ವಿ. ಎಸ್. ಶಿರಹಟ್ಟಿ ಮಠರವರು ಬರೆದಿರುವ' ಹೂವಿನ ಹಂದರ' ಎಂಬ ಕೃತಿಯಿಂದ ಆಯ್ದುಕೊಳ್ಳಲಾಗಿದೆ.

ಯಾರು ;- ಸುಧಾಮ ಹೇಳಿದನು.

ಯಾರಿಗೆ : -ತನ್ನ ಹೆಂಡತಿಗೆ ಹೇಳಿದನು.

ಯಾವಾಗ : - ಸುಧಾಮನ ಹೆಂಡತಿ ಬಡತನ ನಮ್ಮನ್ನು ಕಾಡುತ್ತಿದೆ ಎಂದಾಗ ಸುಧಾಮ ಈ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

**25.** ಪ್ರಸ್ತುತ ಗದ್ಯಭಾಗವನ್ನು ವಿ. ಎಸ್. ಶಿರಹಟ್ಟಿ ಮಠರವರು ಬರೆದಿರುವ' ಹೂವಿನ ಹಂದರ' ಎಂಬ ಕೃತಿಯಿಂದ ಆಯ್ದುಕೊಳ್ಳಲಾಗಿದೆ.

ಯಾರು ;- ಸುಧಾಮನ ಮಗ ಹೇಳಿದನು.

ಯಾರಿಗೆ : - ತನ್ನ ತಾಯಿಗೆ ಹೇಳಿದನು.

ಯಾವಾಗ : - ಸುಧಾಮನು ಶ್ರೀಕೃಷ್ಣನ ಬಳಿ ಹೊರಡಲು ಸಿದ್ದವಾದ ಸಂದರ್ಭದಲ್ಲಿ ಈತನು ಬರಿಗೈಯಲ್ಲಿ ಹೇಗೆ ಹೋಗುವುದು ಎಂದಾಗ ಹೆಂಡತಿ ಮಕ್ಕಳ ಉಪಹಾರಕ್ಕೆಂದು ತಂದಿರುವ ಅವಲಕ್ಕಿಯನ್ನು ಕಟ್ಟಿಕೊಡುತ್ತಾನೆ ಎಂದು ಗಂಡನಿಗೆ ಹೇಳುವಾಗ ಮಗ ತಾಯಿಗೆ ಈ ಮಾತನ್ನು ಹೇಳಿದನು.

**26.** ಪ್ರಸ್ತುತ ಗದ್ಯಭಾಗವನ್ನು ವಿ.ಎಸ್. ಶಿರಹಟ್ಟಿ ಮಠ ರವರು ಬರೆದಿರುವ' ಹೂವಿನ ಹಂದರ' ಎಂಬ ಕೃತಿಯಿಂದ ಆಯ್ದುಕೊಳ್ಳಲಾಗಿದೆ.

ಯಾರು ;- ಶ್ರೀ ಕೃಷ್ಣಹೇಳಿದನು.

ಯಾರಿಗೆ : - ಸುಧಾಮನಿಗೆ ಹೇಳಿದನು.

ಯಾವಾಗ : - ಸುಧಾಮನು ಶ್ರೀ ಕೃಷ್ಣನ ಬಳಿ ಸಹಾಯ ಕೇಳಲು ಯೋಚಿಸುತ್ತಿದ್ದ ಸಂದರ್ಭದಲ್ಲಿ ತಕ್ಷಣ ಈ ಮಾತನ್ನು ಕೃಷ್ಣ ಹೇಳಿದನು ಸುಧಾಮನು ನನಗೇನು ಬೇಡ ನಿನ್ನ ಸತ್ಕಾರ ಒಂದೇ ಸಾಕು ಎಂದನು.

**27.** ಪ್ರಸ್ತುತ ಗದ್ಯಭಾಗವನ್ನು ವಿ.ಎಸ್. ಶಿರಹಟ್ಟಿ ಮಠರವರು ಬರೆದಿರುವ' ಹೂವಿನ ಹಂದರ' ಎಂಬ ಕೃತಿಯಿಂದ ಆಯ್ದುಕೊಳ್ಳಲಾಗಿದೆ.

ಯಾರು ;- ಸುಧಾಮನ ಹೆಂಡತಿ ಹೇಳಿದಳು.

ಯಾರಿಗೆ : - ಸುಧಾಮನಿಗೆ.

ಯಾವಾಗ : - ಗುಡಿಸಿಲಿನ ಜಾಗದಲ್ಲಿ ಅರಮನೆಯನ್ನು ಸುಧಾಮನು ಇದು ಹೇಗೆ ಸಾಧ್ಯ ಎಂದು ಹೆಂಡತಿಯನ್ನು ಕೇಳಿದಾಗ ಹೆಂಡತಿ ನಗುತ್ತಾ ಈ ಮಾತನ್ನು ಹೇಳಿದಳು.

**28.** ಯಾರು - ಸುಧಾಮ

ಯಾರಿಗೆ - ಹೆಂಡತಿಗೆ

ಯಾವಾಗ - ಹೆಂಡತಿಯು ಬಡತನದಿಂದ ಸಂಕಟ ಪಡುತ್ತಿರುವ ಸಂದರ್ಭದಲ್ಲಿ ಕೃಷ್ಣನ ಸಹಾಯ ಕೇಳಿ ಎಂದು ಹೇಳುವಾಗ ಶ್ರೀಕೃಷ್ಣನ ಜೊತೆ ಗುರುಕುಲದಲ್ಲಿ ಕಳೆದ ದಿನಗಳನ್ನು ನೆನೆದು

ಸುಧಾಮ ಹೇಳುತ್ತಾನೆ.

**29.** ಯಾರು - ಹೆಂಡತಿ
ಯಾರಿಗೆ - ಸುಧಾಮನಿಗೆ
ಯಾವಾಗ - ಸುಧಾಮ ತನ್ನ ಸ್ನೇಹಿತ ಕೃಷ್ಣನ ಅಪಾರ ಪ್ರೀತಿ ಸ್ನೇಹ ಗೌರವದ ಬಗ್ಗೆ ಹೇಳಿದಾಗ ನಿಮ್ಮ ಸ್ನೇಹಿತನ ಬಳಿ ಮಕ್ಕಳಿಗೋಸ್ಕರವಾರೂ ಹೋಗಿ ಸಹಾಯ ಕೇಳಿ ಎಂದು ಹೇಳುತ್ತಾಳೆ.

**30.** ಯಾರು - ಸುಧಾಮ
ಯಾರಿಗೆ - ಕೃಷ್ಣನಿಗೆ
ಯಾವಾಗ - ಸುಧಾಮ ಶ್ರೀಕೃಷ್ಣನ ಅರಮನೆಗೆ ಬಂದಾಗ ಅವನ ಆತ್ಮೀಯ ಆತಿಥ್ಯವನ್ನು ನೀಡಿ. ನಂತರ ಗುರುಕುಲದಲ್ಲಿ ಕಳೆದ ದಿನಗಳನ್ನು ನೆನೆಯುತ್ತಾ ಅಲ್ಲಿ ಇವರು ಮಾಡಿದ ತುಂಟಾಟದ ಬಗ್ಗೆ ನೆನೆಯುವ ಸಂದರ್ಭದಲ್ಲಿ ಬರುವ ವಾಕ್ಯವಿದು.

**31.** ಯಾರು - ಮಕ್ಕಳು
ಯಾರಿಗೆ - ಸುಧಾಮನಿಗೆ
ಯಾವಾಗ - ಸುಧಾಮನು ಶ್ರೀಕೃಷ್ಣನ ಅರಮನೆಗೆ ಸಹಾಯ ಕೇಳಲು ಹೋಗಿ ಏನು ಕೇಳದ ತನ್ನ ಮನೆಗೆ ಬಂದಾಗ ತನ್ನ ಸುಂದರವಾದ ಮನೆ ಕಂಡು ಹೆಂಡತಿ ಮಕ್ಕಳು ಹೊಸಬಟ್ಟೆ ಧರಿಸಿದ್ದನ್ನು ಕಂಡು ಮಗಳು ಸುಧಾಮನಿಗೆ ಹೇಳಿದ ಮಾತು.

**VI. 32.**

1 – ಇ
2 – ಅ
3 – ಉ
4 – ಈ
5 – ಆ

**VII.**

**33.** ಕೂದಲು.
**34.** ಮೊಟ್ಟೆ.

**VIII. 35.**

"ವೇದ ಸುಳ್ಳಾದರು ಗಾದೆ ಸುಳ್ಳಾಗದು" ಎಂಬ ನಾಣ್ಣುಡಿಯಂತೆ ಪ್ರತಿಯೊಂದು ಗಾದೆಯೂ ಮಾನವನ ಜೀವನಕ್ಕೆ ಅತ್ಯಗತ್ಯವಾದ ಸಂದೇಶವನ್ನು ನೀಡುತ್ತದೆ. "ಕೈ ಕೆಸರಾದರೆ ಬಾಯಿ ಮೊಸರು" ಎಂಬ ಮಾತು ಮುಖ್ಯವಾಗಿ ಶ್ರಮ ಮತ್ತು ಅದರ ಪ್ರತಿಫಲದ ಮಹತ್ವವನ್ನು ಸಾರುತ್ತದೆ. ಸೋಮಾರಿಯಾಗಿ ಕುಳಿತರೆ ಜೀವನ ಸಾಗುವುದಿಲ್ಲ. ಬದುಕಿನಲ್ಲಿ ಸುಖವನ್ನು ಕಾಣಬೇಕಾದರೆ ಮೊದಲು ಕಷ್ಟಪಡಲು ಸಿದ್ಧರಿರಬೇಕು. ಒಬ್ಬ ವಿದ್ಯಾರ್ಥಿಯು ಹಗಲಿರುಳು ಕಷ್ಟಪಟ್ಟು ಓದಿದರೆ ಮಾತ್ರ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಗಳಿಸಲು ಸಾಧ್ಯ. ಯಾವುದೇ ಕೆಲಸವನ್ನು ಇದು ಸಣ್ಣ ಕೆಲಸ ಅಥವಾ ಕಷ್ಟ ಕೆಲಸ ಎಂದು ಕಡೆಗಣಿಸಬಾರದು. ಕಷ್ಟವಿಲ್ಲದೇ ಸುಖ ಸಿಗಲು ಸಾಧ್ಯವಿಲ್ಲ ಆದ್ದರಿಂದ ನಾವು ಮಾಡುವ ಕೆಲಸದಲ್ಲಿ ಪ್ರಾಮಾಣಿಕವಾದ ಶ್ರಮ ಹಾಕಿದಾಗ ಅದರ ಫಲವು ಮೊಸರಿನಷ್ಟೇ ಮಧುರವಾಗಿರುತ್ತದೆ ಎಂಬುದೇ ಈ ಗಾದೆಯ ಆಶಯವಾಗಿದೆ.

**IX. 36.** ವಿದ್ಯಾರ್ಥಿಗಳು ಆಲೋಚಿಸಿ ಸಂಭಾಷಣೆಯನ್ನು ಪೂರ್ಣಗೊಳಿಸುವರು.

**X**. **37**. ವಿದ್ಯಾರ್ಥಿಗಳು ಆಲೋಚಿಸಿ ಸಂಭಾಷಣೆಯನ್ನು ತನ್ನದೇ ಆದ ಮಾತುಗಳಲ್ಲಿ ವ್ಯಕ್ತಪಡಿಸುವರು.

**XI.38.** ಶಿಕ್ಷಕರು ಕ್ಯೂಆರ್ ಕೋಡ್ ಮೂಲಕ ಸ್ಕ್ಯಾನ್ ಮಾಡಿ ವಿಡಿಯೋವನ್ನು ಮಕ್ಕಳಿಗೆ ವೀಕ್ಷಿಸಲು ಹೇಳಿ ಅದರ ಬಗ್ಗೆ ಪ್ರಶ್ನೆಗಳನ್ನು ಕೇಳಿ ಉತ್ತರವನ್ನು ದೃಢೀಕರಿಸಿಕೊಳ್ಳುವುದು.

## ಗದ್ಯಪಾಠ - 4

# ಡಾ. ರಾಜಕುಮಾರ

ಮಾದರಿ ಉತ್ತರಗಳು

**I.**

1. ಗಾಜನೂರಿನಲ್ಲಿ
2. ಗುಬ್ಬಿವೀರಣ್ಣ
3. ಗೌರವ ಡಾಕ್ಟರೇಟ್

**II.**

4. ಆಗಮ ಸಂಧಿ
5. 1929
6. ಲೋಪಸಂಧಿ
7. ಪುನೀತ್ ರಾಜಕುಮಾರ್
8. ಸವಿ + ಕನ್ನಡ

**III.**

9.

1 - ಆ
2. – ಇ
3. – ಅ
4. – ಉ
5. – ಈ

**IV.**

10. ಎಚ್‌ಎಲ್‌ಎನ್ ಸಿಂಹರವರು ಮುತ್ತುರಾಜ ಎಂಬ ಹೆಸರನ್ನು ರಾಜಕುಮಾರ ಎಂದು ಬದಲಾಯಿಸಿದರು .
11. ರಾಜಕುಮಾರವರು ಸಂಪತ್ತಿಗೆ ಸವಾಲ್ ಸಿನಿಮಾದಿಂದ ಗಾಯನ ಆರಂಭಿಸಿದರು
12. ರಾಜಕುಮಾರರವರ ಪತ್ನಿಯ ಹೆಸರು ಪಾರ್ವತಮ್ಮ
13. ರಾಜಕುಮಾರ ನಾಯಕ ನಟರಾಗಿ ಅಭಿನಯಿಸಿದ ಮೊದಲ ಚಲನಚಿತ್ರ ಬೇಡರ ಕಣ್ಣಪ್ಪ
14. ಮುತ್ತು ರಾಜ ಎಂಬುದು ರಾಜಕುಮಾರರವರ ಮೊದಲ ಹೆಸರಾಗಿದೆ.
15. ರಾಜಕುಮಾರರ ತಂದೆ ಪುಟ್ಟಸ್ವಾಮಯ್ಯ ತಾಯಿ ಲಕ್ಷಮ್ಮನವರು.
16. "ಕರ್ನಾಟಕ ರತ್ನ" ಎಂಬುದು ಕರ್ನಾಟಕ ಸರ್ಕಾರವು ರಾಜಕುಮಾರ್ ಅವರಿಗೆ ನೀಡಿದ ಅತ್ಯುಚ್ಚ ಪುರಸ್ಕಾರವಾಗಿದೆ.

**V.**

17. **ಅಲ್ಲಿ + ಅಲ್ಲಿ = ಅಲ್ಲಲ್ಲಿ** = ಲೋಪ ಸಂಧಿ
18. ಮರ + ಅನ್ನು =ಮರವನ್ನು= ಆಗಮ ಸಂಧಿ
19. ಬೆಟ್ಟ + ತಾವರೆ =ಬೆಟ್ಟದಾವರೆ = ಆದೇಶ ಸಂಧಿ
20. ಮೈ + ತೊಳೆ =ಮೈದೊಳೆ = ಆದೇಶ ಸಂಧಿ
21. ಹೊಳೆ + ಅಲ್ಲಿ ಹೊಳೆಯಲ್ಲಿ = ಆಗಮ ಸಂಧಿ

**VI.**

22. ರಾಜಕುಮಾರ ಅವರು ಅಭಿನಯಿಸಿದ ಸಾಮಾಜಿಕ ಚಿತ್ರಗಳು ಸಂಧ್ಯಾ ರಾಗ ಸನಾದಿ ಅಪ್ಪಣ್ಣ ಜೀವನ ಚೈತ್ರ ಕಸ್ತೂರಿ ನಿವಾಸ ಬಂಗಾರದ ಮನುಷ್ಯ ದೇವತಾ ಮನುಷ್ಯ.

**23.** ಡಾ. ರಾಜಕುಮಾರ್ ಅವರಿಗೆ ದೊರೆತಿರುವ ಪ್ರಶಸ್ತಿಗಳೆಂದರೆ 1979ರಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ಗೌರವ ಡಾಕ್ಟರೇಟ್ ಪದವಿ ನೀಡಿ ಪುರಸ್ಕರಿಸ್ಸಿತು ಕೇಂದ್ರ ಸರ್ಕಾರ ಇವರ ಕಲಾ ಸೇವೆಗೆ "ಪದ್ಮವಿಭೂಷಣ" ಪ್ರಶಸ್ತಿಯನ್ನು ನೀಡಿ ಗೌರವಿಸಿದೆ ಜೀವಮಾನದ ಸಾಧನೆಗಾಗಿ ಭಾರತ ಸರ್ಕಾರವು "ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ" ನೀಡಿ ಗೌರವಿಸಿದೆ. ಕರ್ನಾಟಕ ಸರ್ಕಾರವು "ಕರ್ನಾಟಕ ರತ್ನ" ಪ್ರಶಸ್ತಿ ನೀಡಿ ಗೌರವಿಸಿದೆ.

**24.** ರಾಜಕುಮಾರ್ ಅವರು ಅಭಿನಯಿಸಿದ ಭಕ್ತಿ ಪ್ರಧಾನವಾದ ಚಿತ್ರಗಳೆಂದರೆ ಭಕ್ತಿವಿಜಯ ಓಹಿಲೇಶ್ವರ ಶ್ರೀಕೃಷ್ಣಗಾರುಡಿ ಭಕ್ತಕುಂಬಾರ ಸಂತ ತುಕಾರಾಂ ಮತ್ತು ಭಕ್ತಕನಕದಾಸ ಮುಂತಾದವುಗಳು.

**25.** ರಾಜಕುಮಾರ್ ಎಂಬ ಸಮ್ಮೋಹಕ ಪ್ರತಿಭೆಗೆ ಮನಸೋತ ಕನ್ನಡಿಗರು ಅವರನ್ನು ನಟ ಸಾರ್ವಭೌಮ ಕಲಾಕಸ್ತುಭ ಕಲಾಕೇಸರಿ ವರನಟ ರಸಿಕರ ರಾಜ ಗಾನಗಂಧರ್ವ ಕನ್ನಡದ ಕಣ್ಮಣಿ ಮುಂತಾದ ವಿಶೇಷಣ-ಬಿರುದುಗಳನ್ನು ನೀಡಿದ್ದಾರೆ.

**26.** ಅಶಕ್ತ ಕಲಾವಿದರ ನೆರವಿಗಾಗಿ ರಾಜಕುಮಾರ್ ಅವರು ಅನೇಕ ರಸಸಂಜೆ ಕಾರ್ಯಕ್ರಮಗಳನ್ನು ನೆಡೆಸಿ ಹೃದಯ ಸಂಪತನ್ನತೆ ಮೆರೆದಿದ್ದಾರೆ.

**VII.**

**27.** ನಟರಾಗಿ ಮಾತ್ರವಲ್ಲದೆ ಅನನ್ಯ ಕನ್ನಡ ಪ್ರೀತಿಗಾಗಿಯೂ ನಾಡು ಡಾ. ರಾಜಕುಮಾರ್ ಅವರನ್ನು ಸದಾ ಸ್ಮರಿಸುತ್ತದೆ. ಎಂತಹ ಆಮಿಷ ಒಡ್ಡಿದರೂ ಅವರು ಕನ್ನಡ ಬಿಟ್ಟು ಬೇರೆ ಭಾಷೆಯ ಚಿತ್ರಗಳಲ್ಲಿ ಅಂತಹ ಕನ್ನಡ ಪ್ರೀತಿ ಅವರದು. ಕರ್ನಾಟಕದಲ್ಲಿ ಕನ್ನಡ ಭಾಷೆಗೆ ಆದ್ಯತೆ ಮಾನ್ಯತೆಗಳು ದೊರಕಬೇಕೆಂಬ ಸಂಕಲ್ಪದಿಂದ ಆರಂಭಿಸಿದ "ಗೋಕಾಕ್ ಚಳುವಳಿ"ಗೆ ಧುಮುಕಿದ ರಾಜಕುಮಾರ ಅವರು ಕನ್ನಡಿಗರ ಹೋರಾಟಕ್ಕೆ ಬಲತಂದರು.

**28.** ಡಾ. ರಾಜಕುಮಾರ್ ಅವರು ತಮ್ಮ ಸೊಗಸಾದ ಕಂಠ ಮತ್ತು ಹಾಡುಗಾರಿಕೆಯಿಂದ "ಗಾನಗಂಧರ್ವ" ಎನಿಸಿದರು. ಸಂಪತ್ತಿಗೆ ಸವಾಲ್ ಚಿತ್ರದ "ಯಾರೇ ಕೂಗಾಡಲಿ ಊರೆ ಹೋರಾಡಲಿ" ಎಂಬ ಗೀತೆಯು ರಾಜಕುಮಾರ್ ಅವರನ್ನು ಹಿನ್ನೆಲೆ ಗಾಯಕರನ್ನಾಗಿ ಪರಿಚಯಿಸಿತು. ಇವರು ನೂರಾರು ಚಲನಚಿತ್ರ ಗೀತೆಗಳು ಸಾವಿರಾರು ಭಕ್ತಿಗೀತೆಗಳನ್ನು ಅನೇಕ ಭಾವಗೀತೆಗಳನ್ನು ಹಾಡಿದ್ದಾರೆ. ಜೀವನ ಚೈತ್ರ ಚಿತ್ರದ 'ನಾದಮಯ ಈ ಲೋಕವೆಲ್ಲ ನಾದಮಯ' ಎಂಬ ಅದ್ಭುತ ಗಾಯನಕ್ಕಾಗಿ "ರಾಷ್ಟ್ರಪ್ರಶಸ್ತಿಯು" ಮುಡಿಗೇರಿತು.

**29.** ಬಾಲ್ಯದಲ್ಲಿಯೇ ಮುತ್ತುರಾಜರಿಗೆ ಬಡವರ ಕಷ್ಟ ಕಂಡು ಮರುಗುವ ಗುಣವಿತ್ತು ಶಾಲೆಯಲ್ಲಿ ಕೂತಿದ್ದರು ಅವರ ಬಡತನ ಹಸಿವು ಕಷ್ಟಗಳತ್ತ ಹೊರಳುತ್ತಿತ್ತು. ಇದರೊಂದಿಗೆ ಹಳ್ಳಿಗಾಡಿನ ಸುಪ್ರಸನ್ನತೆ ಸುಂದರ ಮುಗ್ಧತೆಯಿಂದ ಇವರ ಬಾಲ್ಯ ಕೂಡಿತ್ತು.

**30.** ರಾಜಕುಮಾರರ ಕುಟುಂಬವು ಕನ್ನಡ ಚಿತ್ರರಂಗದ ದೊಡ್ಡ ಮನೆಯೆನಿಸಿದೆ. ಶ್ರೀಮತಿ ಪಾರ್ವತಮ್ಮನವರು ಚಿತ್ರ ನಿರ್ಮಾಪಕರಾಗಿ ದೊಡ್ಡ ಸಾಧನೆ ಗೈದರೆ ಮಕ್ಕಳಾದ ರಾಘವೇಂದ್ರ ರಾಜಕುಮಾರ್ ಶಿವರಾಜ್ ಕುಮಾರ್ ಪುನೀತ್ ರಾಜಕುಮಾರ್ ನಟರಾಗಿ ಗಾಯಕರಾಗಿ ನಾಡಿನ ಜನಮನ ಗೆದ್ದಿದ್ದಾರೆ.

**VIII.**

**31.**

**ಕವಿ: ಡಾ|| ಎಚ್. ಎಸ್. ಸತ್ಯನಾರಾಯಣ**

**ಸ್ಥಳ:** ಚಿಕ್ಕಮಗಳೂರು

**ಕೃತಿಗಳು:** ಅಪೂರ್ವ ಒಡನಾಟ ಕುವೆಂಪು ಅಲಕ್ಷಿತರೆದೆಯ ದೀಪ ಕಣ್ನೋಟ ನುಡಿಚಿತ್ರ ಪನ್ನೀರಳೆ ನಗೆಮೊಗದ ಅಜ್ಜ ಮಾಸ್ತಿ ಬಿದಿರ ತಡಿಕೆ ಗಿರೀಶ್ ಕಾರ್ನಾಡ್ ಬದುಕು ಬರಹ.

**ಪ್ರಶಸ್ತಿ:** ಉದಯೋನ್ಮುಖ ವರ್ಧಮಾನ ಪ್ರಶಸ್ತಿ ಸಾಹಿತ್ಯ ಪರಿಷತ್ತಿನ ದತ್ತಿ ಬಹುಮಾನ ಹಿರೇಮಲ್ಲೂರು ಈಶ್ವರನ್ ರಾಜ್ಯ ಪ್ರಶಸ್ತಿ ಅತ್ಯುತ್ತಮ ಉಪನ್ಯಾಸಕ ಪ್ರಶಸ್ತಿ.

**IX. 32.** **1.** ಎ)

**2.** ಸಿ)

**3.** ಸಿ)

**X. 33.** ಶೀರ್ಷಿಕೆ ಹೆಸರು- ಪ್ರಾಮಾಣಿಕತೆ

*** *** ***

## ಗದ್ಯಪಾಠ – 5

# ಧನ್ಯವಾದ ಹೇಳಿದ ಕೊಕ್ಕರೆ

### ಮಾದರಿ ಉತ್ತರಗಳು

**I.**

1. ಸಿ) ಕೊಕ್ಕರೆ
